ಕರ್ನಾಟಕ ವಿಧಾನ ಸಭೆ

ಶುಕ್ರವಾರ 8ನೇ ಆಗಸ್ಟ್ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10–20 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪ ರವರು)

ಪೀಠವನ್ನು ಅಲಂಕರಿಸಿದ್ದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಮಂಡ್ಯ ಜಿಲ್ಲೆಯ ರೈತರು ಮಂಡ್ಯ ಬಂದ್ ಮಾಡಲು ನೀಡಿರುವ ಬಗ್ಗೆ

ಶ್ರೀ ಪಿ.ಜಿ. ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ರೈತರು ಮಂಡ್ಯ ಬಂದ್ ಆಚರಣೆಯನ್ನು ಮಾಡಲಿಕ್ಕೆ ಕರೆಯನ್ನು ಕೊಟ್ಟಿದ್ದಾರೆ. ಶ್ರೀ ಜಿ. ಮಾದೇಗೌಡರು ರೈತ ಸಂಘದ ಅಧ್ಯಕ್ಷರು.....

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವೊತ್ತು ಸಾಂಗ್ಲಿಯಾನರವರ ಸ್ಟೇಟ್‌ಮೆಂಟ್ ಪತ್ರಿಕೆಗಳಲ್ಲಿ ಬಂದಿದೆ.........

ಅಧ್ಯಕ್ಷರು : ಯಾರಾದರೊಬ್ಬರು ಮಾತನಾಡಿ. ನಾಲ್ಕಾರು ಜನರು ಒಟ್ಟಿಗೆ ಮಾತನಾಡುವುದರಿಂದ ಅದನ್ನು ಬರೆದುಕೊಳ್ಳಬೇಡಿ. All the three are speaking

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ನಕಲಿ ಸ್ಟಾಂಪ್ ಪೇಪರ್ ಹಗರಣದ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೆ.ಆರ್. ಎಸ್ ನಲ್ಲಿ 85 ಅಡಿ ನೀರಿದ್ದು ನೀರಾವರಿಗೋಸ್ಕರ ನೀರನ್ನು ಬಿಡಲು.........

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ರೈತರ ಬಂದ್ ಆಚರಣೆ ಬಗ್ಗೆ ನಾನು ನಿಮಗೆ ತಿಳಿಸಿರುತ್ತೇನೆ. ನನಗೂ ಸ್ವಲ್ಪ ಅವಕಾಶವನ್ನು ಮಾಡಿಕೊಡಿ.

ಗೊಂದಲ

(ಆ) ನಕಲಿ ಸ್ಟಾಂಪ್ ಪೇಪರ್ ಹಗರಣ ಕುರಿತು ಪತ್ರಿಕೆಯಲ್ಲಿ ಶ್ರೀ ಸಾಂಗ್ಲಿಯಾನರವರು ಹೇಳಿಕೆ ನೀಡಿರುವ ಬಗ್ಗೆ ಚರ್ಚೆ

+ **ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ನಕಲಿ ಸ್ಟಾಂಪ್ ಪೇಪರ್ ಹಗರಣದ ಬಗ್ಗೆ ನಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. 80,000 ಕೋಟಿ ರೂಪಾಯಿಗಳ ಹಗರಣ...

ಅಧ್ಯಕ್ಷರು : ನಮ್ಮ ಅಜೆಂಡಾ ಪ್ರಕಾರ .....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಾಗಾದರೆ ಇದನ್ನು ಸಿಬಿಐ ಗೆ ಕೊಟ್ಟು ಬಿಡಲಿ, ಇವರು ಏಕೆ ಹಿಂದೇಟನ್ನು ಹಾಕುತ್ತಿದ್ದಾರೆ.

ಅಧ್ಯಕ್ಷರು : ನಾವು ರೂಲ್ 69 ಪ್ರಕಾರ ಈಗಾಗಲೇ ಅದನ್ನು ಡಿಸ್‌ಕಸ್ ಮಾಡಿರುತ್ತೇವೆ. We have already discussed under Rule-69

(+ ಈ ಚಿಹ್ನೆ ಮಾನ್ಯ ಸದಸ್ಯ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಶ್ರೀ ಜಗದೀಶ್ ಶೆಟ್ಟರ್ : ಸಾಂಗ್ಲಿಯಾನವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ರಾಜ್ಯದ ಹಿರಿಯ ಅಧಿಕಾರಿಯಾಗಿದ್ದವರು.

ಅಧ್ಯಕ್ಷರು : ರಿಟೈರ್ಡ್ ಆಫೀಸರ್ ದಿನಕ್ಕೊಂದು ಸ್ಟೇಟ್‌ಮೆಂಟನ್ನು ಕೊಡುತ್ತಾರೆ. ಅವರ ಮಾತು ಎಲ್ಲವನ್ನೂ ನಾವು ನಂಬುವುದಕ್ಕಾಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ ಇದನ್ನು ಸಿಬಿಐಗೆ ಕೊಡಿ ಎಂದು ಶ್ರೀ ಡಿ. ವಿ. ಸದಾನಂದಗೌಡ ಮಾನ್ಯ ಅಧ್ಯಕ್ಷರೆ ಇದು ಒಂದು ಪ್ರಮುಖ ಪ್ರಶ್ನೆ...

ಗೊಂದಲ

ಅಧ್ಯಕ್ಷರು : ದಯವಿಟ್ಟು ನಾನು ಯಾರ ಮಾತನ್ನು ಕೇಳಲಿ ಹೇಳಿ ಆಯಿತು ಕ್ವೊಶ್ಚನ್ ಅವರ್ ಆದ ಮೇಲೆ ತೆಗೆದುಕೊಳ್ಳೋಣ I have no objection.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಿರಿಯ ಅಧಿಕಾರಿ ಸಾಂಗ್ಲಿಯಾನರವರು ಹಿಂದೆ ಆ ಕರೀಂಲಾಲ್‌ನ ಸ್ಟೇಟ್‌ಮೆಂಟನ್ನು ತೆಗೆದುಕೊಂಡಿದ್ದಾರೆ. ಅವರ ತಮ್ಮನ ಸ್ಟೇಟ್‌ಮೆಂಟ್‌ನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಅವನು ಕ್ಲಿಯರ್ ಕಟ್ ಆಗಿ ಹೇಳಿದ್ದಾನೆ.

ಅಧ್ಯಕ್ಷರು : ಎವರಿಡೇ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಇದ್ದೇ ಇರುತ್ತದೆ. ಅದಕ್ಕೆಲ್ಲಾ ನಾವು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡುವುದಕ್ಕಾಗುತ್ತದೆಯೇ?

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಾಗಾದರೆ ಪತ್ರಿಕೆಯಲ್ಲಿ ಬರುವುದೆಲ್ಲವೂ ಸುಳ್ಳೇ, ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಜೈಲಿನ ಅಧಿಕಾರಿಗಳಿಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟು ಪ್ರತ್ಯೇಕವಾದ ರೂಂ ಇನ್ನಿತರ ವ್ಯವಸ್ಥೆಯನ್ನು ಮಾಡಿದ್ದಾರೆ.

ಅಧ್ಯಕ್ಷರು : ಕ್ವೊಶ್ಚನ್ ಅವರ್ ಆದ ಮೇಲೆ ಅಲಾ ಮಾಡುತ್ತೇನೆಂದು ಹೇಳಿದ್ದೇನೆ ಅಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಸರ್ಕಾರ ಇನ್‌ವಾಲ್ವ್‌ಮೆಂಟ್ ಆಗಿರುವಂತದ್ದು, ಸರ್ಕಾರದ ಮಂತ್ರಿಗಳು ಇದರಲ್ಲಿ ಇನ್‌ವಾಲ್ವ್‌ಮೆಂಟ್ ಆಗಿರುವಂಥವರು, ಇದನ್ನು ಸಿಬಿಐ ಗೆ ಕೊಡಬೇಕು ಎನ್ನುವುದರ ಬಗ್ಗೆ ನಾವು ಮೊದಲಿನಿಂದಲೂ ಒತ್ತಾಯವನ್ನು ಮಾಡುತ್ತಿದ್ದೇವೆ ಇವತ್ತು ಶ್ರೀ ಸಾಂಗ್ಲಿಯಾನರವರ ಒಂದು ಸ್ಟೇಟ್‌ಮೆಂಟ್ ಬಂದಿದೆ. ಪತ್ರಿಕೆಯಲ್ಲಿ ಅವರ ಇಂಟರ್‌ವ್ಯೂ ಬಂದಿದೆ. ಇದು ಬರೀ ಊಹೆ–ಪೋಹೆಯಂತಹ ಸುದ್ದಿ ಅಲ್ಲ ಅದರಲ್ಲಿ ಅವರು ಕ್ಲಿಯರ್ ಕಟ್ ಆಗಿ ಹೇಳುತ್ತಿದ್ದಾರೆ. ಇಲ್ಲಿ ಏನು ಹೇಳುತ್ತಿದ್ದಾರೆಂದರೆ... ಅದು ಈ ರೀತಿ ಇದೆ. "Sangliana said" Karim Lala claimed to have high level political connections at the Central level and elsewhere and also knew many senior police officers in different states. "He was like a goldmine to them." ನಂತರ ಈ ರೀತಿ ಹೇಳಿದ್ದಾರೆ.

" When Roshan Baig's name kept cropping up now and then. the Government was not inclined to hand it over to the CBI," he said adding "May be because Roshan Baig was found to be deeply involved or some such political fear, Sangliana, however, made it clear, and,

Wrote to the state Government suggesting the case be hande over to the CBI "I thought the investigation should be handed over the CBI as it has all-India Jurisdiction."

ಈ ರೀತಿಯಾಗಿ ಸಾಂಗ್ಲಿಯಾನರವರು ಸ್ಪೆಷಲ್ ಇಂಟರ್‌ವ್ಯೂನಲ್ಲಿ ಹೇಳಿದ್ದಾರೆ. ಇದರ ರಾಜಕೀಯ ವ್ಯಕ್ತಿಗಳು, ಅವರಿಗೆ ಸಂಬಂಧಪಟ್ಟಂತಹ ಅವರ ಸಂಬಂಧಿಕರು ಇರಬಹುದು ಹಿರಿಯ ಡಿಐಜಿ ಪ್ರಸನ್ಸ್ ಇರಬಹುದು; ಇನ್ನಿತರ ಹಿರಿಯ ಅಧಿಕಾರಿಗಳು ಎಂದು ಕ್ಲಿಯರ್ ಕಟ್ಟಾಗಿ ಹೇಳಿದ್ದಾರ ನಾನು ಜೈಲಿನ ಡಿಜಿಪಿಯಾಗಿದ್ದಾಗ ಕರಿಂಲಾಲ್ ಅಲ್ಲಿ ನಡೆಸಿದ್ದ ಅವಾಂತರಗಳು ಗಮನಕ್ಕೆ ಬಂತು ಪ್ರತ್ಯೇಕ ಕೋಣೆ ಮತ್ತು ಟಿ.ವಿ. ಮೊಬೈಲ್, ಫೋನು ಇತ್ಯಾದಿ ಸೌಕರ್ಯ ಒದಗಿಸಲು ಜೈಲ ಅಧಿಕಾರಿಗಳಿಗೆ 25 ಲಕ್ಷ ರೂಪಾಯಿಗಳನ್ನು ನೀಡಿದ್ದನು ಗಮನಿಸಿ ನಾನು ಕೂಡಲೇ ಅವನ ಕೋಣೆಗ ಮತ್ತೊಬ್ಬ ಖೈದಿಯನ್ನು ಹಾಕಿದೆ ಎಂದು ಹೇಳಿದ್ದಾರೆ. ರಾಜ್ಯದ ಡಿಐಜಿ ಹಾಗೂ ಐಜಿ ಮಟ್ಟದ ಹಲವು ಪೊಲೀಸ್ ಅಧಿಕಾರಿಗಳು ಲಂಚ ಪಡೆದಿದ್ದರಿಂದ ಕರೀಂಲಾಲ್‌ನನ್ನು ಮೊದಲು ಹಿಡಿಯಲು ಆಗಲಿಲ್ಲವೆಂದು ಆರೋಪಿಸಿದರು.' ಅಂದರೆ ಇಷ್ಟೊಂದು ಗಂಭೀರವಾದಂತಹ ಆಪಾದನೆಯನ್ನು ಇವತ್ತು ಸಾಂಗ್ಲಿಯಾನರವರು ಮಾಡಿದ್ದಾರೆ. ಅವರು ಕರೀಂಲಾಲನ ಸ್ಟೇಟ್‌ಮೆಂಟ್‌ನ್ನು ತೆಗೆದುಕೊಂಡು ಟೇಪ್ ಮಾಡಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ಆ ಟೇಪ್‌ನ ಬಗ್ಗೆ ನಾವು ಪ್ರಸ್ತಾಪವನ್ನು ಮಾಡಿದ್ದೆವು ಆಗ ಸರ್ಕಾರದಿಂದ ಅದರ ಬಗ್ಗೆ ರೆಸ್ಪಾನ್ಸ್ ಬರಲಿಲ್ಲ; ಮತ್ತು ಉಳಿದಿದ್ದ ಇನ್ನಿತರ ಹೇಳಿಕೆಗಳನ್ನು ನಾವು...

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಇದು ತುಂಬಾ ಇಂಪಾರ್ಟ್‌ಟೆಂಟ್ ಇಷ್ಯೂ ಆಗಿದೆ. ನಮ್ಮ ಅಧಿಕಾರಿಗಳಿಗೆ ಒಂದು ಚಾಳಿ ಏನಿದೆ ಎಂದರೆ ಅವರು ಅಧಿಕಾರದಲ್ಲಿದ್ದಾಗ ಕಣ್ಣುಮುಚ್ಚಿಕೊಂಡು ಕುಳಿತಿರುತ್ತಾರೆ. ಹಿಂದೆ ಇದ್ದ ಡಿಜಿಪಿಗಳನ್ನೆಲ್ಲರನ್ನೂ ನಾವು ನೋಡಿದ್ದೇವೆ. ಅಧಿಕಾರದಲ್ಲಿದ್ದಾಗ ಅವರಿಗೆ ನೈತಿಕತೆ ಇದ್ದರೆ ಇದನ್ನು ಹೇಳಬೇಕಾಗುತ್ತದೆ,ರೆಸಿಸ್ಟ್ ಮಾಡಬೇಕಾಗುತ್ತದೆ. ನಾನು ಇವರಿಗೆ ಏನು ಸಲಹೆ ಮಾಡುವುದೆಂದರೆ, ಈಗ ಕೇಂದ್ರ ಸರ್ಕಾರದವರಲ್ಲಿ ಸಿಬಿಐ ಇರುವುದು, ಅನೇಕ ರಾಜ್ಯಗಳಲ್ಲಿ ಈ ಜಾಲವು ಹಬ್ಬಿಕೊಂಡಿದೆ, ಏತಕ್ಕಾಗಿ ಅವರು ಇದನ್ನು ನೇರವಾಗಿ ಸಿಬಿಐಗೆ ಕೊಡಬಾರದು? ಇದು ನನಗೆ ಅರ್ಥವಾಗುತ್ತಿಲ್ಲ ಮಾನ್ಯ ಅಧ್ಯಕ್ಷರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಿಂಧ್ಯಾರವರ ಪ್ರಕಾರ...

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರದ್ದು ಮುಗಿದ ಮೇಲೆ ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ರಾಜ್ಯ ಸರ್ಕಾರದವರೂ ಕೂಡ ಇದರ ಬಗ್ಗೆ ಹೇಳಲಿ ಅಧಿಕಾರಿಗಳ ಚಾಳಿ ನನಗೆ ಅರ್ಥವಾಗುತ್ತಿಲ್ಲ. ಸಾಂಗ್ಲಿಯಾನರವರ ಬಗ್ಗೆ ಮತ್ತೊಬ್ಬರ ಬಗ್ಗೆಯಾಗಲಿ ನನಗೆ ಗೌರವ ಇರತಕ್ಕಂತಹದ್ದು ಬೇರೆ ವಿಚಾರವಾಗಿದೆ. ಬಟ್ ಇವರು ಅಧಿಕಾರದಲ್ಲಿದ್ದಾಗ ಏತಕ್ಕಾಗಿ ಈ ಮಾತನ್ನು ಹೇಳುವುದಿಲ್ಲ? Why do they not resist it? If they really have the moral right to do that, they must display when they were in power. They should resigh and get out. We have seen many judges who have resigned and get out. Take the example of K.S. Hegde for that matter. He resisted Mrs. Gandhi and resigned and get out. And there are so many....ಭೀಮ್ ಭಟ್ ಎಂಬುವರು ಹೈಕೋರ್ಟ್ ಜಡ್ಜ್ ಆಗಿದ್ದರು, ರಾಜೀನಾಮೆ ಕೊಟ್ಟು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ ....

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೆ, ಮಾನ್ಯ ಸಿಂಧ್ಯಾರವರು ಮಾತನಾಡಿದ ನಂತರ ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನನು ಮಾತನಾಡುವುದಕ್ಕೆ ತಾವು ನನಗೆ ಅವಕಾಶವನ್ನು ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಅಧಿಕಾರದಲ್ಲಿದ್ದಾಗಲೇ ಈ ಮಾತನ್ನು ಹೇಳಬೇಕು. ಅವರು ಈಗ ಹೇಳಿರುವ ಬಗ್ಗೆ ಅದರ ಬಗ್ಗೆ ಸರ್ಕಾರ ಏನು ಮಾಡುತ್ತದೆ ಅದು ಸರ್ಕಾರಕ್ಕೆ ಬಿಟ್ಟಿರುವಂತಹ ವಿಷಯ. ಅವರು ಅಧಿಕಾರದಲ್ಲಿದ್ದಾಗಲೇ ಈ ಮಾತನ್ನು ಹೇಳಬೇಕಾಗಿತ್ತು. ಅವರು ಹೇಳಲಿಲ್ಲವೆಂದ ಮೇಲೆ ಇವತ್ತಾದರೂ ಆ ವಿಷಯಗಳು ಹೊರಗೆ ಬಂದಿದೆ. ಅವರು ನಿವೃತ್ತರಾದ ಮೇಲೂ ಕೂಡ ಹೇಳಿಕೆಯನ್ನು ಕೊಟ್ಟಿದ್ದಾರಲ್ಲ, ಇದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಚೀಫ್ ಮಿನಿಸ್ಟರ್‌ರವರು ಏನು ಹೇಳಿಕೆಯನ್ನು ಕೊಟ್ಟರು ಒಂದು ಪುಸ್ತಕವನ್ನು ಬರೆದವರು ಅದರ ಬಗ್ಗೆ ಇನ್‌ವಾಲ್‌ಮೆಂಟ್ ಇವತ್ತು ವೀರಪ್ಪನ್ ಬಗ್ಗೆ ಇರುವಂತಹದ್ದು, ಇವತ್ತು ಈ ಒಂದು ಕರಿಂಲಾಲ್‌ನ ಹಗರಣ 80 ಸಾವಿರ ಕೋಟಿ ರೂ ಯಷ್ಟು ನಕಲಿ ಸ್ಟಾಂಪ್ ಹಗರಣವಾಗಿದೆ. ಅದಕ್ಕಿಂತ ಜಸ್ತಿ ಇದ್ದರೂ ಇರಬಹುದು, ಈಗಾಗಲೇ ಮಹಾರಾಷ್ಟ್ರ ಸರ್ಕಾರದ ಪೊಲೀಸರು ಎಷ್ಟು ತೀವ್ರಗತಿಯಿಂದ ಈ ಒಂದು ಹಗರಣದ ಬಗ್ಗೆ ತೀವ್ರ ಗತಿಯಿಂದ ಏನು ಮಾಡುತ್ತಿದ್ದಾರೆ, ಮೊನ್ನೆ ದಿನ ಪುಣೆ ಪೊಲೀಸರು ಬಂದರು, ಇಲ್ಲಿ ರಷೀದ್ ಕುಲಕರ್ಣಿ ಯಾರು ಎಂದರೆ ಕರೀಂಲಾಲನ ಪರವಾಗಿ ಕೋರ್ಟಿನಲ್ಲಿ ವಾದ ಮಾಡುತ್ತಿದ್ದ ಆ ವಕೀಲರನ್ನು ಅರೆಸ್ಟ್ ಮಾಡಿಕೊಂಡು ಹೋದರು. ಅವನನ್ನು ನಮ್ಮವರು ಏತಕ್ಕಾಗಿ ಅರೆಸ್ಟ್ ಮಾಡಿಕೊಂಡು ಹೋಗಲಿಲ್ಲ? ಇವತ್ತು ಇಲ್ಲಿ ಮಹಾರಾಷ್ಟ್ರ ಸರ್ಕಾರ ಅಪರಾಧಿ ಕರಿಂಲಾಲ ಇದ್ದಾನೆ, ಅವನ ತಮ್ಮ ಮತ್ತು ಅವರ ಕುಟುಂಬ ಅವರ ಆಸ್ತಿ ಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕಂತಹ ಕೆಲಸವನ್ನು ಮಹಾರಾಷ್ಟ್ರ ಪೊಲೀಸ್‌ನವರು ಮಾಡಿದ್ದಾರೆ. ಆದರೆ ನಮ್ಮ ಸರ್ಕಾರ ಇವತ್ತು ಆ ಕರಿಂಲಾಲನ ಆಸ್ತಿ ಇರಬಹುದು, ಆತನ ತಮ್ಮನ ಆಸ್ತಿ ಇರಬಹುದು, ಅಥವಾ ಸಂಬಂಧಿಕರ ಆಸ್ತಿಪಾಸ್ತಿಗಳನ್ನು ಇವತ್ತು ಸೀಜ್ ಮಾಡುವಂತಹ ಕೆಲಸ ನಮ್ಮ ರಾಜ್ಯಸರ್ಕಾರದಿಂದ ಆಗಲಿಲ್ಲ. ಏಕೆ ಎಂಬುದನ್ನು, ನಾವು ವಿಚಾರ ಮಾಡಬೇಕಾಗಿದೆ. ಬೆಳಗಾಂನ ಜಿಲ್ಲಾ ಪೊಲೀಸ್ ಅಧಿಕಾರಿ ಜನವರಿ 2002 ರಲ್ಲಿ ಶ್ರೀ ದಯಾನಂದ ಎಂಬ ಎಸ್‌ಪಿಯವರು ಇದ್ದರು, ಅವರು ಈ ಕರಿಂಲಾಲನ ಅಣ್ಣನಿಂದ 7 ಲಕ್ಷ ರೂಪಾಯಿಗಳ ನಗದು ಮತ್ತು ಚಿನ್ನವನ್ನು ಖಾನಾಪುರದಲ್ಲಿ ವಶಮಾಡಿಕೊಂಡರು ಅದನ್ನು ಅವರ ಅಣ್ಣನ ಕಡೆಯಿಂದ ಸೀಜ್ ಮಾಡಿಕೊಂಡಿದ್ದರು. ಮುಂದೆ ಕೇವಲ ಒಂದೇ ಗಂಟೆಯ ಅವಧಿಯಲ್ಲಿ ಅವನ ಅಣ್ಣ ಅಜೀಂ ತೆಲಗಿ ಮತ್ತು ಅವರ ಹಿಂದೆ ಯಾರು ಇದ್ದಾರೆ, ಅದು ಅವರಿಗೆ ಸಂಬಂಧಪಟ್ಟಿರುವಂತಹದ್ದು, ಆ ಮೊತ್ತವನ್ನು ಸೀಜ್ ಮಾಡಿರುವುದನ್ನು ನ್ಯಾಯಾಲಯಕ್ಕೆ ಕೊಡಲಿಲ್ಲ, ಹಾಗಾದರೆ ಏತಕ್ಕಾಗಿ ತಿಳಿಸಲಿಲ್ಲ. ಅದನ್ನು ಹಾಗೆಯೇ ವಾಪಸ್ಸು ಕೊಟ್ಟುಬಿಟ್ಟರು, ಇವತ್ತು ಅಲ್ಲಿದ್ದಂತಹ ಎಸ್‌ಪಿ ಟ್ರಾನ್ಸ್‌ಫರ್ ಆಗಿದ್ದಾರೆ, ಈ ಅಜೀಂತೇಲಗಿ, ಕೆಪಿಸಿಸಿ ಮೈನಾರಿಟಿ ಸೆಲ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದಾನೆ ಮತ್ತು ಅವನ ಅಣ್ಣ ಇದರಲ್ಲಿ ರಾಜಕೀಯ ಸಂಬಂಧಗಳು ಇನ್ನಿತರ ಸಂಬಂಧಗಳು ಎಲ್ಲವೂ ಇರುವುದರಿಂದ ಅದರಲ್ಲಿ ಮಂತ್ರಿಗಳ ಹೆಸರು ಇನ್‌ವಾಲ್ವ್ ಆಗಿರುವುದರಿಂದ

ಇಲ್ಲಿ ನೀವು ಈ ರೀತಿ ಮಾಡುತ್ತಿದ್ದೀರಿ ಇಲ್ಲಿ ಏನು ಹೇಳುತ್ತಾರೆ ಸಾಂಗ್ಲಿಯಾನರವರು ಅಂದರೆ "Other independent sources also confirmed that xxx and Telgi were involved in import of petroleum products and selling kerosene for adulteration of petrol." ಅಂದರೆ ಕರಿಂಲಾಲ ಏನಿದ್ದಾನೆ ಅವನ ಜೊತೆ ಇವತ್ತು ನಮ್ಮ ಸಂಪುಟ ಮಂತ್ರಿಗಳಾದ XXX ಅವರ ತಮ್ಮ ಅದರಲ್ಲಿ ಇನ್‌ವಾಲ್‌ಮೆಂಟ್ ಇದ್ದಾರೆಂಬುದನ್ನು ಸಾರಸಗಟಾಗಿ ಹೇಳಿದ್ದಾರೆ. ಹಾಗಾದರೆ ಇದನ್ನು ಸರ್ಕಾರ ಸಿಬಿಐಗೆ ಕೊಡುವ ಬಗ್ಗೆ ಏತಕ್ಕಾಗಿ ಹಿಂದೇಟು ಹಾಕುತ್ತಿದೆ? ಇವತ್ತು ಕೇಂದ್ರ ಸರ್ಕಾರ ಈಗಾಗಲೇ ರಾಜ್ಯಸರ್ಕಾರಕ್ಕೆ ಸಿಬಿಐಗೆ ಕೊಡಿ ಎಂದು ಪತ್ರವನ್ನು ಬರೆದಿದೆ. ಇವರು ಸಿಬಿಐ ಗೆ ಕೊಡುವುದಕ್ಕೆ ಏತಕ್ಕಾಗಿ ಹಿಂದೇಟು ಹಾಕುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಖರ್ಗೆಯವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿದರು. ಇದಕ್ಕೊಂದು ಸ್ಪೆಷಲ್ ಕೋರ್ಟ್ ಮಾಡುತ್ತೇವೆಂದು ಹೇಳಿದರು. ಸ್ಪೆಷಲ್ ಕೋರ್ಟ್‌ನ್ನು ಯಾವಾಗ ಮಾಡಿದ್ದಾರೆ?

ಅಧ್ಯಕ್ಷರು : ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅವರಿಗೇನಾದರೂ ಆಫೀಸ್ ಕೊಟ್ಟಿದ್ದಾರೆಯೇ? ಅವರಿಗೆ ಸಿಬ್ಬಂದಿ ಕೊಟ್ಟಿದ್ದಾರೆಯೇ?

ಅಧ್ಯಕ್ಷರು : ನೀವು ಈಗ ಏನು ಮಾತನಾಡುತ್ತಿದ್ದಿರೋ ಎಲ್ಲವೂ ಕೋರ್ಟಿನ ಮುಂದೆ ಇದೆ, ಸಬ್‌ಜ್ಯುಡೀಸ್ ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲ.

Mr. Speaker : Everything is urder subjudice.

ಇದರಲ್ಲಿ ಸ್ಪೆಷಲ್ ಎನ್‌ಕ್ವಯರಿ ನಡೆಯುತ್ತಿದೆ. ಎಫ್‌ಐಆರ್ ಫೈಲ್ ಮಾಡಿದ್ದಾರೆ. ಸಬ್‌ಜ್ಯುಡೀಸ್ ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಇದು ಸಬ್‌ಜ್ಯುಡಿಸ್ ಆಗುವುದಿಲ್ಲ. ಏನೂ ಆಗುವುದಿಲ್ಲ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು : ಆಯಿತು ಬೇಗ ಮುಗಿಸಿ ಮಾನ್ಯ ರಾಮದಾಸ್‌ರವರು ತಾವು ಕುಳಿತುಕೊಳ್ಳಿ, ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ. ಮಧ್ಯೆ ಏತಕ್ಕಾಗಿ ಡಿಸ್ಟರ್ಬ್ ಮಾಡುತ್ತೀರಿ?

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳಿಗೆ ಒಂದು ಚಟ ಬಂದಿದೆ ಎಂದು ಕಾಣಿಸುತ್ತದೆ. ಅವರಿಗೆ ಏನು ಚಟ ಬಂದಿದೆ ಎಂದರೆ. ನಾನೂ ಕೂಡ ಸಚಿವನಾಗಿದ್ದೆ. ಸಾಂಗ್ಲಿಯಾನವರವರು ಐ.ಜಿ. ಆಗಿದ್ದರು. ಏನು ದುರಂತವೆಂದರೆ, ...

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಇದನ್ನು ಸಿಬಿಐಗೆ ಕೊಡುವುದಕ್ಕೆ ಏತಕ್ಕಾಗಿ ಹಿಂದೇಟು ಹಾಕುತ್ತಿದೆ. ಇವತ್ತು XXX ನಿಜವಾಗಿಯೂ ಹೇಳುವುದಾದರೆ ತಕ್ಷಣ ರಾಜೀನಾಮೆ ಕೊಟ್ಟು ಬರಬೇಕಾಗಿತ್ತು. ಅವರು ಎತಕ್ಕಾಗಿ ರಾಜೀನಾಮೆಯನ್ನು ಕೊಡುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಸಚಿವರ ಮೇಲೆ ನೀವು ಮಾತನಾಡಬೇಕಾದರೆ ಅವರ ಬಗ್ಗೆ ಹೇಳಬೇಕೆಂದರೆ ನೋಟೀಸ್‌ನ್ನು ಕೊಡಬೇಕು. ಅವರಿಗೆ ಪರ್ಸನಲ್ ಆಗಿ ನೋಟೀಸನ್ನು ಕೊಡಬೇಕು. He will reply.

(XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.)

ಅಧ್ಯಕ್ಷರು : ಅವರಿಗೆ ಇಂಡಿವಿಜ್ಯುಯಲ್ ಆಗಿ ನೋಟೀಸನ್ನು ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೂರು ವಿಚಾರಗಳನ್ನು ಸಾಂಗ್ಲಿಯಾನರವರು ಹೊರಗೆ ಹೇಳಿರಬಹುದು.

ಶ್ರೀ ಜಗದೀಶ್ ಶೆಟ್ಟರ್ : ರೋಷನ್ ಬೇಗ್‌ರವರ ಮೇಲೆ ಆಪಾದನೆ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಹೌಸನಲ್ಲಿ ತಾವು ಹೇಳುವಾಗ ಜವಾಬ್ದಾರಿ ಇಟ್ಟುಕೊಂಡು ಹೇಳಬೇಕು.

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೆ, ನನಗೆ ಕೊಡುವಾಗ ಅವರಿಗೂ ಕೂಡ ಇಂಡಿವಿಜ್ಯುಯಲ್ ಆಗಿ ನೋಟೀಸನ್ನು ಕೊಡಬೇಕು. Re Same copy has to be sent to Roshan Baig also

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೆ ನೋಟೀಸ್‌ನ್ನು ಕೊಟ್ಟರೆ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ರೋಷನ್ ಬೇಗ್ ಎಂದು ಹೇಳಿ ತಾವು ನೋಟೀಸ್ ಕೊಡಿ. ತಾವು ಕರೆಸಿ ಅವರು ಬಂದು ಉತ್ತರವನ್ನು ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಏನು ಆಗಿದೆ ಎಂದು ಹೇಳಬೇಕಾಗಿಲ್ಲ. ಇವತ್ತು XXX ರವರ ತಮ್ಮನ ಮೇಲೆ ಇದರಲ್ಲಿ ಇನ್‌ವಾಲ್ವ್‌ಮೆಂಟ್ ಇರುವುದು. ಇವತ್ತು ಸಾಂಗ್ಲಿಯಾನರವರ ಸ್ಟೇಟ್‌ಮೆಂಟ್ ಮೇಲೆ ಕ್ಲಿಯರ್ ಆಗಿದೆ. ಏಕೆಂದರೆ ಇಲ್ಲಿ....

ಅಧ್ಯಕ್ಷರು : ಈಗ ಅರ್ಥವಾಯಿತು. ಮಾನ್ಯ ಶೆಟ್ಟರ್‌ರವರೆ ನೀವು ಏನು ಹೇಳುತ್ತಿದ್ದೀರಿ ಅದು ನನಗೆ ಅರ್ಥವಾಗಿದೆ. ನೀವು ನನಗೆ ಅರ್ಥಮಾಡಿಸಬೇಕಾಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿ.... ಒಂದೇ ಒಂದು ನಿಮಿಷ.

ಶ್ರೀ ಜಗದೀಶ್ ಶೆಟ್ಟರ್ : ಸಿಬಿಐ ತನಿಖೆಗೆ ಕೊಡಬೇಕು. ಇವತ್ತು ಇದರಲ್ಲಿ ಮಂತ್ರಿಗಳ ಇನ್‌ವಾಲ್‌ಮೆಂಟ್ ಇರುವುದರಿಂದ....

ಅಧ್ಯಕ್ಷರು : ನೀವು ಮಂತ್ರಿಗಳ ಹೆಸರನ್ನು ಎತ್ತುವಾಗ ನೀವು ನೋಟೀಸ್‌ನಲ್ಲಿ ಅವರ ಹೆಸರನ್ನು ಮೆನ್‌ಷನ್ ಮಾಡಿಲ್ಲ.

Sri Malikarjuna Karge : If he stands to prove. let him give notice.

ಶ್ರೀ ಬಿ. ಸೋಮಶೇಖರ್ : ನಾವು ಮಂತ್ರಿಗಳ ಬಗ್ಗೆ ಆರೋಪವನ್ನು ಮಾಡುವುದಿಲ್ಲ.

ಅಧ್ಯಕ್ಷರು : ನೋ, ನೋ ಅವರು ಪ್ರೆಸ್ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರಷ್ಟೆ XXX ಎಂದು ಸೆಪರೇಟಾಗಿ : ಏನು ಬರೆದಿಲ್ಲ. ನಿಮ್ಮ ನೋಟೀಸ್‌ನಲ್ಲಿ ಸಪರೇಟಾಗಿ ಏನೂ ಬರೆದಿಲ್ಲ. You have not given a separte notice.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ನೇಜಾಟೀಸ್ ಕೊಟ್ಟು ಮಾತನಾಡಲಿ ಇಲ್ಲದಿದ್ದರೆ ವಿತ್‌ಡ್ರಾ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಸಾಂಗ್ಲಿಯಾನರವರು ಹಿರಿಯ ಅಧಿಕಾರಿಗಳಾಗಿದ್ದಾರೆ.

(XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಡಿಸ್‌ಕಷನ್‌ಗೆ ಅಡ್ಡಿ ಬರುವುದಿಲ್ಲ. ನೀವು ಪರ್ಮಿಷನ್ ಕೊಟ್ಟರೆ ಅವರು ಎಷ್ಟು ಬೇಕಾದರೂ ಮಾತನಡಲಿ, ಇದು ಎಷ್ಟೋ ಸಾರಿ ಆಗಿದೆ. ಪುನ: ಡಿಸ್‌ಕಷನ್ ಮಾಡೋಣ, ಅದರ ಬಗ್ಗೆ ಹೇಳೋಣ. ಆದರೆ ನನ್ನದು ಒಂದೇ ಒಂದು ರಿಕ್ವೆಸ್ಟ್ ಏನೆಂದರೆ, ಈ ಮೆಂಬರ್ ಆಬ್ಸೆಂಟ್ ಇದ್ದಾರೆ, ಅಥವಾ ಅವರಿಗೆ ನೋಟೀಸ್ ಹೋಗಿಲ್ಲ, ನೀವು ನೋಟೀಸನ್ನು ಕೊಟ್ಟು ಅವರ ಇನ್‌ವಾಲ್ವ್‌ಮೆಂಟ್ ಇದೆ ಎಂದು ಅದರ ಬಗ್ಗೆ ತಾವು ಹೇಳುತ್ತಿದ್ದೀರಿ, ಸಾಂಗ್ಲಿಯಾನ್ ಎಂದು ಹೇಳಬೇಡಿ. ಸಾಂಗ್ಲಿಯಾನರವರ ಆಧಾರದ ಮೇಲೆಯೇ ನಾನೂ ಕೂಡ ಹೇಳುತ್ತಿದ್ದೇನೆ. ಸಾಂಗ್ಲಿಯಾನರವರ ಸ್ಟೇಟ್‌ಮೆಂಟ್ ಮೇಲೆ ನಿಮಗೆ ನಂಬಿಕೆ ಇದ್ದರೆ ಇದನ್ನು ನಾನು ನಂಬಿದ್ದೇನೆ, ನೂರಕ್ಕೆ ನೂರರಷ್ಟು ಅವರ ಇನ್‌ವಾಲ್ವ್‌ಮೆಂಟ್ ಇದೆ ಎನ್ನತಕ್ಕಂತಹ ಮಾತನ್ನೂ ನೀವು ಹೇಳಿ ಆ ಚಾಲೆಂಜನ್ನು ಅವರೂ ಕೂಡ ತೆಗೆದುಕೊಂಡು ನಿಮಗೆ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು : ಅವರ ಇಂಡಿವಿಜುಯಲ್ ಮೆಂಬರ್‌ಗೆ ನೋಟಿಸ್‌ನ್ನು ಕೊಡಬೇಕು.

ಶ್ರೀ ಎ. ರಾಮದಾಸ್ : ನಾವು ಸ್ವಾಗತ ಮಾಡುತ್ತೇವೆ. ಅವರಲ್ಲಿ ಕರೆಸಿ

ಶ್ರೀ ಡಿ.ವಿ. ಸದಾನಂದಗೌಡ : ಇಲ್ಲಿರುವಂತಹದ್ದು ಖರ್ಗೆಯವರಿಗೆ ಇಷ್ಟೆಲ್ಲಾ ಅವರು ಕಾಳಜಿಯಿಂದ ಹೇಳುತ್ತಿದ್ದಾರೆ. ಸಚಿವರ ಮೇಲೆ ಯಾವುದೇ ರೀತಿಯ ಆರೋಪವನ್ನು ಮಾಡುತ್ತಿಲ್ಲ.

ಗೊಂದಲ

ಅಧ್ಯಕ್ಷರು : ನಿಮ್ಮ ನಾಯಕರು ಮಾತನಾಡುತ್ತಿದ್ದಾರಲ್ಲಾ. Let him complete

ಗೊಂದಲ

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೇ, ತಾವು ಮಾತನಾಡಿ. The parliamentary Affairs Minister, wants to say some thing. I have allowed Mr. Chandregowda to speak. ತಾವು ದಯವಿಟ್ಟು ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಕೇಳೋಣ. ದಯವಿಟ್ಟು, ಒಂದು ನಿಮಿಷ ಕುಳಿತುಕೊಳ್ಳಿ. ಶೆಟ್ಟರ್‌ರವರೇ,

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಇಷ್ಟೆಲ್ಲಾ ತಾವು ಹೇಳುತ್ತಿದ್ದೀರಿ. ಅವರ ಇನ್‌ವಾಲ್ವ್‌ಮೆಂಟ್ ಇಲ್ಲ ಹಾಗಾದರೆ ಇದನ್ನು ಸಿಬಿಐಗೆ ಕೊಟ್ಟು ಬಿಡಲಿ.

ಅಧ್ಯಕ್ಷರು : ನೋ, ಅವರು ಏನೋ ಒಂದು ನಿಮಿಷ ಮಾತನಾಡುತ್ತಾರೆ. ಆಮೇಲೆ ನೀವು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಗೊಂದಲ

ಅಧ್ಯಕ್ಷರು : ಒಂದು ನಿಮಿಷ ತಡೆಯಿರಿ, ಅವರು ಏನು ಹೇಳಬೇಕು. ತಾವು ಹೇಳಿರುವುದು ಪೂರ್ತಿ ನನಗೆ ಅರ್ಥವಾಗಿದೆ, ಫರ್ದರ್ ನೀವು ಎಕ್ಸ್‌ಪ್ಲೇಸನ್ ಮಾಡುವುದು ಬೇಕಾಗಿಲ್ಲ. ಓದಿ ನೋಡಿದೆ, ನೋಟೀಸ್‌ನಲ್ಲಿದೆ, ಪೇಪರ್‌ನ್ನು ತರಿಸಿಕೊಂಡು ನೋಡಿದ್ದೇನೆ. ಅವರೇನೂ ಉತ್ತರ ಹೇಳುವ ಬಗ್ಗೆ ಹಿಂಜರಿಯುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಕೇಳುವುದಿಷ್ಟೆ, ನಿವೃತ್ತ ಪೊಲೀಸ್ ಅಧಿಕಾರಿಗಳು ಪುಸ್ತಕವನ್ನು ಬರೆಯುತ್ತಾಲೆ, ಹೇಳಿಕೆಯನ್ನು ಕೊಡುತ್ತಾರೆ, ಪ್ರೊಬ್ ಮಾಡುತ್ತಾರೆ. ಚುನಾವಣೆಗೆ ನಿಲ್ಲುತ್ತಾರೆ

ಅದು ಅಂತಿಮವೇ? ಅವರು ಹೇಳಿರುವುದೇ ಸರಿಯೇ? ಅವರು ಬರೆದಿರುವ ಪುಸ್ತಕವು ಸರಿಯೇ? ನೋಡಿ ಅದರಿಂದ ನಾನು ಏನು ಕೇಳುವುದೆಂದರೆ.....

ಶ್ರೀ ಎ. ರಾಮದಾಸ್ : ಇಲ್ಲವೆಂದು ತಾವು ಪ್ರೂಪ್ ಮಾಡಿ, ಸರಿಯಿಲ್ಲವೆಂದು ತಾವು ಪ್ರೂಪ್ ಮಾಡಿ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಬೇಕಾದ ಹಾಗೆ ಮನಸೋ ಇಚ್ಛೆ ಮಾತನಾಡುತ್ತೀರಾ?

ಶ್ರೀ ಡಿ.ವಿ. ಸದಾನಂದಗೌಡ : ಅಧಿಕಾರದ ದಬ್ಬಾಳಿಕೆಯಿಂದ ಅಧಿಕಾರಿಗಳು ಇವತ್ತು ಕೆಲಸ ಮಾಡಲಾಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಅವರು ಹೇಳಿದ್ದನ್ನು ಆದರಿಸಿ ಕೆಲಸ ಮಾಡಬೇಕೆಂದು ಹೇಳಿದರೆ

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಅವರ ಮೇಲೆ ಹಾಗಾದರೆ ಕ್ರಮವನ್ನು ತೆಗೆದುಕೊಂಡಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ತೆಗೆದುಕೊಂಡಿದ್ದೇವೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಅವರು ನೇರವಾಗಿ ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿವೃತ್ತ ಅಧಿಕಾರಿಗಳ ಹೇಳಿಕೆಯನ್ನು ಆದರಿಸಿ ಸವನದಲ್ಲಿ ಚರ್ಚೆ ಮಾಡಬೇಕೆಂದು ಹೆಳಿದರೆ ಸಂಸದೀಯ ನಡವಳಿಕೆಯ ಭಾಗವೇ ಇದು?

ಶ್ರೀ ಜಗದೀಶ್ ಶೆಟ್ಟರ್ : ಮಂತ್ರಿಗಳ ಹೆಸರು ಇದರಲ್ಲಿ ಬಂದಿರುವುದರಿಂದ, ಮಂತ್ರಿಗಳ ತಮ್ಮನ ಹೆಸರು ಇದರಲ್ಲಿ ಬಂದಿರುವುದರಿಂದ.

ಅಧ್ಯಕ್ಷರು : ಆಯಿತು; ಅವರ ಬಗ್ಗೆ ನೋಟೀಸ್‌ನ್ನು ಕೊಟ್ಟು ಮಾತನಾಡಿ, ನೀವು ನೋಟೀಸ್‌ನ್ನೇ ಕೊಟ್ಟಿಲ್ಲ. XXX ಬಗ್ಗೆ ನಟೀಸ್‌ನ್ನು ಕೊಟ್ಟಿರುವುದಿಲ್ಲ. ನೀವು ಜನರಲ್ ನೋಟೀಸ್‌ನ್ನು ಕೊಟ್ಟಿದ್ದೀರಿ ಅಷ್ಟೆಯೇ ಹೊರತು XXX ಬಗ್ಗೆ ಕೊಟ್ಟಿರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾನು ಅವರ ತಮ್ಮನ ಬಗ್ಗೆ ಹೇಳುತ್ತಿದ್ದೇನೆ. ಸಾಂಗ್ಲಿಯಾನರವರು ಏನು ಹೇಳಿದ್ದಾರೆಂದರೆ..

ಅಧ್ಯಕ್ಷರು : ನನಗೆ ಅರ್ಥವಾಗಿದೆ ಸ್ವಾಮಿ, ತಾವು ಹೆಳುವ ಎಲ್ಲಾ ವಿಚಾರಗಳು ಅರ್ಥವಾಯಿತು. ಫರ್ದರ್ ನೀವು ಎಕ್ಸ್‌ಪ್ಲೇನ್ ಮಾಡಿ ಹೇಳಬೇಕಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಹೀಗಾಗಿ ಈ ಸರ್ಕಾರದಿಂದ ಇಂಪಾರ್ಶಿಯಲ್ ತನಿಖೆಯಾಗುವುದಕ್ಕೆ ಸಾಧ್ಯವಿಲ್ಲ. ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇದನ್ನು ಸಿಬಿಐಗೆ ಕೊಡಬೇಕು. ಆಯಿತು. That is your contention ನೀವು ಸಿಬಿಐಗೆ ಕಳುಹಿಸಿ ಎಂದು ಹೇಳುತ್ತಿದ್ದೀರಿ ಅಲ್ಲವೇ?

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಅವರನ್ನು ಕೇಳಿಕೊಂಡಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ನಾನು ನೇರವಾಗಿ I have requested the opposition Leader that I will intervene for two minutes. ಈಗ ನಾವು ಈ ವಿಚಾರದಲ್ಲಿ ನಮ್ಮ ಪಕ್ಷವೂ ಸಹ ಇದನ್ನು ಸಿಬಿಐವಿಚಾರಣೆಗೆ ಒಳಪಡಿಸಬೇಕೆಂದು 3 ವರ್ಷಗಳಿಂದಲೂ

(XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.)

ನಾವು ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ನಾನು ನೇರವಾಗಿ ಆಪಾದನೆಯನ್ನು ಮಾಡುತ್ತಿದ್ದೇನೆ. ಈ ಒಂದು ರ್‍ಯಾಕೆಟ್‌ನಲ್ಲಿ ಈ ಸರ್ಕಾರ ನೇರವಾಗಿ ಭಾಗಿಯಾಗಿದೆ. ಪರೋಕ್ಷವಾಗಿ ಇಲ್ಲದೇ ಇರಬಹುದು, ಪ್ರತ್ಯಕ್ಷವಾಗಿ ಇಲ್ಲದೇ ಇರಬಹುದು, ನೇರವಾಗಿ ಭಾಗಿಯಾಗಿದೆ ಎನ್ನುವುದನ್ನು ನಾನು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದೇನೆ. ಮತ್ತು ಈಗಲೂ ಹೇಳುವುದಕ್ಕೆ ಇಚ್ಚಪಡುತ್ತಿದ್ದೇನೆ. ಹೇಗೆ ಎಂದು ಹೇಳುತ್ತೇನೆ. I will come to that

ಗೊಂದಲ

ಶ್ರೀ. ಬಿ. ಸೋಮಶೇಖರ್ : ಹೇಗೆ ಎಂದು ನಾನು ಹೇಳುತ್ತೇನೆ.

ಗೊಂದಲ

ಅಧ್ಯಕ್ಷರು : ಪ್ರೂಫ್ ಇದೆಯಾ ಎಂದು ಕೇಳುತ್ತಿದ್ದಾರೆ. Where is the proof?

ಶ್ರೀ ಡಿ.ಬಿ. ಚಂದ್ರೇಗೌಡ : ಪ್ರಾಮಾಣಿಕವಾಗಿ ಕೆಲಸ ಮಾಡಿದಂಥ ಅಧಿಕಾರಿಗಳಿಗೆ ಕೊಡುವಂತಹ ಕೊಡುಗೆ ಇದು.

ಶ್ರೀ. ಬಿ. ಸೋಮಶೇಖರ್ : ಹೇಗೆ ಎಂದು I am going to say.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಕೊಡುಗೆ ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಅಧಿಕಾರಿಗಳಿಗೆ ಇನ್‌ವೆಸ್ಟಿಗೇಷನ್ ಮಾಡಿರುವುದಕ್ಕೆ ರಾಜ್ಯಸರ್ಕಾರ ಪ್ರಾಮಾನಿಕವಾಗಿ ಕೆಲಸ ಮಾಡಿರುವುದಕ್ಕೆ ನೀವು ಕೊಡತಕ್ಕಂಥ ಕೊಡುಗೆ ಇದು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಾನು ನನ್ನ ಬಾಷಣವನ್ನು ಇನ್ನು ಮುಗಿಸಲೇ ಇಲ್ಲ. ಅಧ್ಯಕ್ಷರೆ, ನಾನು ಹೇಗೆ ಎಂದು ಹೆಳುತ್ತೇನೆ.

ಅಧ್ಯಕ್ಷರು : ತಾವು ಏನು ಹೆಳುತ್ತಿರೆಂಬುದು ದೇಶಕ್ಕೆಲ್ಲಾ ಗೊತ್ತಿದೆ.

ಶ್ರೀ ಬಿ. ಸೋಮಶೇಖರ್ : ಹೇಗೆ ಎಂದು ನಾನು ಹೇಳುತ್ತೇನೆ. ನಾನು ಅದಕ್ಕಾಗಿ ದಯವಿಟ್ಟು ಸಾವಧಾನದಿಂದ ಕೇಳಿದರೆ ಹೇಗೆ ಪರೋಕ್ಷವಾಗಿ How you have abetted.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ತಾವು ಯಾವುದಾದರೂ ಇದ್ದರೆ ಹೇಳಿ.

ಶ್ರೀ ಬಿ. ಸೋಮಶೇಖರ್ : ನಾನು ಹೇಳುತ್ತೇನೆ. Please listen to me.

ಶ್ರೀ ಕರಿಯಣ್ಣ : ಇದರ ಮೇಲೆ ಅನೇಕ ಸಾರಿ ಚರ್ಚೆಗಳು ನಡೆದು ಉತ್ತರವು ಕೊಟ್ಟು ಎಲ್ಲವೂ ಕೂಡ ಆಗಿದೆ.

ಶ್ರೀ ಬಿ. ಸೋಮಶೇಖರ್ : ನಾನು ಮಾಡನಾಡುವುದಕ್ಕೆ ಇವರು ಬಿಡುತ್ತಲೇ ಇಲ್ಲ. That is why I am going to tell you how you have abetted.

Sri D.B. Chandre Gowda : These are the people who are inpower these.

Sri. B.Somashekhar : Yes. I am going to say that.

Sri D.B. Chandre Gowda : That is a different matter. Let them own the responsibility. first.

Sri. B.Somashekhar : Yes. I am going to tell. ನಾನು ಹೇಳುತ್ತೇನೆ. ಕೇಳಿ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಈಗ ಇದರ ಬಗ್ಗೆ ಅನೇಕ ಸಾರಿ ಚರ್ಚೆ ನಡೆದಿದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನನಗೆ ಮತನಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ನಾನು ಮಾತನಾಡಿದ ಮೇಲೆ ಬೇಕಾದರೆ ಅವರು ಮಾತನಾಡಲಿ.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೆ, ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಪ್ಲೀಸ್, ನಾನು ಮಾತನಾಡಿದ ಮೇಲೆ ಅವರು ಮಾತನಾಡಲಿ,

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೆ, ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಈಗ ಮಂತ್ರಿಗಳು ಮಾತನಾಡಿದರೆ ಹೇಗೆ?

ಅಧ್ಯಕ್ಷರು : ಏನು ಮಾಡುವುದಕ್ಕಾಗುತ್ತದೆ? ನೀವು ಎದ್ದು ನಿಂತುಕೊಂಡು ಮಾತನಾಡುತ್ತಿಲ್ಲವೇ ಹಾಗೇಯೇ ಅವರು ಎದ್ದು ನಿಂತುಕೊಂಡಿದ್ದಾರೆ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು : ಮಾನ್ಯ ಸಚಿವರು ಮಾತನಾಡಲಿ, ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅವರು ಮಾತನಾಡಲಿ I have allowed point of order, Let him talk,

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಾನು ಡಿಸ್‌ಕಷನ್‌ನ್ನು ಮೊಟಕುಗೊಳಿಸಬೇಕು ಅಥವಾ ಏನಾದರೂ ಮಾಡಿ ಇದನ್ನು ಅಡ್ಡಿಪಡಿಸಬೇಕು ಎನ್ನುವುದು ನನ್ನ ಇಚ್ಛೆ ಇಲ್ಲ. ಈ ಕಡೆಯ ಸದಸ್ಯರು ಇಚ್ಛೆಯೂ ಕೂಡ ಇಲ್ಲ. ಅವರಿಗೆ ಮಾತನಾಡುವಷ್ಟು ಅವಕಾಶಗಳು ಸಿಗಲಿ, ಅವರು ಹೇಳುವಷ್ಟು ಹೇಳಲಿ, ನಾವು ಅದಕ್ಕೆ ಉತ್ತರವನ್ನು ಕೊಡುತ್ತೇವೆ ಆ ಮಾತು ಬೇರೆ ಒಬ್ಬ ನಿವೃತ್ತ ಅಧಿಕರಿ ಹೇಳಿದಂತಹದ್ದನ್ನು ಇವತ್ತು ಅಡ್ಜರ್ಸ್‌ಮೆಂಟ್ ಮೋಷನ್‌ನಲ್ಲಿ ಬರುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದು ಅದು ತಮಗೆ ಬಿಟ್ಟಿರುವುದು. ತಾವು ಏನು ನಿರ್ಣಯ ತೆಗೆದುಕೊಳ್ಳುತ್ತೀರಿ, ಆದರೆ ಮಾತನಾಡುವಾಗ ಅವರು ಕೆಲವು ಆಪಾದನೆಗಳನ್ನು ಮಾಡಿದ್ದಾರೆ, ಇದರಲ್ಲಿ ಮಂತ್ರಿಗಳು ಇನ್‌ವಾಲ್ವ್ ಆಗಿದ್ದಾರೆ ಸರ್ಕಾರ ಇನ್‌ವಾಲ್ವ್ ಆಗಿ ಎಲ್ಲವನ್ನೂ ಕೂಡ ಅವರು ಹೇಳಿದ್ದಾರೆ. ಅದರೆ ರೂಲ್ 328 ಏನು ಹೇಳುತ್ತದೆಂದರೆ:-

" No allegation of a defamatory or incriminatory nature shall be made by a member against any person unless the member has given previous intimation to the speaker and also to the Minister concerned so that the Minister may be able to make an investigation into the matter for the purpose of reply;

Provided that the speaker, ay at may time prohibit any member from making any such allegation if he is of opinion that such allegation

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

is derogatory to the dignity of the House. ಇಲ್ಲಿ ಅಧ್ಯಕ್ಷರೆ, ಅವರು ಸ್ಪೆಸಿಫಿಕ್ಕಾಗಿ ಚಾರ್ಜ್ ಮಾಡಬೇಕು ಎಂದು ಅವರ ಮನಸ್ಸಿನಲ್ಲಿದ್ದರೆ ಅಥವಾ Concerned ಮಿನಿಸ್ಟರ್ ಇನ್‌ವಾಲ್ವ್ ಇದ್ದಾರೆ ಎಂದು.....

Mr. Speaker : Let him complete the point of order. ತಮಗೆ ಗ್ಯಾರಂಟಿಯಾಗಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಅದಕ್ಕೆ ಏಕೆ ಗಲಾಟೆ ಮಾಡುತ್ತೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪದೇಪದೇ ಆ ಮಂತ್ರಿಗಳ ಹೆಸರನ್ನು ತೆಗೆದುಕೊಂಡು ಅವರು ಇದರಲ್ಲಿ ಇನ್‌ವಾಲ್ವ್ ಇದ್ದಾರೆ, ಹೀಗೆ ಎನ್ನತಕ್ಕಂಥದ್ದನ್ನು ಅವರು ಹೇಳಿದ್ದಾರೆ. ಸಾಂಗ್ಲಿಯಾನರವರು ಔಟ್‌ಸೈಡ್ ಹೇಳಿದ್ದಾರೆ. ಅದು ಮುಂದೆ ಅವರು ಏನು ಕೋರ್ಸು ತೆಗೆದುಕೊಳ್ಳುತ್ತಾರೋ, XXX ಅಥವಾ ಗೌರ್ನಮೆಂಟ್ as personal ಅದನ್ನು ನೋಡೋಣ ಆದರೆ ಅವರ ಸ್ಟೇಟ್‌ಮೆಂಟ್ ಮೇಲೆ ನಂಬಿಕೊಂಡು ನೀವು ಖಚಿತ ಎನ್ನತಕ್ಕಂತಹ ತಮ್ಮ ಅಭಿಪ್ರಾಯವಿದ್ದರೆ, ತಾವು ಕನ್ಸರ್ಡ್ ಮಿನಿಸ್ಟರ್‌ಗೆ ನೋಟೀಸ್‌ನ್ನು ಕೊಡಬೇಕು. ಸ್ಪೀಕರ್‌ರವರಿಗೆ ತಿಳಿಸಬೇಕು, ಇವರ ಬಗ್ಗೆ ಎತ್ತುತ್ತೇನೆಂದು ತಿಳಿಸಬೇಕು. ಅವರೂ ಕೂಡ ಅದಕ್ಕೆ ರಿಪ್ಲೈ ಕೊಡುತ್ತಾರೆ, ಅಲಿಗೇಷನ್ ಅನ್ನು ರಿಬಟ್ ಮಾಡುತ್ತಾರೋ ಬಿಡುತ್ತಾರೋ ಬಿಡುತ್ತಾರೋ ಅದಕ್ಕೆ ಅವರು ಉತ್ತರವನ್ನು ಕೊಡುತ್ತಾರೆ. ಆದರೆ ಈ ರೂಲ್ ಇದನ್ನು ಪ್ರಹಿಬಿಟ್ ಮಾಡುತ್ತದೆ ದಯವಿಟ್ಟು ಅವರ ಪರ್ಸನಲ್ ಅಲಿಗೇಷನ್ಸ್, ಮಿನಿಸ್ಟರ್‌ರವರ ಮೇಲಾಗಲಿ, ಅಥವಾ ಬೇರೆಯವರ ಮೇಲಾಗಲಿ ಮಾಡುವುದಕ್ಕೆ ಹೋಗಬಾರದು, ಆ ರೀತಿಯಾಗಿ ಮಾಡಬೇಕೆಂದು ಅವರ ಇಚ್ಛೆ ಇದ್ದರೆ ನೋಟೀಸ್‌ನ್ನು ಕೊಟ್ಟು ಮಾಡಲಿ, ಅದಕ್ಕೆ ತಕ್ಕಂತಹ ಉತ್ತರವನ್ನು ಕೂಡ ಸಂಬಂಧಪಟ್ಟವರು ಕೊಡುತ್ತಾರೆ. ಎರಡನೆಯದಾಗಿ ನನ್ನ ಮನವಿ ಏನೆಂದರೆ, ಈಗಾಗಲೇ ಈ ಕೇಸ್ ಕೋರ್ಟಿನ ಮುಂದೆ ಪೆಂಡಿಂಗ್ ಇದೆ, ಸುಮಾರು 10 ಕೇಸ್‌ಸ್ ಮೇಲೆ 4–5 ಕೇಸ್‌ಗಳು ಚಾರ್ಜ್‌ಶೀಟ್‌ನ್ನು ಹಾಕಿದ್ದಾರೆ ಇನ್ನು 2–3 ಕೇಸ್‌ಗಳಲ್ಲಿ ಇನ್‌ವೆಸ್ಟಿಗೇಷನ್‌ನ್ನು ಮಾಡಿಕೊಂಡು ಚಾರ್ಜ್‌ಶೀಟ್ ಹಾಕತಕ್ಕಂತಹದ್ದು ಇದೆ. ನಾಳೆ ದಿವಸ ಚಾರ್ಜ್‌ಶೀಟ್ ಹಾಕಿದಂತಹ ಕೇಸುಗಳ ಮೇಲೆಯೂ ಕೂಡ ಪರಿಣಾಮವಾಗಬಾರದು.

10.50 ಎ.ಎಂ.

ಮತ್ತು ಯಾವ ಒಂದು ಘನ ಉದ್ದೇಶದಿಂದ ಸರ್ಕಾರ ಈ ಒಂದು ಕೇಸಿನಲ್ಲಿ ಆಸಕ್ತಿಯನ್ನು ವಹಿಸಿ ಸ್ಪೆಷಲ್ ಟೀಮ್‌ಗಳನ್ನು ಕಾನ್ಸ್ಟಿಟ್ಯೂಟ್ ಮಾಡಿ ನಾವು ಈ ಕೆಲಸವನ್ನು ಮಾಡಿದ್ದಕ್ಕಾಗಿ ಇಡೀ ಭಾರತ ದೇಶದಲ್ಲೇ ನಮ್ಮ ಮಾತಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲ ನಾವು ಇಲ್ಲಿ ಇನ್ವೆಸ್ಟಿಗೇಶನ್ ಮಾಡಿ ಇವರನ್ನು ಹಿಡಿದುದಕ್ಕಾಗಿ ಬೇರೆ ಎಲ್ಲರೂ ಕೂಡ ಇವತ್ತು ಮಹಾರಾಷ್ಟ್ರ ಸರ್ಕಾರ, ಗುಜರಾತ್ ಸಕಾರ, ಪಶ್ಚಿಮ ಬಂಗಾಳ, ಡೆಲ್ಲಿಯವರೂ ಬಂದು ಬರವಣಿಗೆಯಲ್ಲಿ ಕೊಟ್ಟು ನಮಗೂ ಕೂಡ ಕೂಡ ಎನ್‌ಕ್ವೈರಿಗೆ ಕಳುಹಿಸಿಕೊಡಿ ಎಂದು ಕೇಳತಕ್ಕಂಥಾದ್ದನ್ನು ಮಾಡುತ್ತಿದ್ದಾರೆ. ಅವನು ಹತ್ತಾರು ವರ್ಷಗಳಿಂದಲೂ ಇದನ್ನೇ ಮಾಡುತ್ತಿರಬಹುದು. ಆದರೆ ಹತ್ತಾರು ವರ್ಷಗಳಿಂದ ಮಾಡಿದರೂ ಕೂಡ ಯಾರೂ ಅವನನ್ನು ಅರೆಸ್ಟ್ ಮಾಡಿ ಒಳಗೆ ಹಾಕಿರಲಿಲ್ಲ. ಅದರೆ ನಾವು ಅವನಿಗೆ ಅರೆಸ್ಟ್ ಮಾಡಿ ಒಳಗೆ ಹಾಕಿದ್ದೇವೆ. ಅಲ್ಲದೇನೇ ಸಾಕಷ್ಟು ಕೇಸುಗಳು 2002 ರಿಂದ ಇಲ್ಲಿಯವರೆಗೆ ಚಾರ್ಜ್‌ಶೀಟ್ ಹಾಕಿದ್ದರೂ ಕೂಡ ಸುಮರು ಒಂದರಿಂದ ಆರು Fast track, IInd B Bangalore, CCH-4 Bangalore ನಾನು ಆಮೇಲೆ ಅದರ ವಿವರಗಳನ್ನು ಹೇಳುತ್ತೇನೆ. ಅದಕ್ಕೆ ಒಂದು ದೃಷ್ಟಿಯಿಂದ ಇದು ಸಬ್‌ಜ್ಯುಡೀಸ್ ಆಗುತ್ತದೆ. ಆಮೇಲೆ ಏನು ಇನ್ವೆಸ್ಟಿಗೇಶನ್‌ನ್ನು ಸ್ಪೆಷಲ್ ಟೀಮ್‌ನವರು

(XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.)

ಮಾಡುತ್ತಿದ್ದಾರೆ, ಅವರ ಇನ್ವೆಸ್ಟಿಗೇಸನ್‌ಗೆ ಕೂಡ ಧಕ್ಕೆಯಾಗಬಾರದು ಎನ್ನತಕ್ಕಂಥಾದ್ದು ಕೂಡ ಇದೆ. ಒಬ್ಬ ಅಧಿಕಾರಿ ನಿವೃತ್ತಿಯಾದ ಮೇಲೆ ಹೊರಗೆ ತಕ್ಷಣ ಒಂದೊಂದು ಪುಸ್ತಕ ಬರೆಯುವುದು, ಹೊರಗೆ ಹೋದ ತಕ್ಷಣ ಒಂದೊಂದು ಹೇಳಿಕೆಯನ್ನು ಕೊಡುವುದು ಇದೇನು ಮಾಡುತ್ತಾರೆ, ಅವರಿಗೆ ಜವಾಬ್ದಾರಿ ಕೊಟ್ಟಾಗ ಒಬ್ಬರೂ ಮಾಡುವುದಿಲ್ಲ. ಆದರೆ ಜವಾಬ್ದಾರಿಯಿಂದ ನಿವೃತ್ತರಾದ ಮೇಲೆ ದೊಡ್ಡ ಹೀರೋಗಳಂತೆ ಮಾತನಾಡತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಎಸ್.ಟಿ.ಎಫ್.ನಲ್ಲಿ ಏನು ಆಯಿತು, ಇನ್ನೊಂದು ಕಡೆ ಏನಾಯಿತು, ಎಲ್ಲಾ ಕಡೆ ಕೂಡ ನಮಗೆ ಗೊತ್ತಿದೆ. ಆದರೆ ನಾನು ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅಥವಾ ಇದರ ಅಡ್ವಾಂಟೇಜನ್ನು ತೆಗೆದುಕೊಂಡು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾವು ನೀರುವ ನೋಡಬೇಕು. ಇವರೂ ಕೂಡ Other of secrecy ತೆಗೆದುಕೊಂಡಿರುತ್ತಾರೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿಗೆ ಟ್ರೈನಿಂಗ್‌ನಲ್ಲಿ ಕೂಡ ಅವರಿಗೆ ಇದನ್ನು ಹೇಳಿರುತ್ತಾರೆ. ಅವರು ಈ ಒಂದು code of Conduct ಪ್ರಕಾರ ನಡೆದುಕೊಳ್ಳತಕ್ಕಂಥಾದ್ದು ಬಹಳ ಉತ್ತಮ ನಾವು ಕೂಡ.....

ಗೊಂದಲ

Mr. Speaker : Let him first complete the point of order. I have to give my decision about the point of order.

ಗೊಂದಲ

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಕರಿಯಣ್ಣ :- ಎಲ್ಲರೂ ಹೀಗೆ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆದ್ದರಿಂದ ಅವರಿಗೆ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಯಾವುದೇ ಹಕ್ಕು ಇಲ್ಲ.

ಗೊಂದಲ

ಶ್ರೀ ಬಿ. ಸೋಮಶೇಖರ್ : ನಾನು ಇನ್ನೂ ಕಂಕ್ಲೂಡ್ ಮಾಡಿಲ್ಲ....

ಅಧ್ಯಕ್ಷರು : ನೋಡಿ ಅವರ ಪಾಯಿಂಟ್ ಆಫ್ ಆರ್ಡರ್ ಮೇಲೆ ನಾನು ನಿರ್ಣಯ ಕೊಡುತ್ತೇನೆ. ಆಮೇಲೆ ನೀವು ಮಾತನಾಡಿ. ಮಾನ್ಯ ಖರ್ಗೆಯವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೋ I uphold the point of order raised by Mr. Kharge.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಅವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನಾವೂ ಕೂಡ ಹೇಳಬೇಕಾಗುತ್ತದೆ. ಅಧ್ಯಕ್ಷರೇ, ಅವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದರಲ್ಲಿ ಏನೂ ಅರ್ಥ ಇಲ್ಲ.

Mr. Speaker : I uphold the point of order raised by Mr. Kaharge.

ಶ್ರೀ ಜಗದೀಶ್ ಶೆಟ್ಟರ್ : ತಾವು ದಯವಿಟ್ಟು ಅದನ್ನು ರಿವ್ಯೂ ಮಾಡಿ, ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ, ಅವರು ಇನ್ವೆಸ್ಟಿಗೇಷನ್ ನಡೆಸಿದ್ದಾರೆ ಎಂದು ಹೇಳಿದರು. ಅದಕ್ಕೆ ನಾನು ಏನು ಹೇಳಿದೆ ಎಂದರೆ ಇಲ್ಲಿ ಒಂದು ರಾಜಕೀಯ ಪ್ರಶ್ನೆ ಇರುವುದರಿಂದ ಇದರಲ್ಲಿ ನಿಷ್ಪಕ್ಷಪಾತವಾದಂಥ ತನಿಖೆ ಆಗುವುದಿಲ್ಲ ಎನ್ನುವಂಥ ಮಾತನ್ನು ಹೇಳಿದೆ.

ಇಲ್ಲಿ ಮಂತ್ರಿಗಳ ತಮ್ಮನ ನೇರವಾದ ಕೈವಾಡ ಇರುವುದರಿಂದ ಇದರಲ್ಲಿ ಸರಿಯಾದ ತನಿಖೆ ಆಗುವುದಿಲ್ಲ ಎನ್ನುವಂಥಾದ್ದನ್ನು ನಾವು ಹೇಳಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಅಡ್ಜರ್ನ್‌ಮೆಂಟ್ ಮೋಷನ್ ಹೇಗೆ ಆಗುತ್ತದೆ?

ಅಧ್ಯಕ್ಷರು : ಅದರ ಬಗ್ಗೆ ನೋಟಿಸನ್ನೇ ಕೊಟ್ಟಿಲ್ಲ. ನಿಯಮಾವಳಿಗಳ ಪ್ರಕಾರ ಸಂಬಂಧಪಟ್ಟ ಮಂತ್ರಿಗಳಿಗೂ ಕೊಟ್ಟಿಲ್ಲ, ನಮಗೂ ಕೊಟ್ಟಿಲ್ಲ.

ಗೊಂದಲ

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು.)

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೇ, ನೀವು ನೋಟೀಸ್ ಕೊಟ್ಟಿಲ್ಲ ನೀವು ಮಂತ್ರಿಗಳಿಗೆ ನೋಟೀಸ್ ಕೊಟ್ಟು ಆಮೇಲೆ ಅವರ ಹೆಸರನ್ನು ಹೇಳಿ. ನೀವು ಈ ಬಗ್ಗೆ ನನಗೂ ನೋಟೀಸ್ ಕೊಟ್ಟಿಲ್ಲ, ಅವರಿಗೂ ಕೊಟ್ಟಿಲ್ಲ.

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ನನಗೂ ಅವಕಾಶ ಮಾಡಿಕೊಡಿ

Mr. Speaker : You have not followed the procedure. Under Rule-328, you have not followed the Rules of procedure properly.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೇ, ನಾನೂ ಕೂಡ ಮಾತನಾಡಬೇಕೆಂದು ಆವಾಗಿನಿಂದ ಕೇಳುತ್ತಿದ್ದೇನೆ. ನಾನೂ ಒಬ್ಬ ಸದಸ್ಯನಿದ್ದೇನೆ. ನನಗೂ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಅವರು ಹೇಳಿದ್ದನ್ನು ಮಾತ್ರ ತಾವು ಕೇಳಿಕೊಂಡರೆ ಆಗುವುದಿಲ್ಲ. ದಯವಿಟ್ಟು ಒಂದು ನಿಮಿಷ ನನಗೂ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಅಲ್ಲಾರಿ, ಅವರೂ ವಿರೋಧ ಪಕ್ಷದ ನಾಯಕರು ತಾನೆ? ಅವರು ಮಾತನಾಡಿದ ಮೇಲೆ ನೀವೇ ಮಾತನಾಡಿ.

ಶ್ರೀ ವಿ. ಸೋಮಣ್ಣ : ಅಧ್ಯಕ್ಷರೇ, ನನಗೂ ಅವಕಾಶ ಕೊಡಬೇಕು.

ಅಧ್ಯಕ್ಷರು : ಸಿಂಧ್ಯಾರವರದ್ದು ಆದಮೇಲೆ ತಾವೂ ಮಾತನಾಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಇರುವಾಗ ನಾನು ಮಧ್ಯದಲ್ಲೇ ಅವರನ್ನು ಕೇಳಿಕೊಂಡೆ. ನಾನು ಮಧ್ಯದಲ್ಲಿ ಇಂಟರ್‌ವೀನ್ ಆಗುತ್ತೇನೆ, ದಯವಿಟ್ಟು ಅವಕಾಶ ಕೊಡಿ ಎಂದು ಕೇಳಿದಾಗ ಅದಕ್ಕೆ ಅವರು ಒಪ್ಪಿಕೊಂಡರು ಮತ್ತು ತಾವೂ ಕೂಡ ಅನುಮತಿಯನ್ನು ಕೊಟ್ಟಿರಿ. ನಾನು ಮಾತನಾಡುತ್ತಾ ಇರುವಾಗಲೇ ಮಾನ್ಯ ಮಂತ್ರಿಗಳಾದ ಶ್ರೀ ಖರ್ಗೆಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ಪಾಯಿಂಟ್ ಆಫ್ ಆರ್ಡರ್ ವಿಚಾರದಲ್ಲಿ ಅವರು ದೊಡ್ಡ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಪ್ರಯತ್ನ ಮಾಡಿದರು. ನಾನು ಹೇಳಿದ್ದು ಏನೆಂದರೆ ಈ ಸರ್ಕಾರ ಪರೋಕ್ಷವಾಗಿ.....

ಗೊಂದಲ

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಿದರು)

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಯಾರ‍್ಯಾರ ಅಭಿಪ್ರಾಯ ಏನಿದೆ ಅದನ್ನು ಅವರು ಕೊಡಲಿ ಅದನ್ನು ಹೇಳುವುದಕ್ಕೂ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು : ಅವರು ಪಾಯಿಂಟ್ ಆಫ್ ಆರ್ಡರ್ ರೇಸ್ ಮಾಡಿದ್ದರು ಮತ್ತು ಅವರ ಪಾಯಿಂಟ್ ಆಫ್ ಆರ್ಡರ್‌ನ್ನು ನಾನು ಒಪ್ಪಿದ್ದೇನೆ. ಅವರು ಹೇಳಿದ ಪ್ರಕಾರ ರೂಲ್ 328 ನ್ನು ಫಾಲೋ ಮಾಡಿಲ್ಲ. ಅವರು ಮೊದಲು ನೋಟೀಸ್ ಕೊಡಬೇಕಾಗಿತ್ತು....

ಶ್ರೀ ಡಿ.ಬಿ. ಚಂದ್ರೇಗೌಡ : ನಿಲುವಳಿ ಸೂಚನೆ ತಂದಿರುವುದಕ್ಕೆ ನಮ್ಮದೇನೂ ಅಬ್ಜಕ್ಷನ್ ಏನು ಇಲ್ಲ ವಿರೋದ ಪಕ್ಷದ ನಾಯಕರು ತಂದಿದ್ದರೆ ಇವರು ಅದರ ನಿಲುವಳಿ ಸೂಚನೆ ಪರವಾಗಿ ಮಾತನಾಡುತ್ತಾರೋ, ವಿರುದ್ಧವಾಗಿ ಮಾತನಾಡುತ್ತಾರೋ ಗೊತ್ತಿಲ್ಲ. ನಿಲುವಳಿ ಸೂಚನೆಗೆ ಮಾನ್ಯ ಅಧ್ಯಕ್ಷರು ಅನುಮತಿ ನೀಡಿದ್ದಾರೆಯೇ?

ಶ್ರೀ ಬಿ. ಸೋಮಶೇಖರ್ : ನಾನು ಇನ್ನೂ ಮಾತನಾಡಿಲ್ಲ.

ಅಧ್ಯಕ್ಷರು : ಬೇರೆ ಮಾತನಾಡುವವರು ಇದ್ದಾರೆ. ತಾವು ದಯವಿಟ್ಟು ಮುಗಿಸಿ.

ಗೊಂದಲ

ಶ್ರೀ ಕರಿಯಣ್ಣ : ಅಧ್ಯಕ್ಷರೇ.....

ಶ್ರೀ ಬಿ. ಸೋಮಶೇಖರ್ : ನಾನು ಇನ್ನು ಮಾತನಾಡುತ್ತಿರುವಾಗಲೇ, ಅವರಿಗೆ ತಾವು ಏಕೆ ಅವಕಾಶ ಕೊಟ್ಟಿರಿ? ನಾನು ಇನ್ನೂ ಮುಗಿಸಿಲ್ಲ.

ಗೊಂದಲ

ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಈಗ ಅವರು ಪ್ರಸ್ತಾಪ ಮಡುವುದು ಬೇಡ ಎಂದು ತಾವು ನಿಲುವಳಿ ಸೂಚನೆಗೆ ಅನುಮತಿ ಕೊಟ್ಟ ಮೇಲೆ ಹೇಳುವುದಿಲ್ಲ ಆದರೆ ಸರ್ಕಾರ ತಪ್ಪು ಮಾಡಿದ್ದರೆ ಹೇಳಲಿ, ಅದಕ್ಕೆ ಮೊದಲೇ ಸರ್ಕಾರ ತಪ್ಪು ಮಾಡಿದೆ ಸರ್ಕಾರ ಶಾಮೀಲಾಗಿದೆ ಎಂದು ಹೇಳುತ್ತಿದ್ದಾರೆ. ಈ ಮದ್ಯೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಸಚಿವರಿಗೆ ಅವಕಾಶ ನೀಡಬೇಡವೇ?

ಗೊಂದಲ

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೇ, ಬೇಗ ಮುಗಿಸಿ. ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ. ಸೋಮಶೇಖರ್ : ನಾನು ಮಾತನಾಡುವ ಮಧ್ಯೆದಲ್ಲೆಸಿ ತಾವು ಅವರಿಗೆ ಅವಕಾಶ ಕೊಟ್ಟಿರಿ. ದಯವಿಟ್ಟು ಅವರನ್ನೂ ಕೂಡ ಕೊಡಿಸಿ.

ಗೊಂದಲ

ಅಧ್ಯಕ್ಷರು : ಅಲ್ರಿ, ನೀವೇಕೆ ಸೈನ್ ಮಾಡಲಿಲ್ಲ? ಏನೋ ಪಾಪ ಎಂದು ನಾನು ಅಲೋ ಮಾಡಿದರೆ ಹೀಗೆಲ್ಲಾ ಮಾತನಾಡುತ್ತಿದ್ದೀರಿ. You have not signed, ಇಲ್ಲಿ ವಿರೋಧ ಪಕ್ಷದ ನಾಯಕರು ಎಂದು ನಾನು ಹೇಳಿದೆ. ಆದರೆ ನೀವು ಸೈನ್ ಮಾಡಿಲ್ಲ. ಸ್ವಲ್ಪ ಅಲೋ ಮಾಡಿದರೆ ಮೈಮೇಲೆ ಬಿದ್ದರೆ ಹೇಗೆ? ವಿರೋಧ ಪಕ್ಷದವರು ಮಾತನಾಡಿ ಎಂದು ಹೇಳಿದರೆ, ಮುಗಿಸುವುದಿಲ್ಲ ಎಂದು ಹೇಳಿ ಏನೇನೋ ಇನ್‌ಕ್ರಿಮಿನೇಟರಿ ಸ್ಟೇಟ್‌ಮೆಂಟ್ ಮಾಡುತ್ತಾ ಇದ್ದರೆ ಹೇಗೆ? ಸೈನ್ ಮಾಡಲಿ ಮಾಡದೇ ಇರಲಿ, ಸಾಮಾನ್ಯವಾಗಿ ಒಂದೊಂದು ಸಲ ನಾನು ಅಲೋ ಮಾಡುತ್ತೇನೆ. ಹಾಗೆ ಅಲೋ ಮಾಡಿದರೆ ಅದನ್ನು ನೀವು ಅಡ್ವೆಂಟೇಜ್ ತೆಗೆದುಕೊಂಡು ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷಗಳು ಸರ್ಕಾರದ ಮೇಲೆ ನೋಟೀಸ್ ಕೊಟ್ಟು ತಾವು ಆರೋಪ ಮಾಡುತ್ತಾ ಇರತಕ್ಕಂಥಾದ್ದು. ಅವರು ನಾವು ಮಾತನಾಡಿದ್ದನ್ನು ಸೌಜನ್ಯದಿಂದ ಕೇಳಬೇಕು. ಅದಕ್ಕೆ ಸರ್ಕಾರದವರು ಉತ್ತರವನ್ನು ಕೊಡುವವರಿದ್ದಾರೆ. ಅವರು ಏನಾದರೂ ಉತ್ತರ ಕೊಡಲಿ....

ಅಧ್ಯಕ್ಷರು : ಹಾಗೆ ಶಾಂತ ರೀತಿಯಿಂದ ಮಾತನಾಡಿ. ಸಂತೋಷ.

ಶ್ರೀ ಬಿ. ಸೋಮಶೇಖರ್ : ಸರ್ಕಾರದ ಮಂತ್ರಿಗಳು ನಾವು ಹೀಗೆಯೇ ಮಾತನಾಡಬೇಕು ಎಂದು ಅವರು ಬರೆದುಕೊಟ್ಟರೆ ನಾವು ಅದೇ ರೀತಿ ಮಾತನಾಡೋಣ. ಅವರು ಬರೆದುಕೊಟ್ಟು ಬಿಡಲಿ ನೀವು ವಿರೋಧ ಪಕ್ಷದವರು ಅಲ್ಲಿ ಕುಳಿತುಕೊಂಡು ಹೀಗೆಯೇ ಮಾತನಾಡಬೇಕು ಎಂದು. ಏನು ಮಾತನಾಡಬೇಕೆಂದು ಹೇಳುತ್ತಾರೆ ಅದನ್ನೇ ಬರೆದುಕೊಡಲಿ. ನಾನೇನಾದರೂ ಅನ್‌ಪಾರ್ಲಿಮೆಂಟರಿ ಶಬ್ಧ ಉಪಯೋಗಿಸಿದ್ದರೆ.....

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಾಮಿ ಪ್ರತಿಯನ್ನು ನನಗೂ ಕಳುಹಿಸಿದ್ದೀರಿ. ಸಂಸದೀಯ ವ್ಯವಹಾರಗಳ ಮಂತ್ರಿಯಾಗಿ ನೀವು ಕಳುಹಿಸಿದ ನಿಲುವಳಿ ಸೂಚನೆಯ ಪ್ರತಿ ನನಗೊಂದಿದೆ. ಹಾಗಾದರೆ ಹೇಳುವ ಅಧಿಕಾರ ನನಗಿಲ್ಲವೇನು?

ಶ್ರೀ ಬಿ. ಸೋಮಶೇಖರ್ : ನಾವು ಮಾತನಾಡುವಾಗ ಮಧ್ಯದಲ್ಲಿ ನಿಮ್ಮ ಕಡೆಯ ಸದಸ್ಯರುಗಳು ಮಾತನಾಡಿದರು.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೇ ನಾನು ಕೇಳಿದ್ದು. ನೀವು ನಿಲುವಳಿ ಸೂಚನೆ ಮೇಲೆ ಮಾತನಾಡುತ್ತಿದ್ದೀರೋ ಅಥವಾ.....

ಶ್ರೀ ಬಿ. ಸೋಮಶೇಖರ್ : ಅದರ ಮೇಲೆಯೇ ನಾನು ಮಾತನಾಡುತ್ತಿರುವುದು. ನಾವೂ ಒಂದು ಜವಾಬ್ದಾರಿ ಪಕ್ಷದಲ್ಲಿದ್ದೇವೆ. ವಿರೋಧ ಪಕ್ಷದಲ್ಲಿ ಎರಡನೇ ಪಕ್ಷ ನಮ್ಮದು.....

ಅಧ್ಯಕ್ಷರು : ತಾವು ಮಾತನಾಡುವಾಗ ಇರುವ ವಿಚಾರದ ಬಗ್ಗೆ ಮಾತನಾಡಿ ಸರ್ಕಾರಿ ನೇರವಾಗಿ ಇದರಲ್ಲಿ ಇನ್ವಾಲ್ವ್ ಆಗಿದೆ ಎಂದರೆ ಪ್ರೂಫ್ ಎಲ್ಲಿದೆ? Where is the proof? ನೇರವಾಗಿ ಇನ್ವಾಲ್ವ್ ಆಗಿದ್ದಾರೆಂದು ಹೇಳಿದ್ದೀರಲ್ಲಾ?

ಗೊಂದಲ

ಅಧ್ಯಕ್ಷರು : ನೀವು ಈ ಕಡೆಗೆ ತಿರುಗಿಕೊಂಡು ಹೇಳಿ. ಬೇಗ ಮುಗಿಸಿ ನೀವು ಏನು ಹೇಳಬೇಕೆಂದು ಇದ್ದೀರೋ, ಅದನ್ನು ಹೇಳಿಬಿಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಚಂದ್ರೇಗೌಡರು ಹೇಳಿದರು....

ಶ್ರೀ ಡಿ.ಬಿ. ಚಂದ್ರೇಗೌಡ : ಸಂಸದೀಯ ವ್ಯವಹಾರಗಳ ಮಂತ್ರಿಗಳು ಎಂದು ಹೇಳಿ.

ಶ್ರೀ ಬಿ. ಸೋಮಶೇಖರ್ : ಸಾರಿ. ಸಂಸದೀಯ ವ್ಯವಹಾರಗಳ ಮಂತ್ರಿಗಳೇ ಚಂದ್ರೇಗೌಡರು ಎಂದು ಚಂದ್ರೇಗೌಡರು ಬೇರೆ ಅಲ್ಲವಲ್ಲ ಸಂಸದೀಯ ವ್ಯವಹಾರಗಳ ಮಂತ್ರಿಯವರು ಹೇಳಿದರು ಆಗ ನಿಮ್ಮ ಕಾಲದಲ್ಲಿ, ನಿಮ್ಮ ಸರ್ಕಾರ ಇದ್ದಾಗಲೂ ನಕಲಿ ಛಾಪಾ ಕಾಗದಗಳು ಇದ್ದು ಆಗ ನೀವು ಏನು ಮಾಡಿದ್ದೀರಿ ಎಂದು.

ಅಧ್ಯಕ್ಷರು : ಆ ರೀತಿ ಶಾಂತ ರೀತಿಯಿಂದ ಮಾತನಾಡಿ. ಯಾರು ಬೇಡ ಅಂದರು?

ಶ್ರೀ ಬಿ. ಸೋಮಶೇಖರ್ : ಶಾಂತವಾಗಿಯೇ ಮಾತನಾಡಿದ್ದೇನೆ. ಮಾನ್ಯ ಸದಸ್ಯರು ತಾವು ಕೋಪ ಮಾಡಿಕೊಂಡಿರಿ.

ಶ್ರೀ ಅಧ್ಯಕ್ಷರು : ಇವತ್ತು ಕೊನೆ ದಿವಸ ತಾವು ಶಾಂತವಾಗಿ ಮಾತನಾಡಿ...

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ನಾನು ಶಾಂತವಾಗಿಯೇ ಮಾತನಾಡುತ್ತಿರತಕ್ಕಂಥಾದ್ದು, ಆ ಶಾಂತವಾಗಿ ಮಾತನಾಡತಕ್ಕಂಥಾದ್ದರಲ್ಲಿ ಹರಿತ ಇದ್ದರೆ ಅದನ್ನು ಸಹಿಸಿಕೊಳ್ಳತಕ್ಕಂಥಾ ಒಂದು ಸೌಜನ್ಯತೆಯೂ ಸರ್ಕಾರಕ್ಕೆ ಇರಬೇಕು. ಸರ್ಕಾರಕ್ಕೆ ನನ್ನ ಶಾಂತ ರೀತಿಯಲ್ಲಿಯೇ ಹರಿತವಾದ ಶಬ್ದಗಳು ಇದ್ದರೆ ಅದನ್ನೂ ಸಹಿಸಿಕೊಳ್ಳತಕ್ಕಂಥ ಸೌಜನ್ಯ ಬೇಕು. ಈಗ ಅವರು ನಮ್ಮ ಮೇಲೆ ಏನು ಹೇಳಿದರು ನಿಮ್ಮ ಸರ್ಕಾರವಿದ್ದಾಗಲೂ ಈ ನಕಲಿ ಛಾಪಾ ಕಾಗದಗಳ ಮಾರಾಟ ಇತ್ತು, ನೀವು ಏನು ಮಾಡಿದಿರಿ ಎನ್ನತಕ್ಕಂಥಾದ್ದನ್ನು ಕೇಳಿದರು. ನಾವು ಅದಕ್ಕೋಸ್ಕರವೇ....

ಶ್ರೀ ಅಭಯ ಚಂದ್ರ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ಅವರು ಒಂದು ನಿಮಿಷದಲ್ಲಿ ಮುಗಿಸುತ್ತಾರೆ ಸುಮ್ಮನೆ ಇರಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ನಾನು ಅದಕ್ಕೋಸ್ಕರವೇ ನಾವು 1999 ಅಕ್ಟೋಬರ್‌ನಲ್ಲಿ ಒಂದು ಹೊಸ ವ್ಯವಸ್ಥೆಯನ್ನು ಕಾನೂನು ತಿದ್ದುಪಡಿ ಮಾಡಿ ಈ ರೀತಿ ನಕಲಿ ಛಾಪಾಕಾಗದಗಳ ಮಾರಾಟ ಜಾಸ್ತಿಯಾಗಿದೆ ಎಂದು ಹೇಳಿ ನಮ್ಮ ಸಕಾರವಿದ್ದಾಗಲೇ ಪರ್ಯಾಯವಾದ ಒಂದು ವ್ಯವಸ್ಥೆಯನ್ನು ನಾವು ತಂದೆವು. ಅಕ್ಟೋಬರ್ 1999ರಲ್ಲಿ ಛಾಪಾ ಕಾಗದಗಳನ್ನು ಕೊಂಡುಕೊಳ್ಳತಕ್ಕಂಥಾದ್ದನ್ನು ಕಡಿಮೆ ಮಾಡಿ ಅದಕ್ಕೆ ಪರ್ಯಾಯವಾಗಿ ಬಿಳಿ ಹಾಳೆಯ ಮೇಲೆ ರಿಜಿಸ್ಟರ್ ಮಾಡತಕ್ಕಂಥ ವ್ಯವಸ್ಥೆಯನ್ನು ನಾವು ತಂದೆವು. ಅದು ತಂದ ಒಂದೇ ತಿಂಗಳಲ್ಲಿ ನಮ್ಮ ಸರ್ಕಾರ ಹೋಯಿತು.

ಅಧ್ಯಕ್ಷರು : ಇದು ಪ್ರಿಲಿಮಿನರಿಸಬ್‌ಮಿಷನ್. ಸಮಯ ಹಾಳು ಮಾಡಬೇಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ತಾವು ಸ್ವಲ್ಪ ತಾಳ್ಮೆ ತೆಗೆದುಕೊಳ್ಳಿ.ನಾನೇನು ಅನ್ ಪಾರ್ಲಿಮೆಂಟರಿ ಶಬ್ದಗಳನ್ನು ಉಪಯೋಗಿಸುತ್ತಿಲ್ಲ.

ಅಧ್ಯಕ್ಷರು : ಇದು ಪ್ರಿಲಿಮಿಸರ್ರಿ ಸಬ್‌ಮಿಷನ್. ನಾನು ಅಲೋ ಮಾಡಿದ ಮೇಲೆ ಬೇಕಾದರೆ ಅರ್ಧ ಗಂಟೆ ಮಾತನಾಡಿ. ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ನಾನು I want to substantiate my charge.

ಅಧ್ಯಕ್ಷರು : ಇದು ಪ್ರಿಲಿಮಿನರಿ ಸಬ್‌ಮಿಷನ್.

ಶ್ರೀ ಬಿ. ಸೋಮಶೇಖರ್ : ಅದಕ್ಕೆ 3 ವರ್ಷಗಳ ಕಾಲ ಇದನ್ನು ಮುಚ್ಚಿಟ್ಟು ಈ ನಕಲಿ ಛಾಪಾ ಕಾಗದಗಳ ಮಾರಾಟ ಸುಮಾರು 10 ಸಾವಿರ ಕೋಟಿ ರೂ ಮಾರಾಟವಾಗಿದೆ ಎಂದು ಹೇಳಿದರಲ್ಲಾ ಅದು 10 ಸಾವಿರ ಕೋಟಿ ರೂ ಕಡಿಮೆ ಇದೆ, 40–50 ಸಾವಿರ ಕೋಟಿ ರೂಪಾಯಿ ನಕಲಿ ಛಾಪಾ ಕಾಗದಗಳನ್ನು ಮಾರ್ಕೆಟ್‌ಗೆ ತಂದು ನಮ್ಮ ರಾಜ್ಯಕ್ಕೆ ತಂದು ಮಾರಾಟವಾಗಿದೆ. ಆದ್ದರಿಂದ ಆ ವ್ಯವಸ್ಥೆಯನ್ನು ನೀವು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದಿದ್ದರೆ ಈ ಒಂದು ನಕಲಿ ಛಾಪಾ ಕಾಗದಗಳ ಹಾವಳಿ ಹೆಚ್ಚಾಗುತ್ತಿರಲಿಲ್ಲ, ಆದ್ದರಿಂದ ಪರೋಕ್ಷವಾಗಿ ನೀವು ಉತ್ತೇಜನ ಕೊಟ್ಟಂತೆ ಆಗಿದೆ ಎನ್ನುವುದು ನನ್ನ ವಾದ ಅಷ್ಟೇ. ಅದಾದ ಮೇಲೆ ಮಾನ್ಯ ಅಧ್ಯಕ್ಷರೇ, ಈಗ ಅವರ ವಿಚಾರಕ್ಕೆ ಸಂಬಂಧಪಟ್ಟ ಹಾಗೆ.....

ಅಧ್ಯಕ್ಷರು : ನಾನು ಮಾನ್ಯ ಸದಸ್ಯರಾದ ಸಿಂಧ್ಯಾರವರಿಗೆ ಅವಕಾಶ ಕೊಡಬೇಕು. ಅವರು ಆಗಲೇ ಎದ್ದು ನಿಂತಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ ಇನ್ನೊಂದು ಏನಾಗಿದೆ?

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ....

ಶ್ರೀ ಬಿ. ಸೋಮಶೇಖರ್ : ನಾನು ಮುಗಿಸಿಬಿಡುತ್ತೇನೆ. ತಾವು ಆಮೇಲೆ ಮಾತನಾಡಿ. ದಯವಿಟ್ಟು, ನಾನು ಮುಗಿಸಿಬಿಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೆಳುವುದು ಇಷ್ಟೇ.

ಶ್ರೀ ಬಿ. ಸೋಮಶೇಖರ್ : ಇಲ್ಲ ಇಲ್ಲ, ತಾವು ಆಮೇಲೆ ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು 1999ನೇ ಇಸವಿಯಿಂದ ಎಂದು ಹೇಳಿದಿರಲ್ಲಾ, ಅದು ಅಷ್ಟೇ ಸಾಕು to defeat the motion. That is all my point.

ಶ್ರೀ ಬಿ. ಸೋಮಶೇಖರ್ : ಅದರ ಜೊತೆಗೆ..

ಶ್ರೀ ಡಿ.ಬಿ. ಚಂದ್ರೇಗೌಡ : ಇದು ನಿಲುವಳಿ ಸೂಚನೆ ಹೇಗೆ ಆಗುತ್ತದೆ?

ಅಧ್ಯಕ್ಷರು : 1999 ಅಂದರೆ ಆಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಮುಗಿಸಿಲ್ಲ. ಇವತ್ತು ನಮ್ಮ ಸಾಂಗ್ಲಿಯಾನರವರು ಹೇಳಿರತಕ್ಕಂಥ ಸ್ಟೇಟ್‌ಮೆಂಟ್ ಮತ್ತೆ ಅಧಿಕಾರದಲ್ಲಿದ್ದಾಗ ಪುಸ್ತಕ ಬರೆದಿರತಕ್ಕಂಥ ಒಬ್ಬ ಡಿ.ಜಿ.ಪಿ ಯವರು ಇರಬಹುದು, ಈ ಹೇಳಿಕೆ ಕೊಟ್ಟಿರತಕ್ಕಂಥ ಡಿಜಿಪಿ ಯವರು ಇರಬಹುದು, ಅವರು ತನ್ನ ಸ್ಥಾನದಲ್ಲಿದ್ದಾಗ ಮಾಡದೇ ಅವರು ನಿವೃತ್ತಿಯಾದ ಮೇಲೆ ಮಾಡಿರತಕ್ಕಂಥ ಪ್ರಾಪರಟಿ ಬಗ್ಗೆ ನಾನು ಹೆಳುತ್ತಿಲ್ಲ. ಅವರು ಅಧಿಕಾರದಲ್ಲಿದ್ದಾಗಲೇ ಮಾಡಬೇಕಾಗಿತ್ತು, ಮಾಡದೇ ಇದ್ದರೆ ರೆಸಿಸ್ಟ್ ಮಾಡಬೇಕಾಗಿತ್ತು, They should have prepared to face the consequences, by spelling the truth when they were occupying the post. I am not going to comment on the propriety of those officers. ನಾನು ಹೇಳತಕ್ಕಂಥಾದ್ದು. The facts remains, that he has clearly said ಈ ಕರೀಂ ಲಾಲಾ ಎನ್ನತಕ್ಕಂಥವನ ಜೊತೆಯಲ್ಲಿದ್ದವರು ಕೆಲವು ಸೀನಿಯರ್ ಆಫೀಸರ್ಸ್ ಕರ್ನಾಟಕದಲ್ಲಿ, ಐಪಿಎಸ್ ಆಫೀಸರ್ಸ್ ಡಿಐಜಿ ಮಟ್ಟದವರು, ಸಂಬಂಧ ಇಟ್ಟುಕೊಂಡಿದ್ದಾರೆ, ಎಂದು.....

ಅಧ್ಯಕ್ಷರು : ನಾನು ಆಗಲೇ ಹೇಳಿದೆ. ಇದು ಪ್ರಿಲಿಮಿನರಿ ಸಬ್‌ಮಿಷನ್. ತಾವು ಈ ರೀತಿ ಮಾತನಾಡುತ್ತಿದ್ದರೆ ಎಲ್ಲಾ ಸಬ್‌ಜ್ಯುಡೀಸ್ ಆಗುತ್ತದೆ. ತಾವು ಮಾತನಾಡುವುದೆಲ್ಲಾ ಸಬ್‌ಜುಡೀಸ್ ಆಗುತ್ತದೆ. ಎಲ್ಲಾ ಕೇಸ್‌ಗಳು ಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ಆಮೇಲೆ ಈ ಕೇಸ್‌ಗಳ ಬಗ್ಗೆ ಇನ್‌ವೆಸ್ಟಿಗೇಶನ್ ಆಗುತ್ತಿದೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ವಿಷಯ. ನಮಗೂ ಅವಕಾಶ ಕೊಡಿ.

ಅಧ್ಯಕ್ಷರು : ಆಯಿತು ಚನ್ನಿಗಪ್ಪನವರೇ, ತಾವು ಹೇಳಿದ ಮೇಲೆ ನಾನು ಕೇಳದೇ ಇರುವುದಕ್ಕೆ ಆಗುತ್ತದೆಯೇ.

ಶ್ರೀ ಬಿ. ಸೋಮಶೇಖರ್ : ನನ್ನ ಆರೋಪ ಏನು ಇದೆ ಅಂದರೆ ಈ ಒಂದು ಹಿರಿಯ ಅಧಿಕಾರಿಗಳ ಜೊತೆ ನನ್ನ ಸಂಪರ್ಕ ಇದೆ. ಇವರಿಗೆ ನಾನು ಎಲ್ಲಾ ಆತಿಥ್ಯವನ್ನು ಕೊಡುತ್ತಿದ್ದೆ. ಅವರ ಇನ್‌ಫ್ಲೂಯನ್ಸ್ ಮಾಡಿ ನನ್ನನ್ನು ಯಾರೂ ಅರೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಎಂದು ಹೇಳಿದ್ದಾರಲ್ಲಾ ಇವತ್ತು ಪ್ರೆಸೆಂಟ್ ಅಧಿಕಾರಿಗಳು ಇದ್ದಾರಲ್ಲಾ ಅವರ ಜೊತೆ ಲಿಂಕ್ ಇದೆ ಎನ್ನುವಂತಹ ವಿಚಾರವನ್ನು

ಎತ್ತಿದ್ದಾರೆ. ಒಂದು. ನಂತರ ಇವತ್ತು ಏನಾಗಿದೆ ಆ ಒಂದು ಸಿಬಿಐ ವಿಚಾರಣೆಗೆ ನಾನು ಕೊಟ್ಟಿದ್ದೆ, ಅದನ್ನು ಸರ್ಕಾರ ಒಪ್ಪಿಲ್ಲ ಎನ್ನತಕ್ಕಂಥಾದ್ದನ್ನೂ ಹೇಳಿದ್ದಾರೆ. ಆದ್ದರಿಂದ ನಾನು ಕೇಳತಕ್ಕಂಥಾದ್ದು ಇಷ್ಟೇ ಇವತ್ತು ನೀವು ನಿಜವಾಗಿಯೂ ಸ್ವಚ್ಛವಾಗಿದ್ದರೆ, ಸರ್ಕಾರದವರಿಗೆ ಏನೂ ತೊಂದರೆ ಇಲ್ಲದಿದ್ದರೆ ಸಿಬಿಐ ವಿಚಾರಣೆಗೆ ಕೊಟ್ಟರೆ ಯಾರು ತಪ್ಪಿತಸ್ಥರಾಗಿದ್ದಾರೆ, ಎಂಬುದು ಗೊತ್ತಾಗುತ್ತದೆ. I am not asking the resignation of the Minister, who is under cloud, I am not saying that.- ನಾನು ಹೇಳುತ್ತಿಲ್ಲ. ನಾನು ಹೇಳತಕ್ಕಂಥಾದ್ದು ಇಷ್ಟೇ. ಇವತ್ತು ವಿಚಾರಣೆಯಿಂದ ಇದು ಒಂದು ದೊಡ್ಡ ಪ್ರಮಾಣದ ಸ್ಕ್ಯಾಂಡಲ್ ಆಗಿರುವುದರಿಂದ ಸಿಬಿಐ ಎನ್‌ಕ್ವೈರಿ, ಆಗಬೇಕಾಗುತ್ತದೆ ಏಕೆಂದರೆ ಈಗಾಗಲೇ ಮಹಾರಾಷ್ಟ್ರದಲ್ಲಿ ಆವರಿಸಿದೆ, ಬೇರೆ ಬೇರೆ ರಾಜ್ಯದಲ್ಲಿ ಆವರಿಸಿದೆ, ಇದಕ್ಕೆ ಯಾರು ತಪ್ಪಿತಸ್ಥರು ಈಗ ಪ್ರೆಸಂಟ್ ಅಧಿಕಾರಿಗಳು ತಪ್ಪಿತಸ್ಥರಾಗಿರಬಹುದು, ಅದೆಲ್ಲಾ ಗೊತ್ತಾಗುತ್ತದೆ ಆದ್ದರಿಂದ ಸಿಬಿಐ ಎನ್ಕ್ವೈರಿಗೆ ಕೊಟ್ಟು ಬಿಟ್ಟರೆ ಒಳ್ಳೆಯದು, ಇಲ್ಲದಿದ್ದರೆ ನಿಜವಾಗಿಯೂ ನಿಮ್ಮ ಮೇಲೆ ನಮಗೆ ಅನುಮಾನ ಬರುತ್ತದೆ ಸಾರ್ವಜನಿಕರೂ ಸಹ ನಿಮ್ಮನ್ನು ಖಂಡಿತವಾಗಿ ಕ್ಷಮಿಸುವುದಿಲ್ಲ ಆದ್ದರಿಂದ ಸಿಬಿಐ ಎನ್‌ಕ್ವೈರಿಗೆ ಕೊಡಿ ಎಂಬುದು ನನ್ನ ಆಗ್ರಹ.

ಅಧ್ಯಕ್ಷರು : ನಾನು ಮಾನ್ಯ ಸಿಂಧ್ಯಾರವರಿಗೆ ಅವಕಾಸ ಕೊಟ್ಟಿದ್ದೇನೆ. ಅವರು 8ನೇ ಭಾರಿ ಎದ್ದು ನಿಂತಿದ್ದಾರೆ. ಅವರೂ ಒಂದು ಪಾರ್ಟಿ ಲೀಡರ್ ದಯವಿಟ್ಟು ಬೇಡ. ನಾನು ಮಾನ್ಯ ಸಿಂಧ್ಯಾರವರಿಗೆ ಅವಕಾಶ ಕೊಟ್ಟಿದ್ದೇನೆ.

+ ಶ್ರೀ ಪಿ.ಜಿ.ಆರ್ ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರಾದ ಜಗದೀಶ್‌ಶೆಟ್ಟರ್ ಕಳುಹಿಸಿರತಕ್ಕಂಥ ನಿಲುವಳಿ ಸೂಚನೆಗೆ ನಾನು ಸಹಿ ಹಾಕಿಲ್ಲ. ಆ ನಿಲುವಳಿ ಸೂಚನೆ ಬಗ್ಗೆ ಮಾತನಾಡುವ ಹಕ್ಕು ನನಗೆ ಇಲ್ಲ. ಆದರೆ ಈ ನಿಯಮಾವಳಿಗಳ ಪ್ರಕಾರವಾಗಿ ಮಾನ್ಯ ಸಭಾಧ್ಯಕ್ಷರು ಸಭೆಯನ್ನು ನಡೆಸಬೇಕಾಗಿರುವುದರಿಂದ ಮತ್ತು ತಾವು ಸದನದ ಸರ್ವ ಮೂಲೆಗಳಿಂದ ಬರತಕ್ಕಂಥ ಸರ್ವ ಸದಸ್ಯರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕಾಗಿ ಇರುವುದರಿಂದ ನಾನು ಒಂದೆರಡು ಅಭಿಪ್ರಾಯಗಳನ್ನು ಸಲಹೆ ರೂಪದಲ್ಲಿ ತಮಗೆ ವಿನಂತಿಸಿಕೊಳ್ಳುವುದಕ್ಕೆ ಪ್ರಾರ್ಥಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಈ ದಿವಸ ನಮ್ಮ ಈ ಅಧಿವೇಶನದ ಕೊನೆಯ ದಿನ. ನಾವು ಸರ್ಕಾರದಿಂದ ಗ್ರಾಮೀಣ ಕೃಪಾಂಕದ ಬಗ್ಗೆ ಈ ಸರ್ಕಾರದ ನಿಲುವು ಸಿಇಬಿ ಬಗ್ಗೆ ಸರ್ಕಾರದ ನಿಲುವು ಅಕ್ಷರದಾಸೋಹ ಬಗ್ಗೆ ಆಗಬೇಕಾಗಿರತಕ್ಕಂಥ ಮಾರ್ಪಾಡಿನ ಬಗ್ಗೆ ಈ ಸರ್ಕಾರದ ನಿಲುವು ಮಂಡ್ಯ ರೈತರು ಕಣ್ಣೀರು ಸುರಿಸುತ್ತಾ ಇರತಕ್ಕಂಥ ರೈತರ ಹೋರಾಟ, ಇವುಗಳ ಬಗ್ಗೆ ಇವತ್ತು ಎರಡು ಗಂಟೆಯೊಳಗೆ ನಾವು ಉತ್ತರವನ್ನು ಪಡೆಯಬೇಕಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ವಿಚಾರಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟು ಸರ್ಕಾರದಿಂದ ಉತ್ತರವನ್ನು ತಾವು ಕೊಡಿಸಲಿಕ್ಕೆ ನಮ್ಮ ಪಾಲಿಗೆ ತಾವು ಸಹಕಾರ ಕೊಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ನಾನೂ ಸಹ ಕೆಲವು ನಿವೃತ್ತ ಅಧಿಕಾರಿಗಳು ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಹುಲಿ ವೇಷ ಹಾಕಿಕೊಂಡು, ಈಗ ಅಧಿಕಾರದಿಂದ ನಿವೃತ್ತಿಯಾದ ಮೇಲೆ ಈ ರೀತಿಯ ಮಾತುಗಳನ್ನು, ಈ ರೀತಿ ಹೇಳಿಕೆಗಳನ್ನು ಕೊಟ್ಟಿರತಕ್ಕಂಥದ್ದನ್ನು ನಾನು ನೋಡಿದ್ದೇನೆ. ಅದನ್ನು ಎಲ್ಲಿ ಹಾಕಬೇಕು ಎಂದು ಹೇಳಿದರೆ ನನ್ನ ಮನೆಯ ಹೊರಗಡೆ ಇರತಕ್ಕಂಥ ಕಸದಬುಟ್ಟಿಗೆ ಅದನ್ನು ನಾನು ಎಸೆದಿದ್ದೇನೆ. ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಇವರಿಗೆ ಕಡತಗಳಲ್ಲಿ ಬರೆಯುವುದಕ್ಕೆ ಸರ್ವಸ್ವಾತಂತ್ರ್ಯ ಇದೆ. ಇವರೇನೂ ನಮಗೆ

(+ ಈ ಚಿಹ್ನೆ ಮಾನ್ಯ ಸದಸ್ಯ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ನಿರ್ದೇಶನಗಳನ್ನು ಕೊಡುವುದಿಲ್ಲ. ಇವರ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ಗಳನ್ನು ಬರೆಯುವಂತಹ ಸಂದರ್ಭಗಳಲ್ಲಿ ಎಕ್ಸಲೆಂಟ್ ಎಂದು ಬರೆಯಿರಿ, ವೆರಿಗುಡ್ ಎಂದು ಬರೆಯಿರಿ, ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ಗಳಲ್ಲಿ ಇರತಕ್ಕಂಥಾದ್ದನ್ನೆಲ್ಲಾ ಇಮೇಜ್ ಮಾಡಿ ಎಂದು ಪೊಲಿಟಿಕಲ್ ಪ್ರೆಷರ್ಸ್ ಅನ್ನು ನಮ್ಮ ಮೇಲೆ ಅಧಿಕಾರದಲ್ಲಿದ್ದಾಗ ತೆಗೆದುಕೊಂಡು ಬರುತ್ತಾರೆ ಇವರೆಲ್ಲಾ. ಯಾವ ಒಬ್ಬ ಅಧಿಕಾರಿಗೂ ಸಹ ಎಕ್ಸ್‌ಲೆಂಟ್, ವೆರಿಗುಡ್ ಎಂದು ಬಿಟ್ಟು ಬೇರೆ ಏನು ಇವರ ಕಾನ್‌ಫಿಡೆನ್‌ಷಿಯಲ್ಲ ರಿಪೋರ್ಟ್‌ನಲ್ಲಿ ಇದೆ ಸ್ವಾಮಿ? ಯಾವುದೂ ಸಹ ಇವರು ಹೇಳುವುದಿಲ್ಲ. ಅಧಿಕಾರ ಬಿಟ್ಟ ತಕ್ಷಣವೇ ಎಲ್ಲರ ಮೇಲೆ ಹೇಳತಕ್ಕಂಥ ಕೆಲಸವನ್ನು ಇವರು ಮಾಡುತ್ತಾರೆ. ಈ ಚಾಳಿಯನ್ನು ನಾನು ಖಂಡಿಸುತ್ತೇನೆ. ಇನ್ನು ಕೊನೆಯದಾಗಿ ಇವತ್ತಿನ ಸಮಯದ ಒಂದು ವಿಚಾರವಾಗಿ, ಸಮಯ ಇಲ್ಲದೇ ಇರುವುದರಿಂದ ನಾನು ಈ ನಿಲುವಳಿ ಸೂಚನೆ ಬಗ್ಗೆ ಮಾತನಡುತ್ತಿಲ್ಲ. ಆದರೆ ಈ ಛಾಪಾ ಕಾಗದದ ಹಗರಣ ಎರಡೂ ಸಕಾರಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳನ್ನು ಜನ ಸಂಶಯದ ದೃಷ್ಟಿಯಿಂದ ನೋಡತಕ್ಕಂಥಾದ್ದು ಇದೆ. ಇವತ್ತು ಕೇಂದ್ರ ಸರ್ಕಾರದ ಗಮನಕ್ಕೆ ಇದೆ. ಕೇಂದ್ರ ಸರ್ಕಾರದ ಜಾಲ ರಾಜ್ಯ ಸಕಾರದಲ್ಲಿದೆ. ಒಬ್ಬ ಸ್ಪೆಷಲ್ ಇಂಟಲಿಜನ್ಸ್ ಆಫೀಸರ್ ಇರುತ್ತಾರೆ. ಐಜಿಪಿ ಮಟ್ಟದ ಅದಿಕಾರಿಗಳು ಇರುತ್ತಾರೆ. ಎಸ್.ಪಿ ಮಟ್ಟದ ಅಧಿಕಾರಿಗಳು ಇರುತ್ತಾರೆ. ಸಿಬಿಐ ಎನ್ನತಕ್ಕಂಥಾದ್ದು ಇಲ್ಲಿ ಕೆಲಸ ಮಾಡುತ್ತಿದೆ. ಕಳೆದ ಎರಡು ವರ್ಷಗಳಿಂದ ಮಾನ್ಯ ಜಗದೀಶ್‌ಶೆಟ್ಟರ್‌ರವರು ಇದನ್ನು ಪ್ರಸ್ತಾಪ ಮಾಡುತ್ತಲೇ ಇದ್ದಾರೆ. ಮಾನ್ಯ XX ತಪ್ಪಿತಸ್ಥರೋ ಇಲ್ಲವೋ ಎನ್ನುವುದನ್ನು ಅವರೇ ಹೇಳಬೇಕಗುತ್ತದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಕೇಂದ್ರ ಸರ್ಕಾರಕ್ಕೆ ಇವತ್ತು ಇದರ ಬಗ್ಗೆ ಕಾಳಜಿ ಇದ್ದಿದ್ದರೆ ಗುಜರಾತ್‌ನಲ್ಲಿ ಬಿ ಜೆ ಪಿ ಸಕಾರ ಇದೆ. ಬೇರೆ ಡೆಲ್ಲಿ ಪಕ್ಕದಲ್ಲಿರತಕ್ಕಂಥ ರಾಜ್ಯಗಳಲ್ಲಿ ಬಿ ಜೆ ಪಿ ಸರ್ಕಾರ ಇದೆ. ಅವರ ಕಡೆಯಿಂದ ಒಂದು ಅರ್ಜಿಯನ್ನು ತರಿಸಿಕೊಂಡು ಇದನ್ನು ಸಿ ಬಿ ಐ ಗೆ ಕೊಡಬಹುದಾಗಿತ್ತು. ಇವತ್ತು ಅದನ್ನೂ ಸಹ ಕೊಟ್ಟಿಲ್ಲ. ಆದ್ದರಿಂದ ಇವತ್ತು ಯಾರಾದರೂ ಒಬ್ಬರು ಸಾರ್ವಜನಿಕ ಹಿತಾಸಕ್ತಿಯಿಂದ ಕೋರ್ಟ್‌ಗೆ ಹೋದರೆ ಇದು ಸಿ ಬಿ ಐ ಗೆ ಹೋಗೇ ಹೋಗುತ್ತದೆ. ನಾನು ಮಾನ್ಯ ಖರ್ಗೆಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಮ್ಮ ಸಚಿವ ಸಂಪುಟದ ಸಹೋದ್ಯೋಗಿಯೊಬ್ಬರ ಮೇಲೆ Cersers wife should be above the suspision. This is my plea. ಆದ್ದರಿಂದ ನಾನು ಹೇಳುತ್ತೇನೆ ನೀವು ಕೇಂದ್ರ ಸರ್ಕಾರಕ್ಕೆ ಬರೆಯಿರಿ. ಏನು ತಪ್ಪು ಇದೆ? ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ತಾವು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ.....

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ......

ಶ್ರೀ ಅಭಯಚಂದ್ರ : ಬಿಜೆಪಿ ಸದಸ್ಯರೇ ಮಾತನಾಡಲಿ......

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳಿದರು ಏನು ಹೇಳಿದರು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಜವಾಬ್ದಾರಿ ಎನ್ನುವ ಮಾತನ್ನು ಇವತ್ತು ಕೇಂದ್ರ ಸರ್ಕಾರ ಹೇಳಿದೆ. ಕೇಂದ್ರ ಸಕಾರ ಈಗಾಗಲೇ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ. ಇದು ಇಡೀ ರಾಷ್ಟ್ರದಲ್ಲಿ ಇರುವಂತಹ ಹಗರಣ ಇರುವುದರಿಂದ, ಇದು ಸುಮಾರು 80

(XX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.)

ಸಾವಿರ ಕೋಟಿ ರೂಯಷ್ಟು ಹಗರಣವಿರುವುದರಿಂದ, ಅದರಲ್ಲೂ ಮೂಲ ಆರೋಪಿ, ಅಪರಾಧಿ ಏನಿದ್ದಾರೆ ಅವರು ಕರ್ನಾಟಕದಲ್ಲಿ ಇದ್ದಂತಹವನು ಕರ್ನಾಟಕ ಅವನ ಮೂಲ ಸ್ಥಾನ ಮತ್ತು ಕರ್ನಾಟಕದ ಜೈಲಿನಲ್ಲಿದ್ದಾನೆ. ಇದರಲ್ಲಿ ಬಹಳಷ್ಟು ಜನ ಹಿರಿಯ ಅಧಿಕಾರಿಗಳು ಮತ್ತು ರಾಜಕಾರಣಿಗಳ ಇನ್‌ವಾಲ್‌ಮೆಂಟ್ ಇರುವುದರಿಂದ ಇದನ್ನು ಸಿಬಿಐ ಗೆ ಕೊಡಿ ಎಂದು ಕೇಂದ್ರ ಸರ್ಕಾರದವರು ಪತ್ರ ಬರೆದಿದ್ದಾರೆ.

ರಾಜ್ಯಸರ್ಕಾರ ಇನ್ನೂವರೆಗೂ ಕೇಂದ್ರ ಸರ್ಕಾರ ಬರೆದಂಥ ಪತ್ರಕ್ಕೆ ಪ್ರತಿಕ್ರಿಯೆ ಕೊಟ್ಟಿಲ್ಲ; ಒಪ್ಪಿಗೆಯನ್ನು ಕೊಟ್ಟಿಲ್ಲ. ಈಗಾಗಲೇ ಒಪ್ಪಿಗೆಯನ್ನು ಕೊಟ್ಟುಬಿಡಬಹುದಿತ್ತು. ಇಲ್ಲಿ ನಿಷ್ಪಕ್ಷಪಾತದಿಂದ ತನಿಖೆಯಾಗಬೇಕಾಗಿದ್ದರೆ, ಇದರಲ್ಲಿ ಇನ್‌ವಾಲ್‌ಮೆಂಟ್ ಯಾರು ಯಾರಿದ್ದಾರೆ ಎಂಬುದನ್ನು ಹೊರಬರಬೇಕಾಗಿದ್ದರೆ ತಕ್ಷಣವೇ ಸಿಬಿಐಗೆ ಒಪ್ಪಿಸಿಬಿಡಲಿ. ಕೇಂದ್ರ ಸರ್ಕಾರ ಈಗಾಗಲೇ ಪತ್ರ ಬರೆದಿದೆ. ಹೀಗಾಗಿ, ಅದು ಸಿಬಿಐ ಮುಖಾಂತರ ಎಲ್ಲಾ ರೀತಿಯಾದಂಥ ಇಂಪಾರ್ಶಿಯಲ್ ತನಿಖೆ ಮಾಡಲಿಕ್ಕೆ ತಯಾರಿದ್ದಾಗ್ಯೂ ಸರ್ಕಾರ ಹಿಂದೇಟು ಹಾಕುತ್ತಾ ಇದೆ. ಏಕೆಂದರೆ, ಇಲ್ಲಿ ಹಲವಾರು ಸಂಶಯಗಳು ನಮಗೆ ಬರುತ್ತಾ ಇವೆ. ಮಾನ್ಯ ಖರ್ಗೆಯವರು ನಾವು ಅದನ್ನು ಮಾಡಿದ್ದೇವೆ, ಅದನ್ನು ಮಾಡಿದ್ದೇವೆಂಬುದನ್ನು ಹೇಳಿದರು. ಅವರು ಬಹಳಷ್ಟು ವಿಷಯಗಳನ್ನು ಹೇಳಿದ್ದಾರೆ ಆಗಲೇ ಅವರೆಲ್ಲಾ ಉತ್ತರ ಹೇಳಿಬಿಟ್ಟರು. ಆ ವಿಷಯಗಳನ್ನು ನಾವೂ ಹೇಳಬೇಕಾಗಿದೆ, ಯಾರು ಯಾರು ಇನ್‌ವಾಲ್ ಆಗಿದ್ದಾರೆಂಬುದನ್ನು ಹೇಳಬೇಕಾಗಿದೆ. XX ಸಾಂಗ್ಲಿಯಾನರವರು ಇದ್ದಂಥ ಸಂದರ್ಭದಲ್ಲಿ ಬಂದಂಥಾದ್ದು, ಮತ್ತು ಅವರು ಕ್ಲಿಯರ್ ಆಗಿ ಹೇಳಿದ್ದಾರೆ.....

ಅಧ್ಯಕ್ಷರು : ಪ್ರಿಲಿಮನರಿ ಸಬ್‌ಮಿಷನ್ ಎಂದು ಹೇಳಿದರೆ ಏನು? ನೀವು ಈ ರೀತಿ ಹೇಳುತ್ತಾ ಹೋದರೆ, ಇದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಜಗದೀಶ್‌ಶೆಟ್ಟರ್ : ಸಾಂಗ್ಲಿಯಾನರವರು ಇದರಲ್ಲಿ ಬಹಳಷ್ಟು ಜನ ಮಂತ್ರಿಗಳ ಸಂಬಂಧಿಕರು ಇರುವುದರಿಂದ, ಹಿರಿಯ ಅಧಿಕಾರಿಗಳು ಇರುವುದರಿಂದ, ಇದನ್ನು ಸಿಬಿಐ ತನಿಖೆಗೆ ಕೊಡಬೇಕೆಂದು ಅವರು ಹೇಳಿದ್ದರು ಅವರು ಈ ರೀತಿ ರೆಫರ್ ಮಾಡಿದ್ದನ್ನು ನೀವೇಕೆ ರಿಜೆಕ್ಟ್ ಮಾಡಿದಿರಿ ಹಾಗಾಗಿ ಇದರಲ್ಲಿ ಸಂಶಯ ಬರುತ್ತಾ ಇದೆ. ನಾನು ಹೇಳುವಂಥಾದ್ದು......

ಗೊಂದಲ

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನೇ ಮಾಡಿಕೊಟ್ಟಿಲ್ಲ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಹಾರಾಷ್ಟ್ರದವರು ಬಂದು ಇಲ್ಲಿ ಇನ್‌ವೆಸ್ಟಿಗೇಷನ್ ಮಾಡುತ್ತಾರೆ. ನಾವು ಬಹಳಷ್ಟು ವಿಷಯಗಳನ್ನು ಹೇಳುವಂಥಾದ್ದು ಇದೆ. ಈಗಾಗಲೇ ಒಂದು ಉತ್ತರ ಬಂದಿದೆ.

ಅಧ್ಯಕ್ಷರು : ಈ ರೀತಿಯಾದರೆ ಹೌಸ್‌ನ್ನು ಅಡ್ಜರ್ನ್ ಮಾಡಬೇಕಾಗುತ್ತದೆ. ನೀವು ಪ್ರಿಲಿಮನರಿ ಸಬ್‌ಮಿಷನ್ ಮಾತ್ರ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಸ್ಟಾಂಪ್ ಪೇಪರ್ ತನಿಖೆಯಾದ ಮೇಲೆ ಎಷ್ಟೊಂದು ರೆವಿನ್ಯೂ ಇನ್‌ಕಮ್ ಜಾಸ್ತಿಯಾಗುತ್ತಿದೆ? ಎಂಭತ್ತು ಸಾವಿರ ಕೋಟಿ ರೂ ಯಷ್ಟು ಇನ್‌ವಾಲ್‌ಮೆಂಟ್ ಇದ್ದಂಥಾದ್ದು ಜೈಲ್‌ನಲ್ಲಿದ್ದುಕೊಂಡು ಈತ ಮೊಬೈಲ್ ಫೋನ್ ಮುಖಾಂತರ ಮಾತನಾಡುವಂಥಾದ್ದು, ಜೈಲ್‌ನ ಅಧಿಕಾರಿಗಳಿಗೆ ಲಂಚ ಕೊಟ್ಟಿದ್ದಂಥಾದ್ದು ನಡೆಯುತ್ತಿದೆ ಅದಕ್ಕಾಗಿ

(XX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.)

ಸರ್ಕಾರ ಹೇಳಲಿ ಹಾಗಾದರೆ, ಸಿಬಿಐ ತನಿಖೆಗೆ ನಾವು ಕೊಟ್ಟುಬಿಡುತ್ತೇವೆಂದು ಹೇಳಿಬಿಡಲಿ ಇಲ್ಲಿ ಸಂಶಯದ ಕತ್ತಿ ಇವತ್ತು XX ಮೇಲಿದೆ, ಅವರ ತಮ್ಮ ರೇಹನ್‌ಬೇಗ್....

ಅಧ್ಯಕ್ಷರು : ಆಯಿತು ಸರ್ಕಾರದವರು ಏನು ಹೇಳುತ್ತಾರೆಂದು ನೋಡೋಣ.

ಶ್ರೀ ಜಗದೀಶ್ ಶೆಟ್ಟರ್ : ಅವರ ಮೇಲೆ ಸಂಶಯದ ಕತ್ತಿ ಇದೆ, ಅದಕ್ಕಾಗಿ, ನೈತಿಕ ಹೊಣೆ ಹೊತ್ತು ಅವರು ರಾಜಿನಾಮೆ ಕೊಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರು XX ಎಂದು ಪದೇ ಪದೇ ಹೇಳುತ್ತಿದ್ದಾರೆ. ಇದರ ಬಗ್ಗೆ ಈಗಾಗಲೇ ಸರ್ಕಾರದ ಗೃಹ ಸಚಿವ ಪಾಯಿಂಟ್ ಆಫ್ ಆರ್ಡರ್ ರೇಸ್‌ಮಾಡಿ ಉತ್ತರ ಕೇಳಿದ್ದಾರೆ ಎಂದು ಪದೇ ಪದೇ ಹೇಳುತ್ತಿದ್ದಾರೆ.

ಅಧ್ಯಕ್ಷರು : ನಿಯಮ 328 ಪ್ರಕಾರ ಮಾನ್ಯ ಮಂತ್ರಿಗಳ ಬಗ್ಗೆ ನಮಗೂ ನೋಟೀಸ್ ಕೊಟ್ಟಿಲ್ಲ, ಅವರಿಗೂ ಕೊಟ್ಟಿಲ್ಲ. XX ಎಂದು ಎಲ್ಲೆಲ್ಲಿ ಬಂದಿದೆಯೋ ಅದನ್ನೆಲ್ಲಾ ತೆಗೆಯಿರಿ.

ಗೊಂದಲ

ಅಧ್ಯಕ್ಷರು : ನಮಗೆ ನೋಟೀಸ್ ಕೊಟ್ಟು ಮಾತನಾಡಿ ಮಾನ್ಯ ರವರ ಬಗ್ಗೆ ನೋಟಿಸ್ ಕೊಟ್ಟಿದೆ.

ಗೊಂದಲ

ಶ್ರೀ ಡಿ.ವಿ. ಸದಾನಂದಗೌಡ : ಅವರ ತಮ್ಮನ ಮೇಲೆ ಆಪಾದನೆ ಮಾಡುತ್ತಿದ್ದೇವೆ, ಪರೋಕ್ಷವಾಗಿ ಅವರು ತಮ್ಮನಿಗೆ ಬೆಂಬಲ ಕೊಡುತ್ತಾರೆಂಬುದು ನಮ್ಮದು. ನಿಮಗೆ ಇಷ್ಟು ಭಯ ಏಕೆ? ಹಾಗಿದ್ದರೆ ಸಿಬಿಐ ಗೆ ಕೊಡಿ.

ಗೊಂದಲ

ಶ್ರೀ ಕಾಗೋಡು ತಿಮ್ಮಪ್ಪ : ನಮಗೇನೂ ಭಯವಿಲ್ಲ, ಆದರೆ, ತಾವು ಪ್ರೊಸೀಜರ್ ಫಾಲೋ ಮಾಡಿ...

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತಾ ಇದೆ.

ಗೊಂದಲ

ಶ್ರೀ ಡಿ.ವಿ. ಸದಾನಂದಗೌಡ : ನಿಮ್ಮ ಇಲಾಖೆಯ ಪೊಲೀಸರಿಗೆ 25 ಲಕ್ಷ ರೂ ಕೊಟ್ಟಿದ್ದಾರೆ..

ಶ್ರೀ ಕಾಗೋಡು ತಿಮ್ಮಪ್ಪ : ನೀವು ಮಂತ್ರಿಗಳ ಪ್ರಶ್ನೆ ಮಾಡಬೇಕಾದರೆ, ಮೊದಲು ನೋಟೀಸ್ ಕೊಟ್ಟು ಚರ್ಚೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಈ ಜೈಲಿನಲ್ಲೇ ಕರೀಂಲಾಲ ನಡೆಸಿದ್ದ ಅವಾಂತರಗಳು ಆಗಿನ ಡಿಜಿಪಿಅವರ ಗಮನಕ್ಕೆ ಬಂದಿದೆ. ಪ್ರತ್ಯೇಕ ಕೋಣೆ, ಟಿ.ವಿ. ಮೊಬೈಲ್ ಸೌಕರ್ಯ ಒದಗಿಸಲು ಜೈಲ್ ಅಧಿಕಾರಿಗಳಿಗೆ 25 ಲಕ್ಷ ರೂ ಕೊಟ್ಟಿರುವಂಥಾದ್ದು. ಕರೀಂಲಾಲಾಗೆ ಪ್ರತ್ಯೇಕ ಕೋಣೆ ಟಿ.ವಿ. ಇತ್ಯಾದಿ ಕೊಡುವುದಕ್ಕೆ 25 ಲಕ್ಷ ರೂಪಾಯಿಗಳ ಲಂಚ ಕೊಟ್ಟಿದ್ದಾರೆ. ಹಾಗಾದರೆ ಆ ಅಧಿಕಾರಿಗಳು ಇವತ್ತೂ ಇದ್ದಾರೆ.

(XX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

ಅಧ್ಯಕ್ಷರು : ಅವರು ಒಂದು ನಿಮಿಷದಲ್ಲಿ ಮುಗಿಸುತ್ತಾರೆ. ಗಲಾಟೆ ಇಲ್ಲದೇ ಹೋಗಿದ್ದರೆ, ಇಷ್ಟು ಹೊತ್ತಿಗೆ ಯಾವಾಗಲೋ ಮುಗಿಯುತ್ತಿತ್ತು. ಅವರು ಅಡ್ಜರ್ನಮೆಂಟ್ ಮೋಷನ್ ಕೊಟ್ಟಿದ್ದಾರೆ, ಅವರು ಪ್ರಿಲಿಮನರಿ ಸಬ್‌ಮಿಷನ್‌ನಲ್ಲಿ ಏನು ಹೇಳುತ್ತಾರೆ, ಅದನ್ನು ಕೇಳಬೇಕು.

ಶ್ರೀ ಸಿ. **ಚೆನ್ನಿಗಪ್ಪ** : ಈ ವಿಚಾರ ಬಹಳ ಮಹತ್ವವಾದ ವಿಚಾರ. ಇಡೀ ರಾಷ್ಟ್ರ ಮತ್ತು ರಾಜ್ಯಕ್ಕೆ ದ್ರೋಹ ಮಾಡಿದಂಥ ವಿಚಾರ ಇದು. ದಯಮಾಡಿ ಕರೀಂಲಾಲ್‌ರ ಕೇಸನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕು. ಇವತ್ತು ಸಾಂಗ್ಲಿಯಾನರವರು ಬರೆದಂಥ ಪೇಪರ್ ಸ್ಟೇಟ್‌ಮೆಂಟ್ ಇದೆಯಲ್ಲಾ, ಅದನ್ನು ಮಂಡಿಸಿ. ದಯಮಾಡಿ, ಇದನ್ನು ಹೆಚ್ಚು ಚರ್ಚೆ ಮಾಡದೆ ಸಿಬಿಐ ತನಿಖೆಗೆ ಕೊಡಬೇಕು.

ಶ್ರೀ ಡಿ.ಬಿ. **ಚಂದ್ರೇಗೌಡ** : ನೋಟೀಸ್ ಕೊಡಿ ಅವರು ಅಲಿಗೇಷನ್ಸ್ ಮಾಡುವುದು, ಕಡತದಲ್ಲಿ ಉಳಿಯುವುದು ನಮ್ಮ ಪಾಡಿಗೆ ನಾವು, ಅವರ ಪಾಡಿಗೆ ಅವರು ಹೋಗುವುದು You must give in an opportnity to explain...

ಶ್ರೀ **ಕರಿಯಣ್ಣ** : ಅವರ ನಾಯಕರಿಗೆ ಅವಕಾಶ ಕೊಡುತ್ತೀರೋ ಅಥವಾ ಅವರ ಕಡೆಯ ಎಲ್ಲಾ ಸದಸ್ಯರಿಗೂ ಅವಕಾಶ ಕೊಡುತ್ತೀರೋ? ಅವರ ಪಕ್ಷದಲ್ಲಿ ಅವರ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಎಲ್ಲರೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಾದರೆ ಮಾಡಿಕೊಡಿ, ನಮ್ಮದೇನೂ ಅಭ್ಯಂತರ ಇಲ್ಲ. ಈಗಾಗಲೇ ಅವರ ಪಕ್ಷದ ನಾಯಕರಿಗೆ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ನೀವು ಯಾವ ರೀತಿಯಲ್ಲಿ ಯಾರು ಯಾರಿಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೀರೋ, ಆ ತೀರ್ಮಾನ ತಮಗೆ ಬಿಟ್ಟಿದ್ದು. ಆದರೆ, ಅವರ ಕಡೆಯ ಎಲ್ಲರೂ ಪ್ರಸ್ತಾಪ ಮಾಡಿದರೆ ಹೇಗೆ? ಅವರ ನಾಯಕರು ಈಗಾಗಲೇ ಎಲ್ಲಾ ಹೇಳಿದ್ದಾರೆ.

ಶ್ರೀ ಡಿ.ವಿ. **ಸದಾನಂದಗೌಡ** : ನಾವು ಮಾಡದನ್ನು ಮಾತನಾಡಬೇಕು ಯಾವದನ್ನು ಮಾತನಾಡಬಾರದು ಎಂದು ನಮಗೆ ಹೇಳಲು ತಾವೇನು ಸೂಪರ್ ಸ್ಪೀಕರಾ?

ಶ್ರೀ **ಕರಿಯಣ್ಣ** : ಅವರ ನಾಯಕರು ಎಲ್ಲಾ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

Mr. Speaker : I want a reply from the government side.ತಾವು ಹೇಳಿದ್ದೆಲ್ಲಾ ಆಗಿದೆ. ಸರ್ಕಾರದವರು ಇದರ ಬಗ್ಗೆ ಏನು ಹೇಳುತ್ತಾರೆಂದು ಕೇಳೋಣ..

ಶ್ರೀ ಡಿ.ವಿ. **ಸದಾನಂದಗೌಡ** : ಸರ್ಕಾರದಿಂದ ಎರಡು ಕ್ಲಾರಿಫಿಕೇಷನ್ ಆಗಬೇಕು. ನಮ್ಮ ನಾಯಕರು ಏನು ಹೇಳಿದರು. ಈ ಸಂಪುಟದ ಒಬ್ಬ ಮಂತ್ರಿಯು ತಮ್ಮ ಇದರಲ್ಲಿ ಶಾಮೀಲಾಗಿದ್ದಾರೆಂಬ ಮಾತನ್ನು ಅವರು ಹೇಳಿದರು. XX ಇಲ್ಲಿ ಅವರ ತಮ್ಮನ ವಿಷಯ ಇದೆ. ಆದರೆ, ನೀವು ನೋಟೀಸ್ ಕೊಡಬೇಕೆಂದು ಹೇಳಬಹುದು. ಇದು ಪತ್ರಿಕೆಗಳಲ್ಲಿ ಬಂದ ಪ್ರಕಾರ ಇಲ್ಲ. ನಿಜವಾದ ಅರ್ಥದಲ್ಲಿ ಅವರ XX ತಮ್ಮ ಇದರಲ್ಲಿ ಶಾಮೀಲಾದ ಕಾರಣ, ನಾವು ಹೇಳುವಾಗ ಅವರ ತಮ್ಮ ಎಂದು ಹೆಳುವುದರಲ್ಲಿ ತಪ್ಪೇನು? ಯಾರಾದರೂ ಒಬ್ಬ ತಮ್ಮನನ್ನು ರೆಫರ್ ಮಾಡುವುದರಲ್ಲಿ ತಪ್ಪೇನು? ಇವರಿಗೇಕೆ ಅಷ್ಟು ಸಂಶಯ ಅವರ ಹೆಸರನ್ನು ಎತ್ತಿದ ಕೂಡಲೇ ಇವರಿಗೇನು ಕೋಪ ಬರುವುದು?

ಗೊಂದಲ

ಶ್ರೀ ಡಿ.ವಿ. **ಸದಾನಂದಗೌಡ** : ಅಧ್ಯಕ್ಷರೇ, ಇದರಲ್ಲಿ ಭಾರಿ ಪ್ರಾಮುಖ್ಯವಾದುದನ್ನು

(XX ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.)

ನೋಡಬೇಕು. ರಾಜ್ಯಸರ್ಕಾರದಲ್ಲಿರುವಂಥ ಹಿರಿಯ ಪೋಲೀಸ್ ಅಧಿಕಾರಿಗಳು ಕರೀಂಲಾಲ್‌ನ ದಾಕ್ಷಿಣ್ಯಕ್ಕೆ, ಅವನ ಕೃಪಾಕಟಾಕ್ಷದಲ್ಲಿ ಬದುಕುತ್ತಾ ಇದ್ದಾರೆ.

ಅಧ್ಯಕ್ಷರು : ಸರ್ಕಾರದವರು ಏನು ಹೇಳುತ್ತಾರೆಂದು ಕೇಳೋಣ. ತಾವು ಮಾತನಾಡಿದ್ದು ಸಾಕು. ತಾವು ಸಹಿ ಹಾಕಿಲ್ಲ. ಇದರಲ್ಲಿ ಜಗದೀಶ್ ಶೆಟ್ಟರ್ ಒಬ್ಬರೇ ಸಹಿ ಹಾಕಿರುವುದು.

11.20 ಎ.ಎಂ.

ನಿಮ್ಮ ನಾಯಕರು ಒಬ್ಬರು ಹೇಳಿದರೆ ಸಾಲದೆ? ನೀವು ಎಕ್ಸ್‌ಟ್ರಾ ಹೇಳುವುದು ಏನಿದೆ? ಇವೊತ್ತು ಅಜೆಂಡದಲ್ಲಿ ಬೇಕಾದಷ್ಟು ಸಬ್‌ಜೆಕ್ಟ್ಸ್ ಇವೆ. ಸದಸ್ಯರುಗಳು ಕಾಯುತ್ತ ಇದ್ದಾರೆ. ಕಾಲಿಂಗ್ ಅಟೆನ್‌ಶನ್, ಕ್ವೆಶ್ಚನ್ ಅವರ್, ಜೀರೋ ಅವರ್ ಮುಂತಾಗಿ ಬೇಕದಷ್ಟು ವಿಷಯಗಳು ಇವೆ. ಜೀರೋ ಅವರ್ ನಿನ್ನೆ ಕೂಡ ಆಗಿಲ್ಲ. ನಾನು ನೋಡಿದೆ. ಹಾಗಾದರೆ ಅದರ ಬಗ್ಗೆ ನಿಮಗೇನೂ ಕಾಳಜಿ ಇಲ್ಲವೇ ಇಲ್ಲವೇ? ಶೂನ್ಯವೇಳೆಯ ಬಗ್ಗೆ ಕಾಳಜಿ ಇಲ್ಲವೇ? ನಿಮ್ಮ ನಾಯಕರು ಒಬ್ಬರು ಕೇಳಿದರೆ ಸಾಲದೇ? ಆ ವಿಚಾರ ಗಂಭೀರವಲ್ಲವೇ?

ಶ್ರೀ ಡಿ.ವಿ. ಸದಾನಂದಗೌಡ : ಇದು 80 ಸಾವಿರ ಕೋಟಿ ರೂಪಾಯಿಗಳಷ್ಟು ಹಣದ ವಿಚಾರ, ಇದು ಕೂಡ ಗಂಭೀರವಲ್ಲವೇ?

ಅಧ್ಯಕ್ಷರು : 12 ಗಮನಸೆಳೆಯುವ ಸೂಚನೆಗಳು ಇವೆ. ಶೂನ್ಯವೇಳೆಯದ್ದು ಸುಮಾರು 20–30 ಇವೆ. ಅದರ ಬಗ್ಗೆ ಕಾಳಜಿ ಇಲ್ಲವೇ? ಬೇರೆ ಸದಸ್ಯರ ಗತಿ ಏನಾಗಬೇಕು? ಬರೇ ನೀವೇ ಮಾತನಾಡಿಕೊಂಡಿದ್ದರೆ ಸಾಕೆ?

ಶ್ರೀ ಎಸ್.ಎಸ್. ಪಾಟೀಲ್ : ಸರಕಾರದ ಚರ್ಮವು ದಪ್ಪ ಇದೆ. ಏನು ಹೇಳಿದರೂ ಅವರಿಗೆ ನಾಟುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮದು ಆಕಳೂ ಚರ್ಮ, ನಿಮ್ಮದು ಸ್ವಲ್ಪ ಎಮ್ಮೆ ಚರ್ಮ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಇಡೀ ಪೋಲೀಸ್ ಇಲಾಖೆಯ ಮೊರಾಲಿಟಿಯ ಬಗ್ಗೆ ಜನರು ಸಂಶಯದಿಂದ ನೋಡುವಂಥ ಒಂದು ದೊಡ್ಡ ಇಶ್ಯೂ ಇದಾಗಿದೆ. ನೀವು ಅಧಿಕಾರದಲ್ಲಿರುವಾಗ ನಿಮ್ಮ ಅಧಿಕಾರವನ್ನು ಉಪಯೋಗಿಸಿ ಅವರ ಬಾಯನ್ನು ಮುಚ್ಚಿಸುತ್ತಾ ಇದ್ದೀರಿ. ಅಧಿಕಾರದಲ್ಲಿರುವಾಗ ಹೀಗೆಯೇ ನಡೆದುಕೊಳ್ಳಿ ಎಂದು ಹೇಳುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ವಿಜಿಲೆನ್ಸ್ ಕಮಿಟಿ ರಿಪೋರ್ಟ್‌ನ್ನು ನೀವು ಮುಚ್ಚಿಡುತ್ತೀರಿ. ಇಲ್ಲಿ ಸಿಬಿಐ ವಿಚಾರ ಕೇಳುತ್ತೀರಿ. Coffee calling the kettle black.

ಶ್ರೀ ಡಿ.ವಿ. ಸದಾನಂದಗೌಡ : ನಾವು ಸತ್ಯಸಂಗತಿಗಳನ್ನು ಹೇಳಬೇಕೆಂದು ಅವರಿಗೆ ಮನಸ್ಸಿದ್ದರೂ ಕೂಡ ನಿಮ್ಮಂಥವರ ಕೈಯಲ್ಲಿ ಅವರಿಗೆ ಏನೂ ಮಾಡುವುದಕ್ಕೆ ಆಗುತ್ತಾ ಇಲ್ಲ. ಅವರು ಬಾಯಿ ತೆಗೆಯುವುದಕ್ಕೆ ಆಗುವುದಿಲ್ಲ. ಹೀಗೇ ಮಾಡಿ ಎಂದು ನೀವು ನಿರ್ದೇಶನ ಕೊಡುತ್ತೀರಿ. ಸಾಂಗ್ಲಿಯಾನ ಇದನ್ನು ಸಿಬಿಐಗೆ ರೆಫರ್ ಮಾಡಬೇಕೆಂದು ಸರಕಾರಕ್ಕೆ ಬರೆದಿದ್ದಾರೆ. ಅದನ್ನು ಇವರು ಯಾಕೆ ಮಾಡಲಿಲ್ಲ? ನೀವು ರೆಫರ್ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಇವೊತ್ತು ಸದನದಲ್ಲಿ ಬೇಕಾದಷ್ಟು ವಿಚಾರಗಳು ಸದನದಲ್ಲಿ ಚರ್ಚೆಮಾಡತಕ್ಕಂಥಾದ್ದು ಇದೆ. ಅವುಗಳು ಸಾರ್ವಜನಿಕರಿಗೆ ಸಂಬಂಧಪಟ್ಟಂಥವುಗಳು. ದಯಮಾಡಿ ಈ ವಿಚಾರಕ್ಕೆ ಒಂದು ಮುಕ್ತಾಯ ಮಾಡಿಸಿ. ನಮಗೆ ಇದಕ್ಕೆ ಉತ್ತರ ಬೇಡವೇ? There is a

limit for this.,

ಅಧ್ಯಕ್ಷರು : ಸರಕಾರದ ಕಡೆಯಿಂದ ಉತ್ತರವನ್ನು ಹೇಳಿ. ತಾವು ಹೇಳುವುದನ್ನು ಹೇಳಿದ್ದೀರಲ್ಲಾ? ಪರ್ದರ್‌ಡಿಟೈಲ್ಸ್ ಬೇಕಾಗಿಲ್ಲ ನನಗೆ. I have understood all your points. ಮತ್ತೆ ಮುಂದುವರಿಸುವುದು ಏನಿದೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಯಾವ ಉದ್ದೇಶಕ್ಕಾಗಿ ಇದನ್ನು ಸಿಬಿಐಗೆ ಕೊಡಬೇಕೆಂಬ ಬಗ್ಗೆ ನಾನು ಹೇಳುತ್ತಾ ಇದ್ದೇನೆ. ಹಿಂದೆಯೂ ಕೂಡ ಈ ವಿಚಾರವು ಸದನದಲ್ಲಿ ಚರ್ಚೆಯಾಯಿತು. ಆ ಚರ್ಚೆಯಾದ ನಂತರ ಸರಕಾರದವರು ಈ ಕುರಿತು ಸ್ಪಷ್ಟೀಕರಣ ನೀಡಬೇಕಾಗಿತ್ತು. ಇದರಲ್ಲಿ ಯಾರ್‍ಯಾರ ಮೇಲೆ ಸಂಶಯದ ಛಾಯೆ ಇದೆಯೆಂಬುದು ಜಗಜ್ಜಾಹೀರು ವಿಷಯವಾಗಿದೆ. ಈ ವಿಚಾರವು ಇಡೀ ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಪ್ರಚಾರದಲ್ಲಿದೆ. ಮಹಾರಾಷ್ಟ್ರದಲ್ಲಿ ಈ ಕುರಿತ ತನಿಖೆಯಲ್ಲಿ ಏನೊಂದು ಪ್ರೋಗ್ರೆಸ್ ಆಗುತ್ತಾ ಇದೆ, ಏಕೆಂದರೆ ಮೂಲ ಅಪರಾಧಿಯು ಕರ್ನಾಟಕದವನು. ಕರೀಮ್‌ಲಾಲ್., ಅವನನ್ನು ಅರೆಸ್ಟ್ ಮಾಡಿ ಜೈಲ್‌ನಲ್ಲಿ ಇಟ್ಟಿದ್ದೀರಿ ನೀವು ಆದರೆ ಇವೊತ್ತು ಮಹಾರಾಷ್ಟ್ರದಲ್ಲಿ ಯಾವ ರೀತಿಯಲ್ಲಿ ತೀವ್ರಗತಿಯಲ್ಲಿ ತನಿಖೆಯಾಗುತ್ತಾ ಇದೆ, ಅಪರಾಧಿಯ ಬೇರು ಇಲ್ಲಿಯೇ ಇರುವಂಥಾದ್ದು. ಅದು ಖಾನಾಪುರ ಮತ್ತು ಕರ್ನಾಟಕದಲ್ಲಿ ಇದ್ದಂಥಾದ್ದು.

ಅಧ್ಯಕ್ಷರು : ಸಿಬಿಐಗೆ ಕೊಡಿ ಎಂದು ಹೇಳಿ. ಅಲ್ಲಿಗೆ ಮುಗಿಯಿತಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ : ಸಿಬಿಐಗೆ ಕೊಡುವುದು ಏಕೆ ಎಂದಾದರೂ ನಾವು ಹೇಳಬೇಕಲ್ಲವೆ?

ಅಧ್ಯಕ್ಷರು : ಹೇಳಿದ್ದೀರಲ್ಲಾ, ಇಷ್ಟು ಹೊತ್ತು ತಾವು ಕಮೆನ್ಸ್ ಮಾಡಿ 45 ಮಿನಿಟ್ಸ್ ಆಯಿತು. ತಾವು ಬೇಕಾದಷ್ಟು ಮಾತನಾಡಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ನನಗೆ ಮಾತನಾಡಲು ಅವರು ಬಿಡುತ್ತಾ ಇಲ್ಲ. ನಾನು ಹೇಳಬಯಸುವುದೇನೆಂದರೆ, ಮಹಾರಾಷ್ಟ್ರದಲ್ಲಿ ತನಿಖೆ ಮಾಡಿ ಅಲ್ಲಿನ ನಾಲ್ಕೈದು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಹಿರಿಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಒಬ್ಬ ಶಾಸಕರನ್ನು ಅಲ್ಲಿ ಅರೆಸ್ಟ್ ಮಾಡಿದ್ದಾರೆ. ಮೊನ್ನೆ ಅಲ್ಲಿನ ಪುಣೆಯ ಪೋಲೀಸರು ಕರ್ನಾಟಕಕ್ಕೆ ಬಂದು, ಇಲ್ಲಿ ಕರೀಮ್‌ಲಾಲಾನ ಪರವಾಗಿ ಯಾರು ವಕೀಲಿ ಮಡುತ್ತಾ ಇದ್ದರು, ಆ ರಶೀದ್ ಕುಲಕರ್ಣಿ ಎಂಬವರನ್ನು ಅವರು ಅರೆಸ್ಟ್ ಮಾಡುವಂತಾಯಿತು. ಅವರು ಆತನನ್ನು ಅರೆಸ್ಟ್ ಮಾಡಿದರು ಎಂದಾದರೆ ನಮ್ಮ ರಾಜ್ಯದ ಪೋಲೀಸರು ಇಲ್ಲಿಯವರೆಗೂ ಏಕೆ ಅರೆಸ್ಟ್ ಮಾಡಿಲ್ಲ? ಇವರಿಗೆ ಇಲ್ಲಿಯವರೆಗೆ ಅದು ಹೇಗೆ ಪತ್ತೆಯಾಗಲಿಲ್ಲ? ಇದೆಲ್ಲವನ್ನೂ ಹೇಳಬೇಕಾಗುತ್ತದೆ.

ಅಧ್ಯಕ್ಷರು : ತಾವು ಡೀಟೈಲ್ ಆಗಿ ಹೋಗುತ್ತಿದ್ದೀರಿ. This is only a preliminary submission. You can't argue in detail. ಅವರು ಹನ್ನೆರಡು ಜನರು ಎಲ್ಲಾ ಅವಕಾಶಗಳನ್ನು ಫ್ರಂಟ್‌ಬೆಂಚ್‌ನವರಿಗೆ ಕೊಡುತ್ತಾ ಇದ್ದೀರಿ. ನಮಗೂ ಕೊಡಿ ಎಂದು ಕೇಳುತ್ತಿದ್ದಾರೆ. ನೀವು ಬೇಗ ಮುಗಿಸುವುದೂ ಇಲ್ಲ. ಹೇಳಿದ್ದನ್ನೇ ಹೇಳುತ್ತಾ ಇದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ನಿಲುವಳಿ ಸೂಚನೆಯ ಮೇಲೆ ಈ ಸದನದಲ್ಲಿ ಇಡೀ ದಿವಸ ಚರ್ಚೆ ನಡೆದಿದೆ ಪುಣೆಯ ಪೋಲೀಸರು ಬಂದು ಅರೆಸ್ಟ್ ಮಾಡುತ್ತಾರೆ. ನಿಮಗೆ ಅರೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ.

ಗೊಂದಲ

ಇವೊತ್ತು ರೆಹಮಾನ್ ಬೇಗ್‌ನನ್ನು ನಿಮಗೆ ಅರೆಸ್ಟ್ ಮಾಡುವುದಕ್ಕೆ ಆಗಲಿಲ್ಲ. ಆತನ ಹೇಳಿಕೆಯನ್ನು

ತೆಗೆದುಕೊಂಡಿದ್ದೀರೊ ಹೇಗೆ? ಇಂಥ ವಿಚಾರಗಳನ್ನು ನಾನು ಹೇಳಬೇಕಾಗುತ್ತದೆ.

ಅಧ್ಯಕ್ಷರು : ತಾವು ಮುಗಿಸಿ, ಸರಕಾರದವರನ್ನು ಬೇರೆ ವಿಷಯಕ್ಕೆ ಕರೆಯ ಬೇಕಾಗುತ್ತದೆ. ಸಿಬಿಐಗೆ ಒಪ್ಪಿಸಿ ಎಂದು ಹೇಳಿ. ನಾವು ಇದನ್ನು ಅಲೋ ಮಾಡಿದ ಮೇಲೆ ಬೇಕಾದರೆ ಒಂದು ಗಂಟೆ ಕಾಲ ಮಾತನಾಡಿ. At this stage, you cannot tell all these details. ತಾವು ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್ : ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡುವಂಥ ಕೆಲಸ ಇವೊತ್ತು ಸರಕಾರದಿಂದ ಆಗುತ್ತಾ ಇದೆ. ಭ್ರಷ್ಟ ಅಧಿಕಾರಿಗಳಿಗೆ ಮಣೆ ಹಾಕುವಂಥ ಕೆಲಸವು ಇವೊತ್ತು ಆಗುತ್ತ ಇದೆ.

ಗೊಂದಲ

ಅಧ್ಯಕ್ಷರು : ಇದು ಪ್ರಿಲಿಮಿನರಿ ಸಬ್‌ಮಿಶನ್ ಎಂದು ಹೇಳಿದ್ದೇನೆ. ಪ್ರಿಲಿಮಿನರಿ ಸಬ್‌ಮಿಶನ್‌ನಲ್ಲಿ ಇದೆಲ್ಲಾಬೇಕಾಗಿಲ್ಲ. I am very sorry.

ಶ್ರೀ ಜಗದೀಶ್ ಶೆಟ್ಟರ್ : ನೀವು ಎಷ್ಟು ಜನ ಭ್ರಷ್ಟ ಅಧಿಕಾರಿಗಳನ್ನು ಅರೆಸ್ಟ್ ಮಾಡಿದ್ದೀರಿ? ಸಸ್ಪೆಂಡ್ ಮಾಡಿದ್ದೀರಿ? ನನಗೆ ಇನ್ನೂ ಮಾತನಾಡುವುದಿದೆ. ಅವಕಾಶ ಕೊಡಿ.

ಅಧ್ಯಕ್ಷರು : ತಾವು ಇನ್ನೂ ಮಾತನಾಡಲು ಪ್ರಿಲಿಮಿನರಿ ಸಬ್‌ಮಿಶನ್‌ನಲ್ಲಿ ಆಗುವುದಿಲ್ಲ. ನಾನು ಅಲೋ ಮಾಡಿದ ಮೇಲೆ ನೀವು ಒನ್‌ಅವರ್ ಮಾತನಾಡಿ. If I allow ಅಲೋ ಮಾಡಿ ಆದಮೇಲೆ ಬೇಕಾದರೆ ನೀವು ಒಂದು ಗಂಟೆ ಮಾತನಾಡಿ I will allow you more than one hour, if I accept it, if I admit it. Not at this stage.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಇದೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಎಲ್ಲದಕ್ಕೂ ಪಾಯಿಂಟ್ ಆಫ್ ಆರ್ಡರ್ ಅಂದರೆ?

ಅಧ್ಯಕ್ಷರು : ಹೌದು ನೀವು ಪ್ರಿಲಿಮಿನರಿ ಸಬ್‌ಮಿಶನ್‌ನ್ನು ಒಂದು ಗಂಟೆಗೂ ಹೆಚ್ಚು ತೆಗೆದುಕೊಂಡಿದ್ದಿರಿ. ಆದುದರಿಂದ ತಾವು ದಯಮಾಡಿ ಮುಗಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಮಾತನಾಡುವಾಗ ನಾವು ನೆನಪಿನಲ್ಲಿ ಮತ್ತು ಗಮನದಲ್ಲಿಟ್ಟುಕೊಳ್ಳತಕ್ಕಂಥ ವಿಷಯವೇನೆಂದರೆ, Restrictions on right to move motion: ರೂಲ್ – 62 ರ sub Clause (VII) ರಲ್ಲಿ ಏನು ಹೇಳುತ್ತದೆ ಅಂದರೆ, "the motion shall not deal with any matter which is under adjudication by a Court of Law having jurisdiction in any part of India", ಎನ್ನತಕ್ಕಂಥಾದ್ದು ಇದೆ. ಈಗಾಗಲೇ ನಾನು ಹೇಳಿದ್ದೇನೆ. ಇದು ಕೋರ್ಟ್‌ನಲ್ಲಿ ಪೆಂಡಿಂಗ್ ಇದೆ. ಇದು ಸಬ್‌ಜ್ಯುಡೀಸ್ ಆಗುತ್ತದೆ.

ಗೊಂದಲ

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಸಚಿವರಿಗೆ ಮಾತನಾಡಲು ಬಿಡುವುದಿಲ್ಲವೆಂದರೆ, ಹೇಗೆ? ಇದು ವಿರೋಧಪಕ್ಷದ ನಾಯಕರ ವರ್ತನೆಯೇ ಇದು?

ಶ್ರೀ ಮಲ್ಲಿಕಾಜುನ ಖರ್ಗೆ : ಇಷ್ಟು ವಿಚಾರಗಳಿವೆ ಅದಕ್ಕೆ this should not deal with any matter in Court. ಯಾಕೆಂದರೆ ನಾಳೆ, ನಾವು ಹೇಳುತ್ತಾ ಹೋಗುತ್ತೇವೆ ಅಂದರೆ

ಇನ್‌ವೆಸ್ಟಿಗೇಶನ್‌ಗೆ ತೊಂದರೆಯಾಗುತ್ತದೆ. ಕೋರ್ಟ್‌ನಲ್ಲಿರುವ ಕೇಸ್‌ಗೆ ತೊಂದರೆಯಾಗುತ್ತದೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಕೋರ್ಟ್‌ನ ನೆಪದಲ್ಲಿ ಮಂತ್ರಿಗಳನ್ನು ಮತ್ತು ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಾ ಇದ್ದಾರೆ. ಸಿಬಿಐಗೆ ಏಕೆ ಕೊಡಬಾರದು? ಸ್ಪೆಷಲ್ ಕೋರ್ಟ್ ಮಾಡಿದ್ದೀರಲ್ಲಾ? ಇಲ್ಲಿ ಚರ್ಚೆ ಮಾಡಲು ಸರಕಾರ ತಯಾರಾಗಿಲ್ಲ.

ಗೊಂದಲ

ಅಧ್ಯಕ್ಷರು : ತಾವು ಕುಳಿತುಕೊಳ್ಳುವುದಿಲ್ಲ. They want to make capital out of it. ತಾವು ಪ್ರಲಿಮಿನರಿ ಸಬ್‌ಮಿಶನ್‌ನನ್ನು ಮುಗಿಸಿ ಅವರು ಕೋರ್ಟ್‌ನಲ್ಲಿರುವ ವಿಚಾರವನ್ನು ಇಲ್ಲಿ ಎತ್ತ ಕೂಡದು ಎಂದು ಹೇಳಿದ್ದಾರೆ. It will amount to infuence then investigation therfore I uphold the point of order raised Mr. Kharge. What he has raised is exactly correct. ದಯವಿಟ್ಟು ಕುಳಿತುಕೊಳ್ಳಿ ತಾವುಗಳು ಹೇಳುವುದನ್ನು ಹೇಳಿಯಾಯಿತಲ್ಲ?

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ನಾವು ಆ ವಿಚಾರಕ್ಕೆ ಪೂರಕವಾದ ವಿಷಯಗಳನ್ನು ಮಾತನಾಡುತ್ತೇವೆ. ಚರ್ಚೆಗೆ ಅವಕಾಶ ಮಾಡಿಕೊಡಿ. ಯಾರಿಗೆ ಎಷ್ಟು ಹಣ ಕೊಟ್ಟಿದ್ದಾರೆಂದು ಹೇಳಬೇಕಲ್ಲಾ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಯಾರ್ಯಾರಿಗೆ ಎಷ್ಟು ಲಂಚ ಕೊಟ್ಟಿದ್ದಾರೆ ಎನ್ನುವುದು...

ಗೊಂದಲ

ಅಧ್ಯಕ್ಷರು : ತಮ್ಮದು ಆಯಿತಾ?

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ನನಗೆ ವಿಷಯ ಮಂಡನೆ ಮಾಡುವುದಕ್ಕೆ ಬಿಡುತ್ತಿಲ್ಲ.

ಅಧ್ಯಕ್ಷರು : ಎಲ್ಲಾ ಮಂಡನೆ ಮಾಡಿದ್ದೀರಿ. ನನಗೆ ಪ್ರತಿಯೊಂದೂ ಅರ್ಥವಾಗಿದೆ. ಇಲ್ಲಿ ನಾನೊಬ್ಬನೇ ಅರ್ಥಮಾಡಿಕೊಳ್ಳಬೇಕಾಗಿರುವುದು. ಇದನ್ನು ಅಡ್ಮಿಟ್ ಮಾಡಬೇಕೋ ಬಿಡಬೇಕೋ ಎನ್ನುವುದು ನನಗೆ ಅರ್ಥವಾಗಿದೆ. ನಾನು ಹೇಳಿದ ಮೇಲೆ ಪುನಃ ಆ ವಿಷಯವನ್ನು ಏಕೆ ಹೇಳುತ್ತೀರಿ?

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಅವರೇನು ಮಾಡುತ್ತಿದ್ದಾರೆಂದರೆ...

ಗೊಂದಲ

ಅಧ್ಯಕ್ಷರು : ಅವರಿಗೆ ಅರ್ಥವಾಗುವುದಿಲ್ಲ. ಅಡ್ಮಿಟ್ ಮಾಡಿದಮೇಲೆ not at this stage ತಾವು ಈಗ ಅವರಿಗೆ ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡುತ್ತೀರೋ ಇಲ್ಲವೋ? ತಾವು ಉತ್ತರ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಅವರದೇನು ಇದೆ? ಅವರು ಚರ್ಚೆ ಮಾಡುವುದು ಬೇಡವೆನ್ನುತ್ತಾರೆ.

ಅಧ್ಯಕ್ಷರು : ಅದು ಬೇರೆ ವಿಷಯ. Let us hear them ಅವರು ಏನು ಹೇಳುತ್ತಾರೋ ನೋಡೋಣ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಅದನ್ನೇ ಹೇಳುತ್ತಿದ್ದಾರೆ ಅವರು.

ಅಧ್ಯಕ್ಷರು : ತಾವು ಮುಗಿಸುತ್ತೀರೋ ಇಲ್ಲವೋ ಸ್ವಾಮಿ.

ಶ್ರೀ ಜಗದೀಶ್ ಶೆಟ್ಟರ್ : ನಾನು ಮುಗಿಸುತ್ತೇನೆ.

ಅಧ್ಯಕ್ಷರು : ಮುಗಿಸಿ. you please conclude.

ಶ್ರೀ ಜಗದೀಶ್ ಶೆಟ್ಟರ್ : ಅವರು ಕೂತರೆ ನಾನು ಕನ್‌ಕ್ಲೂಡ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ.....

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ತಾವು ಡಿಸ್ ಅಲೋ ಮಡಿದ್ದೀರಿ. ಈಗ ಏನು ಚರ್ಚೆಯಾಗುತ್ತಿದೆ ಎಂದು ನಮಗೆ ಸ್ವಲ್ಪ ಗೊತ್ತಾದರೆ....

Mr. Speaker : Whatever the Point of order raised by Honble Home Minister I uphold it.

ಶ್ರೀ ಡಿ.ಬಿ. ಚಂದ್ರೇಗೌಡ : ಪಾಯಿಂಟ್ ಆಫ್ ಆರ್ಡರ್‌ಅನ್ನು ಅಪ್‌ಹೆಲ್ಡ್ ಮಾಡಿದ ಮೇಲೆ...

ಅಧ್ಯಕ್ಷರು : ಕೋರ್ಟು ವಿಷಯ ಮಾತನಾಡಬೇಡಿಯಪ್ಪ ದಯವಿಟ್ಟು.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಕೋರ್ಟ ವಿಷಯವನ್ನು ನಾವು ತೆಗೆದೇ ಇಲ್ಲ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಪಾಯಿಂಟ್ ಆಫ್ ಆರ್ಡರನ್ನು ಅಪ್‌ಹೆಲ್ಡ್ ಎಂದು ತಾವು ಅಪ್ಪಣೆ ಕೊಡಿಸಿದಿರಿ. ಮತ್ತೆ ಅದೇ ವಿಚಾರದಲ್ಲಿ ಚರ್ಚೆಯಾಗುತ್ತಿದೆ.

ಗೊಂದಲ

ಶ್ರೀ ಡಿ.ವಿ. ಸದಾನಂದಗೌಡ : ನೀವು ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದ್ದೀರಿ. ನೀವು ಇಲ್ಲಿ ಚರ್ಚೆ ಮಾಡುವುದಕ್ಕೆ ಬಿಡುತ್ತಿಲ್ಲ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಪಾಯಿಂಟ್ ಅಫ್ ಆರ್ಡರನ್ನು ತಾವು ಆಪ್‌ಹೋಲ್ಡ್ ಮಾಡಿದ್ದೀರಿ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರ ತಮ್ಮ ಭಾಷಣವನ್ನು ದಯವಿಟ್ಟು ಮುಗಿಸಿ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಮೂಲಭೂತವಾಗಿ ಇರತಕ್ಕಂಥದ್ದು ರಿಪೋರ್ಟ್‌ನಲ್ಲಿ ಏನು ಇದೆ ಎಂದರೆ ಇಲ್ಲಿ ಎರಡು.....

ಅಧ್ಯಕ್ಷರು : ತಮ್ಮದು ಆಗಲೇ ಆಗಿದೆ. ಶೆಟ್ಟರ್ ಸಾಹೇಬರೇ, ತಾವು ಮುಗಿಸುತ್ತೀರೋ ಇಲ್ಲವೋ? ತಾವು ಮುಗಿಸಿ. ಅವರು ಉತ್ತರ ಹೇಳುತ್ತಾರೆ. ತಾವು ಮುಗಿಸಿ. ತಾವು ಮುಗಿಸದಿದ್ದರೆ

ನಾನು ಸರ್ಕಾರದವರನ್ನು ಕರೆಯಬೇಕಾಗುತ್ತದೆ.

ಗೊಂದಲ

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ನನ್ನದೊಂದು ವಿನಂತಿ.

ಗೊಂದಲ

ಅಧ್ಯಕ್ಷರು : ಮಾನ್ಯ ಸೋಮಶೇಖರ್, ತಮಗೆ ಆಗಲೇ ಸಮಯ ಕೊಟ್ಟೆ. ತಾವು ಕೇಳಿದ್ದೀರಿ.

ಶ್ರೀ ಬಿ. ಸೋಮಶೇಖರ್ : ಒಂದೇ ಒಂದು ಸೆಕೆಂಡ್.

ಅಧ್ಯಕ್ಷರು : ಜ್ಞಾಪಕ ಬಂದಾಗ ಪೇಪರ್‌ನಲ್ಲಿ ಓದಿದಾಗೆಲ್ಲಾ ಇಲ್ಲಿ ಕೇಳುವುದಕ್ಕಾಗುತ್ತದೆಯೇ?

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ನನ್ನದೊಂದು ವಿನಂತಿ. ಅವರು ಮಾತನಾಡಿಯಾದ ಮೇಲೆ ಮಂತ್ರಿಗಳು ಮಾತನಾಡಬೇಕಾದರೆ ಅವರು ಎದ್ದುನಿಂತುಕೊಳ್ಳಕೂಡದು. ಈಗ ಏನು ಮಾಡುತ್ತಾರೆ, ಅವರದೆಲ್ಲಾ ಮಾತು ಮುಗಿಸಿದಮೇಲೆ ಉತ್ತರ ಕೊಡಬೇಕಾದರೆ ಅವರೊಂದು ನಾಲ್ಕೈದು ಜನ ನಿಂತುಕೊಂಡು ಕೂಗಿಕೊಂಡುಬಿಟ್ಟರೆ ಮತ್ತೆ ಮಂತ್ರಿಗಳನ್ನು ಏಕೆ ಕರೆಯುತ್ತೀರಿ ನೀವು? ಮತ್ತೆ ಏತಕ್ಕೆ ಮಾತನಾಡಬೇಕು? ವಿರೋಧಪಕ್ಷದ ನಾಯಕರೂ ಗೌರವವನ್ನು ಕೊಡಬೇಕು.

ಗೊಂದಲ

Mr. Speaker : Then I, will call the Minister to reply. ಅವರ ಅಭಿಪ್ರಾಯವೇನು ಎಂದು ನಾನು ಅವರನ್ನು ಕರೆಯಬೇಕಾಗುತ್ತದೆ. ತಾವು ಮುಗಿಸದಿದ್ದರೆ ಅವರನ್ನು ಕರೆಯಬೇಕಾಗುತ್ತದೆ. ತಾವು ಮುಗಿಸಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಅವರ ರಿಪೋರ್ಟ್‌ನಲ್ಲಿ..... he has made it clear..

ಗೊಂದಲ

ಶ್ರೀ ಕರಿಯಣ್ಣ : ಓದಿದ್ದನ್ನೇ ಮೂರು ಮೂರು ಸಾರಿ ಓದಿದರೆ ಹೇಗೆ? ಓದಿದ್ದನ್ನೇ ಓದಿಸುತ್ತೀರಾ?

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ನಮಗೆ ಬಂದಿರತಕ್ಕಂಥದ್ದು ಅನುಮಾನ ಏನೆಂದರೆ "he made it clear during the interrogation of Karim Lala he had not come across any evidence to suggest.

ಗೊಂದಲ

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ನೀವು ಹೀಗೆ ಅವಕಾಶ ಕೊಡುತ್ತಾ ಹೋದರೆ....

ಗೊಂದಲ

ಅಧ್ಯಕ್ಷರು : ಮಧ್ಯೆ ಮಧ್ಯೆ ಈ ರೀತಿ ಹೇಳುವುದು, ಏನೂ ಲೆಕ್ಕಾಚಾರ ಬೇಡವೇ?

ಶ್ರೀ ಕರಿಯಣ್ಣ : ಅವರು ನೋಟೀಸ್ ಕೊಡಲಿ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಅವರಿಗೆ ಬೆಂಗಲ ಕೊಟ್ಟು ನಾನು ಮಾತನಾಡುತ್ತಿದ್ದೇನೆ.

ಗೊಂದಲ

ಅಧ್ಯಕ್ಷರು : ದಯವಿಟ್ಟು ಮುಗಿಸಿ ಏನು ಇದು?

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ಒಂದೇ ಸೆಕೆಂಡ್‌ನಲ್ಲಿ ಮುಗಿಸಿ ಬಿಡುತ್ತೇನೆ. ದಯವಿಟ್ಟು ತಾವು ಕೂರುಕೊಳ್ಳಿ.

ಗೊಂದಲ

ಅಧ್ಯಕ್ಷರು : ಎಷ್ಟು ಸಲ ಎದ್ದೇಳುವುದು, ಎಷ್ಟು ಸಲ ಕುಳಿತುಕೊಳ್ಳುವುದು?

ಗೊಂದಲ

ಶ್ರೀ ಕೆ. ವಿಜಯಕುಮಾರ್‌ಶೆಟ್ಟಿ : ಮಾನ್ಯ ಅಧ್ಯಕ್ಷರೇ ಜೀರೊ ಅವರ್‌ನಲ್ಲಿ ಅವರಿಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಮಾನ್ಯ ಸೋಮಶೇಖರ್‌ರವರಿಗೆ ಅವಕಾಶ ಕೊಡುವುದಾದರೆ ನಮಗೂ ಇಲ್ಲಿ ಕೊಡಬೇಕು.

ಗೊಂದಲ

Sri B. Somashekar: 'however, during the interrogation....

ಗೊಂದಲ

ಶ್ರೀ ಕಾಗೋಡು ತಿಮ್ಮಪ್ಪ : ಅದು ಅನಾವಶ್ಯಕ

ಗೊಂದಲ

ಅಧ್ಯಕ್ಷರು : ಅವರ ಸ್ಟೇಟ್‌ಮೆಂಟೆಲ್ಲಾ ನಮಗೆ ಏಕೆ ಬೇಕು?

ಗೊಂದಲ

ಶ್ರೀ ಕಾಗೋಡು ತಿಮ್ಮಪ್ಪ : ನೀವೇನು ಓದಿ ಹೇಳುವುದು? ಎಲ್ಲರೂ ಅದನ್ನು ಓದಿದ್ದಾರೆ. ನೀವೇನು ಓದಿ ಹೇಳಬೇಕಾದ ಅಗತ್ಯವಿಲ್ಲ. ನೀವು ಹೇಳಬೇಕಾದ್ದನ್ನು ಹೇಳಿದ್ದೀರಿ.

ಗೊಂದಲ

Sri B. Somashekar: I have to complete two sentences.

ಗೊಂದಲ

ಅಧ್ಯಕ್ಷರು : ಶೆಟ್ಟರ್‌ರವರೇ, ತಾವು ಮಾತನಾಡಿ ದಯವಿಟ್ಟು. I am allowing Mr. Shettar to speak

Sri B. Somashekar: I will complete two sentences.

ಗೊಂದಲ

ಅಧ್ಯಕ್ಷರು : ಎಷ್ಟು ಸಲ ಅದನ್ನು ಹೇಳುವುದು? There is no need at this stage. This is only a preliminary submission.

ಗೊಂದಲ

ಶ್ರೀ ಬಿ. ಸೋಮಶೇಖರ್ : ಎರಡೇ ಸೆಂಟೆನ್ಸ್‌ನಲ್ಲಿ ನಾನು ಮಾತನಾಡುವುದು.

ಗೊಂದಲ

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ...

ಗೊಂದಲ

ಅಧ್ಯಕ್ಷರು : ಆಯಿತು ಬಿಡ್ರಿ ಒಂದು ನಿಮಿಷ ತಡೆಯಿರಿ.

ಶ್ರೀ ಕರಿಯಣ್ಣ : ಎಲ್ಲಾ ಅವರಿಗೆ ಕೊಡುವುದಾದರೆ ಮತ್ತೆ ಬೇರೆ ಯಾರೂ ಚರ್ಚೆ ಮಾಡುವುದು ಬೇಡವೇ?

ಗೊಂದಲ

ಅಧ್ಯಕ್ಷರು : ನೀವು ಹೇಳಿ ನನಗೆ ಕೇಳಿಸುತ್ತಿದೆ. ಹೇಳಿ Otherwise, I will call Mr. Shettar to speak...

ಗೊಂದಲ

ಅಧ್ಯಕ್ಷರು : ಬರೆದುಕೊಳ್ಳಬೇಡಿ. ನೋಡೋಣ. ಯಾರ್ಯಾರು ಎಷ್ಟೆಷ್ಟು ಕೂಗುತ್ತಾರೋ? ವಿಜಯಕುಮಾರ್ ತಾವು ಕೂರಿ.

ಗೊಂದಲ

ಅಧ್ಯಕ್ಷರು : ನೋಡಿ ನಮ್ಮ ಮುಂದೆ ಅಜೆಂಡಾ ಬೇಕಾದಷ್ಟು ಇದೆ. ಇನ್ನು ಮೂರು ದಿವಸಕ್ಕಾಗುವಷ್ಟು ಅಜೆಂಡಾ ಇದೆ ನಮ್ಮ ಮುಂದೆ ಏಕೆ ವೇಸ್ಟ್ ಮಾಡುತ್ತೀರಿ?

ಗೊಂದಲ

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಸೋಮಶೇಖರ್ ಕೂತುಕೊಳ್ಳಲಿ. ಎಲ್ಲರೂ ಕೂತುಕೊಳ್ಳುತ್ತಾರೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಕಾಗೋಡು ತಿಮ್ಮಪ್ಪನವರು ನನ್ನ ಕ್ಷೇತ್ರಕ್ಕೆ ಬಂದು ನನ್ನನ್ನು ಸೋಲಿಸಲಿ. ಆಮೇಲೆ ನಾನು ಕೂತುಕೊಳ್ಳುತ್ತೇನೆ. ನನ್ನ ಕ್ಷೇತ್ರಕ್ಕೆ ಬಂದು ನೀವು ನನ್ನನ್ನು ಸದಸ್ಯನನ್ನಾಗಿ ಮಾಡದೆ ಇರುವ ಹಾಗೆ ನೋಡಿಕೊಳ್ಳಿ. ನಾನು ಇಲ್ಲಿಗೆ ಬರುವುದಿಲ್ಲ. you are free to come and compxaign in my constituency and defeat me and I will not come here.

ಗೊಂದಲ

ಅಧ್ಯಕ್ಷರು : ಒಂದು ನಿಮಿಷದಲ್ಲಿ ಮುಗಿಸುತ್ತಾರೆ ಒಂದು ನಿಮಿಷದಲ್ಲಿ ಮುಗಿಸುತ್ತಾರೆ. ಸುಮ್ಮನಿರಿಯಪ್ಪ, ಎಲ್ಲವೂ ಶಾಂತವಾಗುತ್ತದೆ. ತಾವು ಕೂರಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಕೇವಲ ಅರ್ಧ ನಿಮಿಷವಷ್ಟೇ. ಒಂದು ನಿಮಿಷವೂ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಸೋಮಶೇಖರ್‌ರವರು ಮಾತನಾಡಿದ್ದಾರೆ. ಮಾನ್ಯ ಸಿಂಧ್ಯಾರವರು ಮಾತನಾಡಿದಾಗ ಗಂಭೀರವಾಗಿ ಕೇಳಿದ್ದೇನೆ. ಹೀಗೆ ಎದ್ದೆದ್ದು ಮಾತನಾಡಿದರೆ ಹೇಗೆ? ಇವರು (ಮಾನ್ಯ ವಿರೋಧಪಕ್ಷದ ನಾಯಕರನ್ನು ಉದ್ದೇಶಿಸಿ) ಮುಕ್ತಾಯ ಮಾಡುವುದಿಲ್ಲ. ಅವರು ಮುಕ್ತಾಯ ಮಾಡಿದವರು ಮತ್ತೆ ಎದ್ದಿದ್ದಾರೆ.

ಗೊಂದಲ

ಅಧ್ಯಕ್ಷರು : ಮುಕ್ತಾಯವಾಗಿದ್ದರೂ ತಿರುಗಿ ಎದ್ದೇಳುತ್ತಿದ್ದೀರಿ?

ಗೊಂದಲ

ಶ್ರೀ ಬಿ. ಸೋಮಶೇಖರ್ : "during the...."

ಗೊಂದಲ

ಅಧ್ಯಕ್ಷರು : ಆಯಿತು. ಸುಮ್ಮನಿರಿ ಒಂದು ನಿಮಿಷ.

ಗೊಂದಲ

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ನಮಗೂ ಅವಕಾಶಕೊಡಿ ಮಾತನಾಡುವುದಕ್ಕೆ,

ಶ್ರೀ ಬಿ. ಸೋಮಶೇಖರ್ : ನೀವು ಇಲ್ಲಿ ಇದ್ದಿರಿ. ನಾವು ಆ ರೀತಿ ಮಾಡುತ್ತಿದ್ದೆವಾ?

ಶ್ರೀ ಕಾಗೋಡು ತಿಮ್ಮಪ್ಪ : ನಿಮಗೆ ಅವಕಾಶ ಕೊಟ್ಟಿಲ್ಲವೇ? ನಿಮ್ಮ ಹಾಗೆ ಅವರೂ ಮಾತನಾಡುತ್ತಾರೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಒಂದು ನಿಮಿಷವೂ ನೀವು ಅವಕಾಶ ಕೊಡದಿದ್ದರೆ ಹೇಗೆ?

ಗೊಂದಲ

Sri B. Somashekar: It shows the culture of your party. what is this? I am only taking one minute. They cannot keep quiet. I am taking half-a-minute what is this? I am also a fourth time Member and I am a leader of one group here and if they are not allowing me to speak for two minutes. what sort of culture it is?

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ಒಂದು ನಿಮಿಷ. ಈಗ ಅವರನ್ನು ಕೂರಿಸುತ್ತೀರೋ? ಇಲ್ಲ ಅವಕಾಶ ಕೊಡುತ್ತೀರೋ?

ಅಧ್ಯಕ್ಷರು : ನೀವು ಮುಗಿಸಿ.

ಶ್ರೀ ಬಿ. ಸೋಮಶೇಖರ್ : ಅವರು ನಿಂತಿರುವಾಗ ನಾನು ಹೇಗೆ ಮಾತನಾಡುವುದಕ್ಕೆ ಆಗುತ್ತದೆ?

ಅಧ್ಯಕ್ಷರು : ನೀವು ಬೇಗ ಮುಗಿಸಿ. ನನಗೆ ಕೇಳಿಸುತ್ತಿದೆ. ಹೇಳಿ

ಗೊಂದಲ

ಶ್ರೀ ಬಿ. ಸೋಮಶೇಖರ್ : ನಾನು ಮಾತನಾಡುವುದಕ್ಕೆ ಆಗುತ್ತದಾ?

ಗೊಂದಲ

ಶ್ರೀ ಡಿ.ವಿ. ಸದಾನಂದ ಗೌಡ : ಕಾಗೋಡು ತಿಮ್ಮಪ್ಪನವರೇ, ಕರೀಂಲಾಲನ ರಕ್ಷಣೆ ಮಾಡಿದ ಹಾಗೆ ಗಲಾಟೆ ಮಾಡಿದವರನ್ನೂ ಕೂಡ ರಕ್ಷಣೆ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಗೊಂದಲ

ಅಧ್ಯಕ್ಷರು : ನನಗೆ ಸದನವನ್ನು ನಡೆಸುವುದಕ್ಕೆ ಆಗುತ್ತಿಲ್ಲ. ನಾನು ಒಂದು ಗಂಟೆಯಿಂದ ನೋಡುತ್ತಿದ್ದೇನೆ, ಸದನವನ್ನು ನಡೆಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಹದಿನೈದು ನಿಮಿಷಗಳ ಕಾಲ ಸದನವನ್ನು ಅಡ್ಜರ್ನ್ ಮಡುತ್ತಿದ್ದೇನೆ.

ಸದನವು 11.45 ಕ್ಕೆ ಮುಂದೂಡಲ್ಪಟ್ಟು 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು.

(ಸದನವು ಮತ್ತೆ 1-00 ಗಂಟೆಗೆ ಪ್ರಾರಂಭವಾಯಿತು) ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ ನಕಲಿ ಸ್ಟಾಂಪ್ ಪೇಪರ್ ಹಗರಣದ ಬಗ್ಗೆ

ಅಧ್ಯಕ್ಷರು : ಶೆಟ್ಟರ್‌ರವರೇ ತಾವು ಪ್ರಾರಂಭ ಮಾಡಿ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಕಲಿ ಸ್ಟಾಂಪ್ ಪೇಪರ್ ಹಗರಣದ ಬಗ್ಗೆ ಬೆಳಿಗ್ಗೆ ಏನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ, ಬಹುಶಃ ಬೆಳಿಗ್ಗೆ ಈ ವಿಷಯದ ಬಗ್ಗೆ ಚರ್ಚೆ ಮುಗಿಯಬೇಕಿತ್ತು, ಆದರೆ ಹಲವಾರು ಕಾರಣಗಳಿಂದ ಇಂಟರ್‌ವೆನಷನ್‌ನಿಂದ ಕೆಲವೊಂದು ಮುಖ್ಯವಾದಂತಹ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ಅದು ಆಗಲಿಲ್ಲ. ಕೆಲವು ವಿಷಯಗಳನ್ನು ಹೇಳಿದ್ದೇವೆ. ಆದರೆ ಆ ಒಂದು ಗದ್ದಲದಲ್ಲಿ ಇದು ಆಗಲಿಲ್ಲ. ಇವತ್ತು ಇಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಈ ಸದನದಲ್ಲಿ ಈಗಾಗಲೆ ಈ ವಿಷಯವಾಗಿ ಚರ್ಚೆಯಾಗಿದೆ. ಆದರೆ ಇವತ್ತು ಸಡನ್ ಆಗಿ ಈ ವಿಷಯದ ಬಗ್ಗೆ ನಾವು ಪ್ರಸ್ತಾಪ ಮಾಡುವುದಕ್ಕೆ ಕಾರಣವೇನೆಂದರೆ ಪ್ರಶ್ನೆ ಬಂತು. ಅದೇನೆಂದರೆ ಇವತ್ತಿನ ಪತ್ರಿಕೆಯಲ್ಲಿ ವಿಜಯ ಟೈಮ್ಸ್ ಹಾಗೂ ವಿಜಯ ಕರ್ನಾಟಕದಲ್ಲಿ ಬಂದಿರುವಂತಹ ವಿಷಯ.

ಅಧ್ಯಕ್ಷರು : ನೀವು ಎಲ್ಲಿಗೆ ವಿಷಯವನ್ನು ನಿಲ್ಲಿಸಿದ್ದೀರಿ, ಅಲ್ಲಿಂದ ಮುಂದಕ್ಕೆ ಹೋಗಿ.

ಶ್ರೀ ಜಗದೀಶ ಶೆಟ್ಟರ್ : ಅದರಲ್ಲಿ ಏನಾಗಿದೆ ಎಂದರೆ ಅದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ, ಈ ಒಂದು ನಕಲಿ ಸ್ಟಾಂಪ್ ಪೇಪರ್ ಹಗರಣ ಹಾಗೂ ಕರೀಂ ಲಾಲ ಎಂಬ ಅಪರಾಧಿ ಇದ್ದು ಅವನ ಎಲ್ಲಾ ವ್ಯವಹಾರ ವಹಿವಾಟು ಮಾಡುವಂಥಾದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿ. ನಮ್ಮ ಬೆಳಗಾವಿ ಜಿಲ್ಲೆಯ ಖಾನಾಪುರ ಏನಿದೆ ಅದು ಅವರ ಮೂಲ ಸ್ಥಾನ. ಮತ್ತು ಅವನ ಸಹೋದರರು ಖಾನಾಪುರದಲ್ಲಿ ಸಾಕಷ್ಟು ಆಸ್ತಿಗಳನ್ನು ಮಾಡಿಕೊಂಡಿದ್ದಾರೆ. ಈ ಕರೀಂಲಾಲನ ವಿಷಯಗಳು ಹೊರಗೆ ಬಂದಮೇಲೆ ರಾಜ್ಯಸರ್ಕಾರ ಈ ನಕಲಿ ಸ್ಟಾಂಪ್ ಪೇಪರ್‌ಗಳನ್ನೆಲ್ಲಾ ಸೀಜ್ ಮಾಡಿದ್ದು, ಈ ಸ್ಟಾಂಪ್ ಪೇಪರ್‌ನ ವ್ಯವಸ್ಥೆ ಬೇಡ ಎಂದು ಆ ಒಂದು ರಿಜಿಸ್ಟ್ರೇಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡಿ ಅದನ್ನು ಸಂಪೂರ್ಣವಾಗಿ ರದ್ದು ಮಾಡಿರುವುದಾಗಿದೆ. ಅದು ನಮಗೆ ಗೊತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಇವತ್ತು ನಕಲಿ ಸ್ಟಾಂಪ್ ಪೇಪರ್ ಪ್ರಕರಣಗಳು ಎಷ್ಟು ಸಿಕ್ಕವು? ಮತ್ತು ಎಷ್ಟು ಸೀಜ್ ಮಾಡಲಾಯಿತು ಎನ್ನುವ ವಿವರಗಳನ್ನು ರಾಜ್ಯ ಸರ್ಕಾರ ಕೊಡಬೇಕಾಗುತ್ತದೆ. ಮತ್ತು ಇನ್ನೊಂದು ಬಹಳ ಮುಖ್ಯವಾಗಿ ಹೇಳುವಂಥಾದ್ದು ಏನೆಂದರೆ ಈ ಕರೀಂಲಾಲ ಆತನ ಸಹೋದರ ಇರಬಹುದು ಆತನ ಇನ್ನಿತರ ಸಂಬಮಧಿಕರು ಇರಬಹುದು, ಆತನ ಒಬ್ಬ ಸಂಬಂಧಿಕ ಹುಬ್ಬಳ್ಳಿಯಲ್ಲಿ ಆತನಿಗೆ ಸಂಬಂದಪಟ್ಟ ವ್ಯಕ್ತಿಗಳು ಒಂದು ವೆಹಿಕಲ್ ತೆಗೆದುಕೊಂಡು ಹೋಗುವಂತಹ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿ ಹಣ ಅದರಲ್ಲಿ ಸಿಕ್ಕಿದ್ದು, ಅದನ್ನು ಹುಬ್ಬಳ್ಳಿ ಪೋಲೀಸರು ಸೀಜ್ ಮಾಡಿದ್ದನ್ನು ನಾವು ನೋಡಿದ್ದೇವೆ. ಅದೇರೀತಿ ಬೇರೆಬೇರೆ ರಾಜ್ಯಗಳಲ್ಲಿ ಕರೀಂಲಾಲನ ಜೊತೆ ಸಂಪರ್ಕ ಇಟ್ಟುಕೊಂಡಂತಹ ಹಲವಾರು ವ್ಯಕ್ತಿಗಳು ಲಕ್ಷಂತರ, ಕೋಟ್ಯಾಂತರ ರೂಪಾಯಿ ಎಂದರೆ ಮೂರು–ನಾಲ್ಕು ಕೋಟಿ ರೂಪಾಯಿ ಹಣವನ್ನು ಸೀಜ್ ಮಾಡಿರುವುದು ಮತ್ತು ನಕಲಿ ಸ್ಟಾಂಪ್ ಪೇಪರ್ ಕೋಟ್ಯಾಂತರ ರೂಪಾಯಿ ವ್ಯಾಲ್ಯೂ ಇರುವಂಥಾದ್ದನ್ನು ಸೀಜ್ ಮಾಡಿರುವಂತಹ ಪ್ರಕರಣಗಳು ಇವತ್ತು ಡೆಲ್ಲಿ, ವೆಸ್ಟ್‌ಬೆಂಗಾಲ್, ಮಹಾರಾಷ್ಟ್ರ, ಆಂಧ್ರಪ್ರದೇಶ ಹಗೂ ಬೇರೆ ಬೇರೆ ಕಡೆ ನಾವು ನೋಡುತ್ತಿದ್ದೇವೆ. ಆದರೆ ಕರ್ನಾಟಕದಲ್ಲಿ ಇವತ್ತು ಮೂಲ ಅಪರಾಧಿ ಇದ್ದಂತಹ ಈ ಒಂದು ಸಥಳದಲ್ಲಿ ಸರ್ಕಾರ ಆತನನ್ನು ಬಂಧಿಸಿತು. ಆದರೆ ಬಂಧಿಸಿದ ಮೇಲೆ ಆತನಿಂದ ಹಲವಾರು ಮಾಹಿತಿಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಒಂದು ಕಡೆ ಮಾಹಿತಿ ಇದೆ, ಇವತ್ತು ಸಾಂಗ್ಲಿಯಾನ

(+ ಈ ಚಿಹ್ನೆ ಮಾನ್ಯ ಸದಸ್ಯ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಇಂಟರ್‌ವ್ಯೂ ಕೊಟ್ಟಿದ್ದಾರೆ. ಅವರು ಇಂಟರ್‌ಗೇಷನ್ ಮಾಡಿದಂತಹ ಸಂದರ್ಭದಲ್ಲಿ ಆತನ ಹೇಳಿಕೆಯನ್ನು ಪಡೆದುಕೊಂಡರು. ಮತ್ತು ಕರೀಂಲಾಲನ ಹೇಳಿಕೆ ಟೇಪ್ ಆಗಿದೆ ಎಂದು ಸಹ ಪತ್ರಿಕೆಯಲ್ಲಿ ಬಂದಿದೆ. ಹಾಗಾದರೆ ಆ ಟೇಪ್ ಇರುವುದು ನಿಜವೇ? ಸರ್ಕಾರದ ಅಧಿಕಾರಿಗಳು ಇವತ್ತು, ನಮ್ಮ ಸರ್ಕಾರದ ಗೃಹ ಇಲಾಖೆ ಇದರ ಬಗ್ಗೆ ಇನ್‌ವೆಸ್ಟಿಗೇಟ್ ಮಾಡುವ ಸಲುವಾಗಿ ಶ್ರೀಕುಮಾರ್ ಎನ್ನುವ ಹಿರಿಯ ಪೊಲೀಸ್ ಅಧಿಕಾರಿಯ ನೇತೃತ್ವದಲ್ಲಿ ಒಂದು ತಂಡವನ್ನು ರಚನೆ ಮಾಡಿದೆ. ಶ್ರೀಕುಮಾರ್ ಅವರ ಬಗ್ಗೆ ಎಲ್ಲರಿಗೂ ಬಹಳ ಗೌರವ ಇದೆ. ಅವರ ಬಗ್ಗೆ ನಂಬಿಕೆ ಇದೆ. ಅದರ ಬಗ್ಗೆ ಪ್ರಶ್ನೆ ಇಲ್ಲ. ಅವರ ಪ್ರಾಮಾಣಿಕತೆ ಬಗ್ಗೆ ಅವರ ಇನ್‌ವೆಸ್ಟಿಗೇಷನ್ ಬಗ್ಗೆ ಸಾಕಷ್ಟು ಗೌರವ ಇದೆ. ಅವರ ನೇತೃತ್ವದಲ್ಲಿ ಇನ್‌ವೆಸ್ಟಿಗೇಷನ್ ತಂಡವನ್ನು ಮಾಡಿರುವುದು ಬಹಳ ಒಳ್ಳೆಯದು. ಆದರೆ ಒಂದು ನಮ್ಮ ಆತಂಕ ಎಂದರೆ ಇವತ್ತು ಕೆಲವಾರು ಹಿತಾಸಕ್ತಿಗಳ ಒತ್ತಡ ಇರುವುದರಿಂದ ಶ್ರೀಕುಮಾರ್ ಅವರ ನೇತೃತ್ವದಲ್ಲಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಏನು ತಂಡವನ್ನು ರಚಿಸಿದ್ದೀರಿ, ಅವರಿಗೆ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಅವರ ಕಾರ್ಯನಿರ್ವಹಣೆಗೆ ಅವಕಾಶ ಸಿಕ್ಕಿಲ್ಲವೆನ್ನುವುದು ನನ್ನ ಒಂದು ನೇರವಾದಂತಹ ಆಪಾದನೆ ಇದೆ. ಅವರಿಗೆ ಇದರಿಂದ ಸ್ವತಂತ್ರವಾಗಿ ತನಿಖೆ ಮಾಡುವುದಕ್ಕಾಗುವುದಿಲ್ಲವೆಂದು ನನಗೆ ಅನಿಸುತ್ತಿದೆ.. ಏಕೆಂದರೆ ಇವತ್ತು ಶ್ರೀಕುಮಾರ್ ಅವರು ಒಬ್ಬ ಪ್ರಾಮಾಣಿಕ ಅಧಿಕಾರಿ ಇವರ ನೇತೃತ್ವದಲ್ಲಿ ವಹಿಸಿದ ಮೇಲೆ ಇದರ ಬಗ್ಗೆ ಸಾಕಷ್ಟು ವಿಷಯಗಳನ್ನು ಹೊರಗೆ ಬರಬೇಕಾಗಿತ್ತು. ಮತ್ತು ಸಾಕಷ್ಟು ವ್ಯಕ್ತಿಗಳನ್ನು ಬಂಧಿಸಬೇಕಾಗಿತ್ತು. ಇವತ್ತು ಕರೀಂಲಾಲ್‌ನ ಬದಲ್ಸ್ ಅನ್ನು ಅರೆಸ್ಟ್ ಮಾಡಬೇಕಾಗಿತ್ತು. ಈ ರಷೀದ್ ಕುಲಕರ್ಣಿ ಏನು ಅವರ ಅಡ್ವೊಕೇಟ್ ಇದ್ದಾನೆ ಅವನೆ ಈ ಎಲ್ಲಾ ವ್ಯವಹಾರ ಮಾಡುತ್ತಿದ್ದಾನೆ ಎಂದು ಆತನನ್ನು ಪುಣೆ ಪೊಲೀಸರು ಅರೆಸ್ಟ್ ಮಾಡಿಕೊಂಡು ಹೋದರು. ಹಾಗಾದರೆ ನಮ್ಮ ರಾಜ್ಯದ ಪೊಲೀಸರು ಆತನನ್ನು ಈ ಒಳಗಾಗಿ ಅರೆಸ್ಟ್ ಮಾಡಬೇಕಾಗಿತ್ತು. ಆತನ ಕಡೆಯಿಂದ ಹಲವಾರು ವಿಷಯಗಳನ್ನು ಹೊರಗೆ ಕೆಡವಬಹುದಾಗಿತ್ತು. ಇನ್ನು ಇನ್‌ವೆಸ್ಟಿಗೇಷನ್ ಸಾಕಷ್ಟು ಪ್ರಗತಿ ಆಗಬೇಕಾಗಿತ್ತು. ಆದರೆ ಏಕೆ ಆಗಲಿಲ್ಲ ಎನ್ನುವ ಒಂದು ಆತಂಕ ಎಲ್ಲರಿಗೂ ಇದೆ. ಹೀಗಾಗಿ ಇವತ್ತು ಹಲವಾರು ಸಂಶಯ ರಾಜ್ಯಸರ್ಕಾರದ ಗೃಹ ಇಲಾಖೆ ಮತ್ತು ಅಧಿಕಾರಿಗಳು, ಇದರಲ್ಲಿ ಸರಿಯಾದಂತಹ ರೀತಿಯಲ್ಲಿ ಅವರಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಣೆ ಮಾಡುವುದಕ್ಕೆ ಆಗುತ್ತಿಲ್ಲ ಎನ್ನುವ ಆತಂಕ ಎಲ್ಲರಲ್ಲಿ ಬರುತ್ತಿದೆ. ಆದುದರಿಂದ ಇವತ್ತು ಇದನ್ನು ಪ್ರಶ್ನೆ ಮಾಡುತ್ತಿದ್ದೇವೆ. ಇವತ್ತು ಮಹಾರಾಷ್ಟ್ರದ ಪೊಲೀಸರು, ಪುಣೆ ಪೊಲೀಸರು ಎಲ್ಲಾ ರೀತಿಯಲ್ಲಿ ತನಿಖೆಯನ್ನು ಸ್ವತಂತ್ರವಾಗಿ ಮಾಡುತ್ತಿದ್ದಾರೆ, ನಮ್ಮ ರಾಜ್ಯಕ್ಕೆ ಬಂದು ಅದಕ್ಕೆ ಸಂಬಂಧಪಟ್ಟಂತಹ ವ್ಯಕ್ತಿಗಳನ್ನು ಅರೆಸ್ಟ್ ಮಾಡಿಕೊಂಡು ಹೋಗುವುದು ಹಾಗೂ ಅವರ ಆಸ್ತಿಪಾಸ್ತಿಗಳನ್ನು ಸೀಜ್ ಮಾಡುವಂಥಾದ್ದು ಸಾಧ್ಯವಾಗುವುದಾದರೆ, ಶ್ರೀಕುಮಾರ್ ಅವರ ನೇತೃತ್ವದಲ್ಲಿ ಇರುವಂತಹ ಪೊಲೀಸರ ತಂಡಕ್ಕೆ ಏಕೆ ಆಗುತ್ತಿಲ್ಲ. ಇದೊಂದು ಪ್ರಶ್ನೆ ಇದೆ. ಅದಕ್ಕಾಗಿ ಇವತ್ತು ಹಲವಾರು ಸಂಶಯಗಳು ವ್ಯಕ್ತವಾಗುತ್ತಿವೆ. ಇಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಣೆ ಮಾಡುವುದಕ್ಕೆ ಎಲ್ಲೋ ಅಡ್ಡಿ ಆತಂಕಗಳು ಇದೆ ಎಂದು ಜನರಲ್ಲಿ ಮತ್ತು ನಮ್ಮಲ್ಲಿ ಮೂಡುವುದಕ್ಕೆ ಕಾರಣವಾಗಿದೆ. ಅದಕ್ಕೆ ಪೂರಕವಾಗಿ ಇದೆಲ್ಲಾ ಸಂಶಯಗಳು ಇದೆ ಆದುದರಿಂದ ಅದಕ್ಕೆ ಪೂರಕವಾಗಿ ಹೇಳುವುದಾದರೆ ನಾನು ಒಂದೆರಡು ಉದಾಹರಣೆಗಳನ್ನು ಕೊಡುತ್ತಿದ್ದೇನೆ. ಬೆಳಗಾಂನ ಎಸ್.ಪಿ.ಯವರು 25.1.02 ರಂದು ಕರೀಂಲಾಲ್ ಏನಿದ್ದಾನೆ ಅವನ ಅಣ್ಣನ ಕಡೆಯಿಂದ ಏಳು ಲಕ್ಷ ರೂಪಾಯಿ ಮೌಲ್ಯದ ನಗದು ಮತ್ತು ಚಿನ್ನವನ್ನು ಖಾನಾಪುರದಲ್ಲಿ ವಶಪಡಿಸಿಕೊಂಡರು. ಅಜೀಂತಲಿ ಅವನ ಕಡೆಯಿಂದ

ವಶಪಡಿಸಿಕೊಂಡರು. ಮುಂದೆ ಅದನ್ನು ಏಳು ಲಕ್ಷ ರೂಪಾಯಿ ಸೀಜ್ ಮಾಡಿದ್ದು ಹಾಗೂ ಚಿನ್ನದ ಬಗ್ಗೆ ಕೋರ್ಟ್‌ನಲ್ಲಿ ತಿಳಿಸಬೇಕಾಗಿತ್ತು. ಆದರೆ ಅದನ್ನು ತಿಳಿಸಲಿಲ್ಲ. ಇದನ್ನು ಏಕೆ ಮುಚ್ಚಿಟ್ಟರು? ಮುಂದೆ ಕೆಲವೇ ದಿವಸಗಳಲ್ಲಿ ಆ ಎಸ್‌ಪಿ ಏನಿದ್ದರು ಅವರಿಗೆ ಬೆಳಗಾಂನಿಂದ ಟ್ರಾನ್ಸ್‌ಫರ್ ಆಯಿತು. ಇದು ಏಕೆ ಎನ್ನುವಂಥಾದ್ದನ್ನು ಸರ್ಕಾರ ಹೇಳಬೇಕಾಗುತ್ತದೆ. ಇಲ್ಲಿ ಅವರು ಆಸ್ತಿಪಾಸ್ತಿ ಮಾಡಿಕೊಂಡಿರುವುದು ನಮ್ಮ ರಾಜ್ಯಸರ್ಕಾರಕ್ಕೆ ಸಾಕಷ್ಟು ಮಾಹಿತಿ ಇದ್ದರೂ ಕೂಡ ಅದು ಸೀಜ್ ಆಗಲಿಲ್ಲ. ಇನ್ನೊಂದು ನಾನು ಬಹಳ ಪ್ರಮುಖವಾಗಿ ಹೇಳುವುದೇನೆಂದರೆ ಕರೀಂಲಾಲನನ್ನು ಅರೆಸ್ಟ್ ಮಾಡಿದ ಮೇಲೆ ಇವತ್ತು ಅವು ಎಲ್ಲಿ ಪ್ರಿಂಟ್ ಆಗುತ್ತಿತ್ತು. ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಯಾರು ಅವರನ್ನೆಲ್ಲಾ ತಕ್ಷಣವೇ ಬಂದಿಸಬೇಕಾಗಿತ್ತು. ಅದು ಆಗಲಿಲ್ಲ. ಸಂಬಂಧಪಟ್ಟಂತಹ ವ್ಯಕ್ತಿಗಳನ್ನು ಬಂಧಿಸಲಿಲ್ಲ. ಆತನು ಈ ವ್ಯವಹಾರವನ್ನು ಯಾವ ಯಾವ ಉದ್ದೇಶದಿಂದ ಮಾಡುತ್ತಿದ್ದನು, ಯಾವ ಯಾವ ಐಟಂಗಳೂ ಇದ್ದವು, ಇದರ ಬಗ್ಗೆ ಏನೂ ಸೀಜ್ ಆಗಲಿಲ್ಲ. ಹಾಗಾದರೆ ಈ ಇನ್‌ವೆಸ್ಟಿಗೇಷನ್‌ನಲ್ಲಿ ಎಲ್ಲಿ ಅಡೆತಡೆಯಾಗಿದೆ ಎನ್ನುವುದನ್ನು ಇವತ್ತು ಸರ್ಕಾರವನ್ನು ಕೇಳಬೇಕಾಗುತ್ತದೆ. ಅದೇರೀತಿ ಈಗಾಗಲೇ ಒಬ್ಬ ವ್ಯಕ್ತಿ ಸಾಕ್ಷಿದಾರ ಒಬ್ಬ ಅಜೀಂ ಕರೀಂಯ ಎಂಬ ವ್ಯಕ್ತಿ ಕೋರ್ಟ್‌ಗೆ ಹೋಗಿ ಸಾಕ್ಷಿ ಹೇಳುವುದನ್ನು ನಾವು ನೋಡುತ್ತಿದ್ದೇವೆ. ಅವನು ಕೆಲವು ಪ್ರಕರಣಗಳಲ್ಲಿ ಮತ್ತು ಹೇಳಿಕೆಗಳನ್ನು ಕೊಟ್ಟಿರುವುದನ್ನು ನಾವು ನೋಡುತ್ತಿದ್ದೇವೆ. ಅದರಲ್ಲಿ ಸಾಕಷ್ಟು ಕೆಲವೊಂದು ಅಧಿಕಾರಿಗಳಿಗೆ ಹಣ ಕೊಟ್ಟಿರುವುದನ್ನು ಇದರ ಬಗ್ಗೆ ಸಾಕಷ್ಟು ವಿಷಯಗಳು ಹೊರಗೆ ಬರುತ್ತಿವೆ. ನಾನು ಹೇಳುವಂಥದ್ದು ಈ ಎಲ್ಲಾ ಹಿನ್ನೆಲೆಯಲ್ಲಿ ಇವತ್ತಿನ ಪತ್ರಿಕೆಯಲ್ಲಿ ಸಾಂಗ್ಲಿಯಾನ ಅವರ ಸಂದರ್ಶನ ಬಂದಿದೆ, ಅದರಲ್ಲಿ ಅವರು ಯಾವ ಯಾವ ವಿಷಗಳನ್ನು ಹೇಳಿದ್ದಾರೆ ಅವುಗಳ ಬಗ್ಗೆ ಸರ್ಕಾರ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು. ನಾನು ಇಲ್ಲಿ ಒಂದೆರಡು ವಿಷಯಗಳನ್ನು ರೆಫರ್ ಮಾಡುತ್ತೇನೆ. ಅದು ಈ ರೀತಿ ಇದೆ. "Former police Commissioner H.T. Sangliana, during whose tenure the multi-crore stamp paper racket kingpin Karim Lala was arrested, said on Thursday that the Government turned down his suggestion to hand over the case to CBI 'because it had taken political overtone and they did not want everything to come out."

ಇದು ಅವರು ಪತ್ರಿಕಾ ಸಂದರ್ಶನದಲ್ಲಿ ಹೇಳಿರುವಂಥಾದ್ದು ಮುಂದುವರೆದು "sangliana said Karim Lala mentioned to him about 'bribing many police officers of the DIG and IG rank in Karnataka' and that could be one of the reasons why he had not been arrested earlier, He said later when he became DGP Prisons he came to know that Karim Lala had paidRs. 25 lakh to jail officials to get and independent room with TV in the Jail." ಈ ರೀತಿಯಾಗಿ ಹೇಳಿದಂಥ ಸಂದರ್ಭಧಲ್ಲಿ ಹಾಗಾದರೆ 25 ಲಕ್ಷ ರೂಪಾಯಿ ಒಬ್ಬ ಅಧಿಕಾರಿಗಳಿಗೆ ಕೊಟ್ಟಿರುವುದು, ನಂತರ ಕೆಲವು ಹೆಸರುಗಳನ್ನು ಹೇಳಿದ್ದಾರೆ, ಅಬ್ಬಯ್ಯ ಎನ್ನುವ ಅಧಿಕಾರಿ ಇರಬಹುದು, ಮತ್ತೊಬ್ಬರು ಆ ಜೈಲ್‌ನಲ್ಲಿ ಇರುವಾಗ ಸಹಾಯ ಮಾಡಿದ ವ್ಯಕ್ತಗಳ ಹೆಸರು ಸಹ ಬಂದಿವೆ, ಅಬ್ಬಯ್ಯ ಮತ್ತು ಜಯರಾಮಯ್ಯ ಎನ್ನುವ ಅಧಿಕಾರಿಯ ಹೆಸರುಗಳು ಬಂದಿವೆ, ಅವರು ಅವರ ಕಡೆಯಿಂದ ಹಣ

ತೆಗೆದುಕೊಂಡಿದ್ದಾರೆಂದು ಹೇಳಿಕೆಯಲ್ಲಿ ಬಂದಿದೆ. ಈ ರೀತಿಯ ಆಪಾದನೆಗಳು ಇರುವಾಗ ಇವನ್ನೆಲ್ಲಾ ಇನ್‌ವೆಸ್ಟಿಗೇಷನ್ ಏಕೆ ಮಾಡಲಿಕ್ಕಾಗಲಿಲ್ಲ. ಶ್ರೀ ಕುಮಾರ್ ರವರ ನೇತೃತ್ವದ ತಂಡಕ್ಕೆ ಇವನ್ನೆಲ್ಲಾ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಏಕೆ ಆಗಿಲ್ಲ? ಹಾಗಾದರೆ ಈ ಅಧಿಕಾರಿಗಳು ಕರೀಂಲಾಲನನ್ನು ಇಂಟ್ರಾಗೇಷನ್ ಏಕೆ ಮಾಡುವುದಕ್ಕೆ ಆಗಿಲ್ಲ. ಹಾಗಾದರೆ ಆ ಅಧಿಕಾರಿಗಳು, ಇವತ್ತು ಕರ್ಪೆಷನ್‌ನಲ್ಲಿ ಇನ್‌ವಾಲ್ವ್ ಆಗಿದ್ದು ಕರೀಂಲಾಲ್‌ಗೆ ಸಹಾಯ ಮಾಡಿದಂಥ ಈ ವ್ಯಕ್ತಿಗಳ ಮೇಲೆ ಕಾನೂನು ಕ್ರಮವನ್ನು ನೀವು ಏಕೆ ಕೈಗೊಳ್ಳಲಿಲ್ಲ? ಇವೆಲ್ಲಾ ಪ್ರಶ್ನೆ ಬರುತ್ತವೆ. ಹೀಗಾಗಿ ಕೆಲವೊಂದು ವಿಷಯಗಳನ್ನು ಬಚ್ಚಿಡುವಂಥದ್ದು, ಹಲವಾರು ಸಂಶಯಗಳಿಗೆ ಎಡೆ ಮಾಡಿಕೊಡುವಂಥದ್ದು ಇವೆಲ್ಲವೂ ನಡೆಯುತ್ತಿವೆ. ಹೀಗಾಗಿ ಇದರಲ್ಲಿ ಹಿನ್ನೆಲೆ ಯಾರು ಇದ್ದಾರೆ? ನಾವು ಪ್ರತಿ ಸಲ ಹೇಳುತ್ತಿದ್ದೇವೆ, ಹಿಂದಿನ ಸದನದಲ್ಲಿ ಅದರ ಹಿಂದೆ ಕಳೆದ ಒಂದೂವರೆ ಎರಡು ವರ್ಷಗಳಿಂದ ಹೇಳುತ್ತಿದ್ದೇವೆ, ಏನಾಗಿದೆ ಎಂದರೆ, ಇವತ್ತು ನೀವು ಇದರಲ್ಲಿ ಇಂಪಾರ್ಶಲ್ ಆಗಿ ತನಿಖೆಯಾಗಬೇಕಾದರೆ, ಸಿಬಿಐ ತನಿಖೆ ಮಾಡಿ ಎಂದು ಇನ್‌ಸಿಸ್ಟ್ ಮಾಡುತ್ತೇವೆ. ಈ ಎಲ್ಲಾ ಹಿನ್ನೆಲೆ ಹೇಳಿದಾಗ ನಾವು, ರಾಜಕೀಯ ವ್ಯಕ್ತಿಗಳ ಒಂದು ಸಂಬಂಧ ರಾಜಕೀಯ ಹಿನ್ನೆಲೆ ಇವುಗಳನ್ನು ಹೇಳಿದಾಗ ನಾನು ಆಗಲೇ ಮೆನ್‌ಷನ್ ಮಾಡಿದೆ, ಇವತ್ತು ರೆಹನ್‌ಬೇಗ್ ಎನ್ನುವವನ ಇನ್‌ವಾಲ್ವ್‌ಮೆಂಟ್ ಇದೆ ಎನ್ನುವಂಥದ್ದು, ಇಲ್ಲಿ ಸಾಂಗ್ಲಿಯಾನರವರು ಸ್ಪಷ್ಟವಾಗಿ ಹೇಳುತ್ತಾರೆ, "Other independent sources also confirmed that Rehan Baig and Telgi were involved in import of petroleum products and selling kerosene for adulteration of petrol." ಸಾಂಗ್ಲಿಯಾನ್‌ರವರು ರೆಹಮನ್‌ಬೇಗ ಅವನ ಹೆಸರನ್ನು ಮೆನ್‌ಸನ್ನು ಮಾಡುತ್ತಾರೆ. ಹಾಗಾದರೆ, ರೆಹನ್‌ಬೇಗ್ ಅವರನ್ನು ನೀವು ಅರೆಸ್ಟ್ ಮಾಡಿದಿರಾ? ಅವರನ್ನು ಅರೆಸ್ಟ್ ಮಾಡಿ ಅವನ ಇಂಟ್ರಾಗೇಷನ್ ಆಗಿದೆಯೇ? ಅವರ ಕಡೆಯಿಂದ ಹೇಳಿಕೆ ತೆಗೆದುಕೊಂಡಿದ್ದೀರಾ? ಹಾಗಾದರೆ ನೀವು ಇಲ್ಲಿಯವರೆಗೆ ರೆಹನಬೇಗ್ ಅವನ ಕಡೆಯಿಂದ ಏಕೆ ಹೇಳಿಕೆ ತೆಗೆದುಕೊಳ್ಳಲಿಲ್ಲ? ಹಾಗಾದರೆ ಅವರೇನು ಹೇಳಿದರು? ತೆಲಗಿ ಕರೀಂ ಲಾಲ್ ಜೊತೆ ಇವರ ಎಲ್ಲಾ ವ್ಯವಹಾರಗಳಲ್ಲಿ ಪಾರ್ಟನರ್ ಶಿಫ್ ಇರುವಂಥದ್ದು, ರೆಹನ್ ಬೇಗ್ ಅವರದ್ದು, ಹಾಗಾದರೆ ಅವರನ್ನು ಏಕೆ ಇಂಟ್ರಾಗೇಷನ್ ಮಾಡಲಿಲ್ಲ? ಇನ್ನುವರೆಗೆ ಏಕೆ ಅರೆಸ್ಟ್ ಮಾಡಿಲ್ಲ? ಅವರ ಸಂಬಂಧವಿದೆ ಎನ್ನುವಂಥದ್ದು, ಈ ರೀತಿ ಸಂಶಯಗಳಿರುವಾಗ ಏಕೆ ಆಗಲಿಲ್ಲ ಎನ್ನುವಂಥದ್ದು ಒಂದು ಪ್ರಶ್ನೆ ಬರುತ್ತದೆ ಹೀಗಾಗಿ ನಾನು ಇವತ್ತು ಮಂತ್ರಿಗಳ ಹೆಸರು ಹೆಳುವುದಿಲ್ಲ; ನಾನು ಅವರ ಮೇಲೆ ಆಪಾದನೆ ಮಾಡುತ್ತಿಲ್ಲ, ಅವರ ಮೇಲೆ ಆಪಾದನೆ ಮತ್ತು ಇದರಲ್ಲಿ ಇನ್‌ವಾಲ್ವ್ ಮೆಂಟ್ ಇದೆ ಎಂದು ನಾನು ಹೇಳುತ್ತಿಲ್ಲ. ನಾನು ಹೇಳುವಂಥದ್ದು, ರೆಹನ ಬೇಗ್ ಅವರು ಇವತ್ತು ಸಚಿವರ ತಮ್ಮ. ಇದರ ಬಗ್ಗೆ ಯಾರೂ ಡಿನೈ ಮಾಡುತ್ತಿಲ್ಲ. ಹೀಗಾಗಿ ಹಿಂದೆ ಅವರು ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ, ರೆಹನ್ ಬೇಗ್ ತಪ್ಪು ಮಾಡಿದ್ದರೆ, ಅವನಿಗೆ ನೇಣು ಹಾಕಿರಿ, ಶಿಕ್ಷೆ ಕೊಡಿ ಎಂದು ಹೇಳಿದ್ದಾರೆ. ನಾನು ಒಂದೇ ಹೇಳುವಂಥದ್ದು, ಇವತ್ತು ನೈತಿಕತೆ ಪ್ರಶ್ನೆ ಬರುತ್ತದೆ. ಏಕೆಂದರೆ, ನಾವು ಹಿನ್ನೆಲೆಯನ್ನು ಹೇಳಿದಂಥ ಸಂದರ್ಭದಲ್ಲಿ ಇಷ್ಟೊಂದು ಶ್ರೀಕುಮಾರ್‌ರವರಂಥ ಪ್ರಾಮಾಣಿಕ ಅಧಿಕಾರಿ ಇದರಲ್ಲಿ ಇನ್‌ವೆಸ್ಟಿಗೇಷನ್ ಮಾಡಲು ಹಿಂದೇಟು ಹಾಕುತ್ತಿರುವ ಸಂದರ್ಭದಲ್ಲಿ, ಅಲ್ಲಿ ಪ್ರೆಷರ್ ಆಗುತ್ತಿದೆ, ಅಲ್ಲಿ ಪೊಲಿಟಿಕಲ್ ಪ್ರೆಷರ್ ಆಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅವರಿಗೆ ಸ್ವತಂತ್ರವಾಗಿ ತನಿಖೆ ಮಾಡಲಿಕ್ಕೆ ಆಗುತ್ತಿಲ್ಲ. ಹೀಗಾಗಿ ಇವತ್ತು ರೆಹನ್‌ಬೇಗ್‌ಅವರ ಇನ್‌ವಾಲ್ವ್‌ಮೆಂಟ್ ಇರುವುದರಿಂದ, ಕರೀಂಲಾಲನ

ಜೊತೆಗೆ ಅವನ ಸಂಪರ್ಕವಿರುವುದರಿಂದ, ಸ್ವತಂತ್ರವಾಗಿ ತನಿಖೆ ಮಾಡಲಿಕ್ಕೆ ಆಗುತ್ತಿಲ್ಲ. ಅದಕ್ಕಾಗಿ ನಾನು ಹೇಳುವಂಥದ್ದು, ಈ ತನಿಖೆ ಪೂರ್ಣ ಆಗುವವರೆಗೆ, ಶ್ರೀಕುಮಾರ್ ನೇತೃತ್ವದಲ್ಲಿ ತನಿಖೆಯಾಗಲಿ, ಇವತ್ತು ನೀವು ಸಿಬಿಐ ಗೆ ತನಿಖೆಗೆ ಕೊಡಬೇಕು. ಇದು ನಮ್ಮ ಒತ್ತಾಯ. ಅದಕ್ಕೆ ಪಾರಲೆಲ್ ಆಗಿ ಶ್ರೀಕುಮಾರ್‌ರವರ ನೇತೃತ್ವದಲ್ಲಿ ಮಾಡುತ್ತಿದ್ದೀರಿ, ಹಾಗಾದರೆ ಅವರಿಗೆ ಸ್ವತಂತ್ರ ತನಿಖೆ ಮಾಡುವುದಾದರೆ, ನಾನು ಒಂದೇ ಒಂದು ಸರ್ಕಾರಕ್ಕೆ ಒತ್ತಾಯ ಮಾಡುವಂಥದ್ದು, ಇವತ್ತು ಮಾನ್ಯ ಸಚಿವರ ಬ್ರದರ್ ಇದರಲ್ಲಿ ಇನ್‌ವಾಲ್ವ್‌ಮೆಂಟ್ ಇರುವುದರಿಂದ, ನೀವು ನೈತಿಕ ಹೊಣೆ ಹೊತ್ತು ರಾಜಿನಾಮೆ ಕೊಡಲಿ. ಈ ತನಿಖೆ ಆಗುವವರೆವಿಗೂ ರಾಜೀನಾಮೆ ಕೊಡಿ ಸ್ವತಂತ್ರವಾಗಿ ಅವರು ಇನ್‌ವೆಸ್ಟಿಗೇಷನ್ ಮಾಡಲಿ. ಎಲ್ಲಿಯವರೆಗೆ ನೀವು ಮಂತ್ರಿಗಳಾಗಿ ಮುಂದುವರಿಯುತ್ತೀರಿ, ಯಾವೊಬ್ಬ ಅಧಿಕಾರಿ ಯಾವ ಒಂದು ಒತ್ತಡದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಕೋನದಿಂದ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆಯನ್ನು ಕೊಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸದನದಲ್ಲಿ ಇಲ್ಲ, ಅವರಿಗೆ ನಾವು ಒತ್ತಾಯ ಮಾಡುತ್ತಿದ್ದೆ, ರಾಜೀನಾಮೆ ಕೊಡದೇ ಇದ್ದರೆ ಮಂತ್ರಿ ಮಂಡಲದಿಂದ ಅವರನ್ನು ಕೈಬಿಡಿ. ತನಿಖೆ ಪೂರ್ಣವಾಗಲಿ, ತನಿಖೆ ಪೂರ್ಣವಾಗಿ ಅವರು ಇದರಲ್ಲಿ ನಿರ್ದೋಷಿ ಆಗಿದ್ದಾರೆಂದು ಆದರೆ ಅವರು ಮತ್ತೆ ನೀವು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಿ, ಮೂರು ತಿಂಗಳಲ್ಲಿ ನೀವು ಒಂದು ಟೈಂಬಾಂಡ್ ಕೊಡಿ ಅಷ್ಟರೊಳಗೆ ಇದು ಆಗಲಿ. ಅಷ್ಟು ಟೈಂಆಂಡ್ ಕೊಡಿ ತನಿಖಾ ವರದಿಯಲ್ಲಿ ಅವರು ನಿರ್ದೋಷಿ ಎಂದು ಹೇಳಿದರೆ ಅವರನ್ನು ನೀವು ಪುನ: ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳಿ. ಹೀಗಾಗಿ ಅವರೇ ವಾಲೆಂಟರಿಯಾಗಿ ರಾಜೀನಾಮೆ ಕೊಡುವಂಥದ್ದು ಒಂದು, ಮತ್ತೊಂದು ನಾನು ಏನು ಹೇಳುತ್ತೇನೆಂದರೆ, ಇವತ್ತು ಕೇಂದ್ರ ಸರ್ಕಾರ ಈಗಾಗಲೇ ರಾಜ್ಯ ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದೆ. ಇದು ರಾಷ್ಟ್ರೀಯ ಮಟ್ಟದಲ್ಲಿ ಹಗರಣಗಳು ಇರುವುದರಿಂದ, ಎಂಬತ್ತು ಸಾವಿರ ಕೋಟಿ ರೂಯಷ್ಟು ನಕಲಿ ಸ್ಟಾಂಪು ಪೇಪರ್‌ನ ಹಗರಣ ಇದರಲ್ಲಿ ಇನ್‌ವಾಲ್ವ್ ಇರುವುದರಿಂದ, ಇದನ್ನು ಸಿಬಿಐ ತನಿಖೆಗೆ ನಿಮ್ಮ ಒಪ್ಪಿಗೆ ಕೊಡಿ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಏಕೆಂದರೆ, ಇದು ಆಗಲೇ ಬಂತು, ನಮ್ಮ ಹಿರಿಯ ಶಾಸಕರೊಬ್ಬರು ಇದನ್ನು ಮೆನ್‌ಷನ್ ಮಾಡಿದರು, ಕೇಂದ್ರ ಸರ್ಕಾರ ಏನು ಮಾಡುತ್ತಿದೆ? ಏಕೆ ಸುಮ್ಮನೆ ಕೂತಿದೆ ಎಂದು ಇಡೀ ರಾಷ್ಟ್ರದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಈ ಹಗರಣ ಇರುವುದರಿಂದ ಅವರೇ, ವಾಲೆಂಟಿರಿಯಾಗಿ ಸಿಬಿಐ ತನಿಖೆಗೆ ಏಕೆ ತೆಗೆದುಕೊಳ್ಳಬಾರದು? ಅವರೇಕೆ ಇನಿಷಿಯೇಷನ್ ತೆಗೆದುಕೊಳ್ಳಬಾರದು ಎನ್ನುವಂಥ ಮಾತನ್ನು ಸಹ ಹೇಳಿದರು. ಆದರೂ ನಾನು ಇಲ್ಲಿ ಹೇಳಬಯಸುತ್ತೇನೆ, ಇಲ್ಲಿ ನಮ್ಮ ರಾಜ್ಯದಲ್ಲಿ ಹಗರಣ ನಡೆದಿದ್ದು, ಅಪರಾಧಿ ಇಲ್ಲಿಯೇ ಇದ್ದಿದ್ದು, ಅಪರಾಧಿ ಜೈಲ್‌ನಲ್ಲಿ ಇದ್ದದ್ದು ನಮ್ಮ ರಾಜ್ಯದಲ್ಲಿ, ಮತ್ತು ಆತನ ಸಂಬಂಧಿಕರು, ಆಸ್ತಿ–ಪಾಸ್ತಿ ಎಲ್ಲಾ ವ್ಯವಹಾರ ನಡೆಯುತ್ತಿರುವುದು ಇಲ್ಲಿ, ಹೀಗಾಗಿ ಇಂಥ ಸಂದರ್ಭದಲ್ಲಿ ನಾವು ಇದಕ್ಕೆ ರಾಜ್ಯ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಯಾವುದೇ ಒಂದು ಸಿಬಿಐ ತನಿಖೆ ಆಗಬೇಕಾದರೆ, ಕೆಲವು ರಾಜ್ಯಗಳಲ್ಲಿ ಇರಬಹುದು, ನೇರವಾಗಿ ಸಿಬಿಐ ಗೆ ಕೊಡುವುದಕ್ಕೆ ಯಾವುದೇ ಒಂದು ರಾಜ್ಯದಲ್ಲಿ ಮೊದಲು ಪ್ರಾವಿಜನ್ ಇತ್ತು. ನೇರವಾಗಿ ಸಿಬಿಐ ಗೆ ಯಾವುದೇ ಒಂದು ಪ್ರಕರಣವನ್ನು ಇನ್‌ವೆಸ್ಟಿಗೇಷನ್ ಮಾಡಬಹುದಾಗಿತ್ತು ರಾಜ್ಯ ಸರ್ಕಾರದ ಒಪ್ಪಿಗೆ ಇಲ್ಲದೆ, ಆದರೆ ಇವತ್ತು ನಮ್ಮ ರಾಜ್ಯ ಸರ್ಕಾರ ಅದಕ್ಕೆ ರಿಸ್ಟ್ರಿಕ್ಷನ್ ಹಾಕಿದೆ, ರಾಜ್ಯದಲ್ಲಿ ಇದ್ದಂಥ ಯಾವುದೇ ಒಂದು ಹಗರಣದ ಬಗ್ಗೆ, ಭ್ರಷ್ಟಚಾರ

ಇರಬಹುದು ಅಥವಾ ಇನ್ನಿತರ ಯಾವುದೇ ಹಗರಣ ಇರಬಹುದು, ಕ್ರೈಮ್ಸ್ ಇರಬಹುದು ಅದರ ಬಗ್ಗೆ ರಾಜ್ಯ ಸರ್ಕಾರದ ಒಪ್ಪಿಗೆ ಇಲ್ಲದೇ ಕೇಂದ್ರ ಸರ್ಕಾರ ಸಿಬಿಐ ಗೆ ತನ್ನಿಂದತಾನೇ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಬರುವುದಿಲ್ಲ ಹೀಗಾಗಿ ರಾಜ್ಯ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಈಗಾಗಲೇ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಇದನ್ನು ಸಿಬಿಐ ಗೆ ಕೊಡಬೇಕೆಂದು ಪತ್ರ ಬರೆದಿದ್ದಾರೆ, ಅದಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ಕೊಟ್ಟುಬಿಟ್ಟರೆ, ಬಹುಶ: ಬೇರೆ ಯಾವುದೂ ನಾವು ಒತ್ತಾಯ ಮಾಡುವುದಿಲ್ಲ. ಸಿಬಿಐ ತನಿಖೆಗೆ ನೀವು ಒಪ್ಪಿರಿ, ಅದನ್ನು ಇಂಪಾರ್ಶಲ್ ತನಿಖೆಯಾಗಬೇಕು ಎನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಅದಕ್ಕಾಗಿ ಸರ್ಕಾರ ಇವತ್ತು ಅದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕು, ಮತ್ತು ನೈತಿಕ ಹೊಣೆ ಹೊತ್ತು ಅವರು ರಾಜೀನಾಮೆ ಕೊಡಬೇಕು, ಈ ತನಿಖೆಯಾಗುವವರೆಗೆ ಅವರು ನಿರ್ದೋಷಿ ಆಗುವವರೆಗೆ, ಆಮೇಲೆ ಸಿಬಿಐ ಗೆ ಇದನ್ನು ಕೊಡಬೇಕೆನ್ನುವ ಒತ್ತಾಯ ಮಾಡಿ, ಇನ್ನು ಹಲವಾರು ವಿಷಯಗಳು ಇವೆ.

ಅಧ್ಯಕ್ಷರು : ಅಡ್ಮಿಟ್ ಮಾಡಿದ ಮೇಲೆ ನೀವು ಹೇಳಿ. ಆಯಿತು ಈಗ ಹೇಳಿದಿರಿ ಅಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ : ಕರೀಂಲಾಲ್ ಜೈಲ್‌ನಲ್ಲಿ ಇದ್ದಾಗ, ಅವನಿಗೆ ಟಿವಿ ಫೆಸಿಲಿಟಿ ಮೊಬೈಲ್ ಫೆಸಿಲಿಟಿ ಇದ್ದು ರಾಜರೋಷವಾಗಿ ಜೈಲ್‌ನಲ್ಲಿ ಇದ್ದ, ಅಲ್ಲಿಂದಲೇ ವ್ಯವಹಾರಗಳನ್ನು ಮಾಡುತ್ತಿದ್ದ, ಅದರ ಬಗ್ಗೆಯೂ ಕೆಲವು ಸ್ಟೇಟ್‌ಮೆಂಟ್ ಇರುವುದು ನನ್ನ ಕಡೆ ಇವೆ. ಹೀಗಾಗಿ, ಅವನಿಗೆ ಎಲ್ಲಾ ರೀತಿಯಿಂದ ಎನ್‌ಕರೇಜ್‌ಮೆಂಟ್ ಇದೆ. ಕರೀಂಲಾಲ್ ಜೈಲ್‌ನಲ್ಲಿ ಇದ್ದು ಮನೆಯಲ್ಲಿ ಇದ್ದ ಹಾಗೆ ಇದ್ದಾನೆ, ಜೈಲ್‌ನಲ್ಲಿ ಇದ್ದು ಸ್ಟಾರ್ ಹೋಟೆಲ್‌ನಲ್ಲಿ ಇದ್ದ ಹಾಗೆ ಇದ್ದಾನೆ, ಸ್ಟಾರ್ ಹೋಟೆಲ್‌ನ ಫೆಸಿಲಿಟಿ ಅವನಿಗೆ ಸಿಕ್ಕಿವೆ. ಹೀಗಾಗಿ ಈ ರೀತಿಯಾಗಿ ರಾಜಕೀಯದ ಪ್ರಭಾವದ ಹಿನ್ನೆಲೆಯಲ್ಲಿ ಅವನಿಗೆ ಫ್ರೀಯಾಗಿ ಅಲ್ಲಿ ಇರಲಿಕ್ಕೆ ಹಾಗೂ ಜೈಲ್‌ನಲ್ಲಿ ಇದ್ದು ವ್ಯವಹಾರ ಮಾಡುವುದಕ್ಕೆ ಜೈಲ್‌ನಲ್ಲಿ ಇದ್ದು ಆತ ತನ್ನ ನಕಲಿ ಸ್ಟಾಂಪು ವ್ಯವಹಾರವನ್ನು ಮುಂದುವರಿಸಿದ್ದಾನೆ. ಹೀಗಾಗಿ ಇಂಪಾಶಲ್ ತನಿಖೆ, ಇಂಪಾರ್ಶಲ್ ಆದ ಇನ್‌ವೆಸ್ಟಿಗೇಷನ್ ಆಗುತ್ತಿಲ್ಲ, ಇದಕ್ಕಾಗಿ ಸಿಬಿಐ ತನಿಖೆ ಮಾಡಬೇಕು ಎನ್ನುವ ಒತ್ತಾಯವನ್ನು ಮಾಡಿ, ಇವತ್ತು ಇಲ್ಲಿ ನನಗೆ ವಿಷಯ ಮಂಡನೆ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಗೌಡ್ರೇ ಅದಲ್ಲದೇ ಬೇರೆ ಹೊಸ ವಿಷಯ ಇದೆಯೇ?

+ ಶ್ರೀ ಡಿ.ವಿ. ಸದಾನಂದಗೌಡ : (ಪುತ್ತೂರು) ಎರಡೇ ನಿಮಿಷ. ನಮ್ಮ ನಾಯಕರು ಎಲ್ಲಾ ಪೂರ್ಣ ವಿಚಾರವನ್ನು ಹೇಳಿದ್ದಾರೆ ಆದಕಾರಣ ನಾನು ಪುನ: ಮುಟ್ಟಲಿಕ್ಕೆ ಹೋಗುವುದಿಲ್ಲ. ಆದರೆ ಆ ಕಡೆಯಿಂದ ಹಲವಾರು ವಇಚಾರಗಳು ಪ್ರಸ್ತಾಪವಾದವು. ಕೋರ್ಟಿನಲ್ಲಿ ಇರುವ ಕಾರಣ ಇಲ್ಲಿ ಚರ್ಚೆಗೆ ಅವಕಾಶವಿಲ್ಲ, ನಿಲುವಳಿ ಸೂಚನೆ ಮಂಡನೆಗೆ ಅವಕಾಶವಿಲ್ಲ, ಎಂದು ಹೇಳುವಂಥದ್ದನ್ನು ಹೇಳಿದರು. ಅದರ ಬಗ್ಗೆ ನಾನು ಹೇಳಲಿಕ್ಕೆ ಬಯಸುತ್ತೇನೆ. ತಾವೇ ತಮ್ಮ ಛೇರ್‌ನಿಂದ ಹಿಂದೊಮ್ಮೆ ಇಂಥ ಒಂದು ಸಂದರ್ಭ ಬಂದಾಗ ಝಳಕಿ ಗೋಲಿಬಾರ್ ಪ್ರಕರಣದಲ್ಲಿ ಒಂದು ಡಿಸಿಷನ್ ಕೊಟ್ಟಿದ್ದೀರಿ. ನಾನು ಅದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. "ಈ ಹಿನ್ನೆಲೆಯಲ್ಲಿ ಝಳಕಿ ಗೋಲಿಬಾರ್ ಗೆ ಸಂಬಂಧಪಟ್ಟಂತೆ ಸದನದಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧ ಇರುವುದಿಲ್ಲ. ಲೋಕ ಸಭೆಯ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟಿನ 1066 ನೇ ಪುಟದಲ್ಲಿ ಸಬ್‌ಜುಡೀಸ್‌ಗೆ ಸಂಬಂಧಪಟ್ಟಂತೆ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಉಲ್ಲೇಖಿಸುತ್ತೇನೆ."

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

"while applying the restrictions regarding the rule of sub-judice care has to be taken to see that the primary right of freedom of speech is not unduly impaired to the prejudice of the Legislature."
ಹೇಳುವಂಥದ್ದು ಅದರಲ್ಲಿ ಹೇಳಿದ್ದಾರೆ. In this context, the Speaker held: The rule whether a motion which relates to a matter which is under adjudication by a Court of Law should be admitted or discussed in the House has to be interpreted strictly while on the other hand, the Chair has to ensure that no discussion in the House should prejudice the Court of Justice. The Chair has also to see that the House is not debarred from discussing any urgent matter of public importance on the ground that a similar allied or linked matter is before the Court of Law."

ಹಿಂದೆ ತಾವೇ ಹೇಳಿದಿರಿ, ಈ ರೀತಿ ಕೋರ್ಟಿನಲ್ಲಿ ಇರುವಂಥ ಹಲವಾರು ಪ್ರಕರಣಗಳು ಇದ್ದಾಗ, ಯಾವುದೋ ಒಂದೆರಡು ಪ್ರಕರಣಗಳು ಇವೆ ಎಂದು ಹೇಳಿ ಬಾಕಿ ಪ್ರಕರಣಗಳ ಬಗ್ಗೆ ಚರ್ಚೆ ಮಾಡುವಂಥದ್ದನ್ನು ಈ ಹೌಸ್‌ನಲ್ಲಿ ಡಿಬಾರ್ ಆಗಬಾರದು ಎಂದು ಹೇಳುವಂಥ ರೂಲಿಂಗ್ ಅನ್ನು ತಾವು ನೀಡಿದ್ದೀರಿ.

ಅಧ್ಯಕ್ಷರು : ಆ ಪಾರ್ಟಿ ಕಲರ್ ಕೇಸ್‌ನಲ್ಲಿ ವಿಷಯ ಕೋರ್ಟಿನಲ್ಲಿ ಇತ್ತಾ?

ಶ್ರೀ ಡಿ.ವಿ. ಸದಾನಂದಗೌಡ : ಇಲ್ಲಿ ಕೂಡ ಸಿಮಿಲಾರಿಟಿ ಆಗಿದೆ, ಎನ್ನುವಂಥದ್ದು, ಇಲ್ಲಿ ಹಲವಾರು ಕೇಸ್‌ಗಳು, ನ್ಯಾಯಾಂಗ ತನಿಖೆಗೆ ಅದು ಪ್ರಾರಂಭವಾಗಿತ್ತು, ಆಗ ತಾವು ಕೊಟ್ಟಂಥ ರೂಲಿಂಗ್ ಅದು, ಒಂದು ಏನು ಎಂದರೆ, ಇಲ್ಲಿ ಕೂಡ ಸಿಮಿಲಾರಿಟಿ ಏಕೆ ಆಗಿದೆ ಎಂದು ಹೇಳಿದರೆ, ಈಗಾಗಲೇ ಹಲವಾರು ಕೇಸ್‌ಗಳು they are under investigation ಹಲವಾರು ಕೇಸ್‌ಗಳು ಕೋರ್ಟಿನಲ್ಲಿ ಈಗಾಗಲೇ ಫೈಲ್ ಆಗಿದೆ. ಈಗ ಇರುವಂಥ ಕೇಸ್‌ಗಳನ್ನು ಇನ್‌ವೆಸ್ಟಿಗೇಶನ್ ಮಾಡುವಂಥ ಸಂದರ್ಭಗಳಲ್ಲಿ ಈ ರೀತಿ ಇರಬೇಕಾದರೆ, ಅದನ್ನು ಸಿಬಿಐ ಗೆ ಏಕೆ ರೆಫರ್ ಮಾಡಬೇಕು, ಏಕೆಂದರೆ ಆಲ್‌ರೆಡಿ ಚಾರ್ಜ್‌ಶೀಟ್ ಫೈಲ್ ಮಾಡಿದ್ದರ ಮೇಲೆ ಕೂಡ ನಮಗೆ ತುಂಬಾ, ಇದು ಒತ್ತಡಗಳ ಮಧ್ಯ ಆಗಿದೆ ಎಂದು. ಈಗಾಗಲೇ ಇಲ್ಲಿ ಹಲವಾರು ಜನರು ಹೇಳಿದರು. ಏನು ಎಂದರೆ ಆ ಅಧಿಕಾರಿಗಳು ಅವರು ಅಧಿಕಾರದಲ್ಲಿರುವಾಗ ಅವರು ಏನೂ ಮಾಡುವುದಿಲ್ಲ, ಅಧಿಕಾರದಲ್ಲಿರುವಾಗ ಹುಲಯಾಗಿರುತ್ತಾರೆ, ಅಧಿಕಾರವನ್ನು ಕಳಚಿಕೊಂಡ ಮೇಲೆ ಅವರು ಬಾಕಿ ಸಂಗತಿಗಳನ್ನು ಹೇಳುತ್ತಾರೆ. ಪ್ರಕೃತಿ ಸನ್ನಿವೇಶದಲ್ಲಿ ನಮಗೆ ಇಡೀ ರಾಜ್ಯದಲ್ಲಿ ಏನು ಗೊತ್ತಾಗುತ್ತದೆಂದರೆ, ಈ ಸರ್ಕಾರ ಅಧಿಕಾರಿಗಳ ಮೇಲೆ ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತದೆ ಎನ್ನುವುದು ನಮಗೆಲ್ಲಾ ಇರುವ ನಗ್ನ ಸತ್ಯ. ಅದನ್ನು ನಾವು ಮತ್ತೆ ಪುನರ್ ಪರಿಶೀಲನೆ ಮಾಡುವ ಅವಶ್ಯಕತೆ ಇಲ್ಲ. ಒತ್ತಡಗಳ ಮಧ್ಯದಲ್ಲಿ ಅಧಿಕಾರಿಗಳು ಕೆಲಸವನ್ನು ಮಾಡುತ್ತಾರೆ. Directions are being issued by the Government ಹೀಗೆ ಆಗಬೇಕು ಎನ್ನುವುದು ಹಲವಾರು ಸಂದರ್ಭಗಳಲ್ಲಿ, ಈ ರೀತಿಯಾಗಿ ಇನ್‌ವೆಸ್ಟಿಗೇಶನ್‌ನ್ನು ಹ್ಯಂಪರ್ ಮಾಡುತ್ತದೆಂದು ಹೆಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದೇರೀತಿಯಲ್ಲಿ ಕಾಲ್ ಅಂಡ್ ಶೆಕ್ದರ್‌ದಲ್ಲಿ ಹೇಳುತ್ತಾರೆ, ಆಗಾಗ ಇದು ಬರುತ್ತದೆ, ಏನೆಂದರೆ

ಇದು ಜ್ಯುಡಿಷಿಯಲ್‌ನಲ್ಲಿದೆ, ಸಬ್‌ಜುಡಿಸ್ ಆಗುತ್ತದೆ ಎಂದು ನಾನು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ ಮನ್ಯ ಕಾಗೋಡು ತಿಮ್ಮಪ್ಪನವರೆ, ನೀವು ಬೇಕಾದರೆ ನಂತರ ಹೇಳಿ.

ಶ್ರೀ ಎನ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರೇ, ಆಚೆ ನೀವು ನಿಮ್ಮ ಆಫೀಸಿನಲ್ಲಿ ಸಹಾಯ ಮಾಡುತ್ತೀರಾ ಆದರೆ ನೀವು ಹೌಸ್‌ನಲ್ಲಿ ಮಾತ್ರ ಸಹಾಯವನ್ನು ಮಾಡುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಕಾಲ್ ಅಂಡ್ ಶೆಕ್ದರ್ ನಲ್ಲಿ ಬಹಳ ಕ್ಲಿಯರ್ ಆಗಿ ಸಬ್‌ಜ್ಯುಡಿಸ್ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ.

ಅಧ್ಯಕ್ಷರು : ಅದರ ಬಗ್ಗೆ ನಾನು ಕೂಡ ಹೇಳಿದ್ದೇನೆ ಅಲ್ಲವೆ? ನಾನು ಹೇಳುವ ಮುಂಚೆ ಕೂಡ ತಾವು ಹೇಳಿದ್ದೀರಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡಿ ಮುಗಿಸುತ್ತೇನೆ.

"A Committee of presiding officers has considered the scope of the rule of subjudice and recommended the following guidelines.

ಅದರಲ್ಲಿ ಹೇಳುತ್ತಾ ಹೇಳುತ್ತಾ ಒಂದನ್ನು ಹೇಳುತ್ತಾರೆ, ಅದನ್ನು ನಾನು ಇಲ್ಲಿ ಓದುವುದಿಲ್ಲ. ಪ್ಯಾರಾ (6) ರಲ್ಲಿ ಹೇಳುತ್ತಾರೆ,

"Rule of subjudice applies only in regard to the specific issues before a Court. The entire gamut of the matter is not precluded. In case of linked matters, part of which is subjudice and part not subjudebate can be allowed on the matters which are not subjudice."

ಭಾರೀ ಕ್ಲಿಯರ್ ಆಗಿ ನಮ್ಮ ಪಾರ್ಲಿಮೆಂಟರಿ ಪ್ರೊಸೀಜರ್‌ನಲ್ಲಿ ಹೇಳಿದ್ದಾರೆ. ಆದರೆ ಯಾವುದೇ ಕಾರಣದಿಂದ ಆಗ್ಯುಮೆಂಟ್ ಆ ಕಡೆಯಿಂದ, ಈ ನಿಲುವಳಿ ಸೂಚನೆಯನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ, ಏಕೆಂದರೆ ಇದು ಸಬ್‌ಜುಡೀಸ್ ಆಗುತ್ತದೆಂದು ಹೇಳಿದರೆ, ಖಂಡಿತ ಒಪ್ಪತಕ್ಕಂಥ ವಿಚಾರವಲ್ಲವೆಂದು ನಾನು ಹೇಳುತ್ತಾ, ಇವತ್ತು ಈ ರಾಜ್ಯದಲ್ಲಿರುವಂಥ ಪೊಲೀಸ್ ಇಲಾಖೆಯ ಬಗ್ಗೆ ಭಾರೀ ಸಂಶಯದ ವಾತಾವರಣ ಬಂದಿದೆ. ಇವತ್ತಿನ ಬಂದಿರುವ ಸ್ಟೇಟ್‌ಮೆಂಟ್‌ನಿಂದ ಸಂಶಯದ ಕರಿನೆರಳು ಅದರ ಮೇಲೆ ಇರುವಂಥದ್ದನ್ನು ನಾವು ನೋಡುತ್ತಿದ್ದೇವೆ. ಒಂದು ನಿಮಿಷದಲ್ಲಿ ನಾನು ಹೇಳಿ ಮುಗಿಸುತ್ತೇನೆ.

ಅಧ್ಯಕ್ಷರು : ಅಡ್ಮಿಟ್ ಮಾಡಿದ ಮೇಲೆ ತಾವು ಇದನ್ನೆಲ್ಲವನ್ನೂ ಹೇಳಿ. ಈಗಾಗಲೇ ಎರಡು ನಿಮಷದ ಮೇಲೆ ಆಯಿತು. ತಾವು ಕೇಳಿರುವುದು ಎರಡು ನಿಮಷ ಮಾತ್ರ. ಮೂರು ನಿಮಿಷ ತೆಗೆದುಕೊಂಡಿದ್ದೀರಿ. ಯಾವಾಗಲೂ ಸಾಮಾನ್ಯವಾಗಿ, ತಾವು ಸಮಯಕ್ಕೆ ಸರಿಯಾಗಿ ಮುಗಿಸುತ್ತೀರಿ.

ಶ್ರೀ ಡಿ.ವಿ ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ನನಗೆ ಇರುವ ಮೂರು ನಿಮಿಷದಲ್ಲಿ ಅದರಲ್ಲಿ ತಾವೂ ಕೂಡ ಒಂದು ನಿಮಿಷದವರೆಗೆ ಮಾತನಾಡಿದಿರಿ. ಹಾಗಾಗಿ ಅದನ್ನೆಲ್ಲಾ ಸೇರಿಸಿ ಈಗ ಮಾತನಾಡುತ್ತೇನೆ. ಆದಕಾರಣ ಈ ಸಂಶಯದ ಕರಿನೆರಳಿನ ಒಂದು ವಾತಾವರಣದಿಂದ ಹೊರಗೆ ಬರಬೇಕಾದರೆ, ಬಹುಶ: ಈ ರಾಜ್ಯದಲ್ಲಿರುವಂಥ ಯಾವುದೇ ಅಧಿಕಾರಿಗಳು ಅದರ

ತನಿಖೆಯನ್ನು ಮುಂದುವರೆಸಿದರೆ ಅದು ಆಗುವುದಿಲ್ಲ. ಅದಕ್ಕಾಗಿ ಅದನ್ನು ಸಿಬಿಐ ಗೆ ರೆಫರ್ ಮಾಡಬೇಕು ಎಂದು ಹೇಳುವಂಥದ್ದು ಒಂದು, ಎರಡನೆಯದಾಗಿ ನಮ್ಮ ಒಬ್ಬ ಸಹೋದ್ಯೋಗಿ ಒಬ್ಬರ ತಮ್ಮ ಇದರಲ್ಲಿ. ಶ್ಯಾಮೀಲಾಗಿದ್ದಾರೆ ಎಂದು ಹೇಳುವಂಥದ್ದು, ಅದನ್ನು ಸ್ವಲ್ಪಮಟ್ಟಿಗೆ ಗಂಭೀರವಾಗಿ ಪರಿಗಣನೆ ಮಾಡಬೇಕೆಂದು ಹೇಳುತ್ತಾ, ಇದು ಚರ್ಚೆಯಾಗಬೇಕೆಂದು ನಾನು ಹೇಳುತ್ತೇನೆ.

+ ಶ್ರೀ ಬಿ. ಸೋಮಶೇಖರ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ವೇಳೆಯನ್ನು ತೆಗೆದುಕೊಳ್ಳುವುದಿಲ್ಲ. ಶ್ರೀ ಸಾಂಗ್ಲಿಯಾನ್‌ರವರು ಪೊಲೀಸ್ ಆಯುಕ್ತರಾಗಿದ್ದಾಗ, ಈ ತನಿಖೆಯನ್ನು ನಡೆಸಿ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿಯನ್ನು ಅವರು ನಿವೃತ್ತಿಯಾದ ನಂತರ ಪತ್ರಿಕೆಗೆ ಲೀಕೌಟ್ ಮಾಡಿದ್ದಾರೆ. ಅವರ ಪ್ರೊಪ್ರೈಟಿ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಅಧಿಕಾರಿಗಳು ಅವರು ರಿಟೈರ್ಡ್ ಆದ ಮೇಲೆ ಅವರ ಬಂಡವಾಳಗಳು ಗೊತ್ತಾಗುತ್ತವೆ. ಏನು ಅಧಿಕಾರದಲ್ಲಿದ್ದಾಗ ದೊಡ್ಡ ದೊಡ್ಡ ಚಿತ್ರಗಳನ್ನು ಅವರ ಹೆಸರಿನಲ್ಲಿ ತೆಗೆಯಿಸಿಕೊಂಡು, ಎಸ್‌ಪಿ ಇಂತಹವರು, ಇನ್ಸ್‌ಪೆಕ್ಟರ್ ಇಂತಹವರು ಎಂದು ಚಿತ್ರಗಳನ್ನು ತೆಗೆಸಿಕೊಂಡು, ಅದರ ಜೊತೆಗೆ ಒಳ್ಳೆಯ ಹುದ್ದೆಗಳನ್ನೂ ಕೂಡ ಇಟ್ಟುಕೊಂಡು ಹೇಗೆ ಕೆಲವೊಂದು ವಿಚಾರಗಳಲ್ಲಿ ರಾಜೀಯಾಗುತ್ತಾರೆ ಎನ್ನುವುದರ ಬಗ್ಗೆ ನಮಗೆ ಇವತ್ತು ಇದರಿಂದ ಗೊತ್ತಾಗುತ್ತದೆ. ಅದು ಏನೆ ಇರಲಿ,

"Sangliana, however, made it clear that during his interrogation of Karim Lala he did not come across any evidence to suggest the involvement of Roshan Baig or any other Karnataka Minister."

ಎಂದು ಹೇಳಿದ್ದಾರೆ, ಅಂದರೆ ಅದರ ಅರ್ಥ ಅವರ ಬಗ್ಗೆ ಏನು ಎವಿಡೆನ್ಸ್ ಸಿಕ್ಕಿಲ್ಲ ಎನ್ನುತ್ತಕ್ಕಂಥದ್ದರ ಬಗ್ಗೆ ಹೇಳಿದ್ದಾರೆ. ನಾನು ಅವರನ್ನು ರಾಜೀನಾಮೆ ಕೊಡಬೇಕೆಂದು ಕೇಳುವುದಿಲ್ಲ. ಆದರೆ ಅವರು ಎತ್ತಿರತಕ್ಕಂಥದ್ದು ನೈತಿಕತೆಯ ಪ್ರಶ್ನೆ ಅದನ್ನು ಅವರಿಗೇ ಬಿಡೋಣ. ಆದರೆ ನೈತಿಕತೆ ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿರುತ್ತದೆ. ನಮಗೆ ಒಂದು ಇದ್ದರೆ, ಇನ್ನೊಬ್ಬರಿಗೆ ಒಂದು ಇರುತ್ತದೆ. ಯಾರ್ಡ್‌ಸ್ಟಿಕ್ ಒಬ್ಬೊಬ್ಬರ ಒಂದೊಂದು ರೀತಿ ಇಂಟರಾಪ್ಷೆಕ್ಷನ್ ಅವರ ಒಂದು ವ್ಯಕ್ತಿತ್ವದ ಮೇಲೆ ಹೋಗುತ್ತದೆ. ಆದರೆ ನಾನು, I am more particular about this para. "Mr. sangliana said Karim Lala mentioned to him about bribing many police officers of DIG and IG rank in Karnataka and that could be one of the reasons why he had not been arrested earlier. He said later when he became DGP (Prisons), he came to know that Karim Lala had paid Rs. 25 lakh to Jail officials to get an independent room with T.V. in Jail."

ಇನ್ನೊಂದು ಇನ್‌ಫಾರ್ಮೇಶನ್ ಒಳಗಡೆ ಇದೆ, ಇನ್‌ವೆಸ್ಟಿಗೇಶನ್ ಟೀಮ್ ಇದನ್ನು ಜೈಲಿಗೆ ಹೋಗಿ ಮಾಡುವಾಗ ಈ ರೀತಿ ಇದೆ, "According to sources, the team claims to have got clues on politicians who had taken help from Karim Lala under different situations. Lala had also revealed the names of the Police officers who had taken money from him, the sources stated."

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಅಂದರೆ ಇದರ ಅರ್ಥ ಮೊಗಮ್ಮಾಗಿ ಕೆಲವು ರಾಜಕಾರಣಿಗಳು ಇದರಲ್ಲಿ ಸೇರಿದ್ದಾರೆ, ಮತ್ತು ಈ ಅಧಿಕಾರದಲ್ಲಿರತಕ್ಕಂಥ ಕೆಲವು ಅಧಿಕಾರಿಗಳಿಗೆ ಬ್ರೈಬ್‌ನ್ನು ಮಾಡಿದ್ದಾರೆಂದು ಇದೆ. ಈಗ ನಾನು ಡಿಮ್ಯಾಂಡ್ ಮಾಡತಕ್ಕಂಥದ್ದು, ಅವರ ಇನ್‌ವೆಸ್ಟಿಗೇಶನ್ ಟೀಮ್ ರಿಪೋರ್ಟ್ ಏನಿದೆ, ಮತ್ತು ಕಮಿಷನ್‌ರವರು ಏನು ರಿಪೋರ್ಟ್‌ನ್ನು ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ಯಾರು ಐಪಿಎಸ್ ಅಧಿಕಾರಿಗಳು, ಡಿಐಜಿ ಮತ್ತು ಐಜಿಪಿ ಲೆವಲ್‌ನ ಅಧಿಕಾರಿಗಳು, ಆ ರಿಪೋರ್ಟ್‌ನ್ನು ಇವತ್ತು ನೀವು ನಮಗೆ ಬಹಿರಂಗ ಮಾಡಬೇಕು. ಯಾವ್ಯಾವ ಅಧಿಕಾರಿಗಳು ಎಷ್ಟು ದುಡ್ಡನ್ನು ತೆಗೆದುಕೊಂಡಿದ್ದಾರೆ, ಅದರ ಬಗ್ಗೆ ಬಹಿರಂಗ ಮಾಡಬೇಕು. ಇಲ್ಲಿ ಆರೋಪ ಇರುವುದರಿಂದ, to come out clean, it is in the interest of your party and in your own interest, why are you hesitating to refer it to CBI? ಮಾಡಿ ಚಿಂತೆ ಇಲ್ಲ. ಅದನ್ನು ಮಾಡತಕ್ಕಂಥದ್ದು ನನ್ನ ಒಂದು ಒತ್ತಾಯ. ಏಕೆಂದರೆ ಇವರು ಏನೋ ಮುಚ್ಚಿ ಇಟ್ಟುಕೊಳ್ಳುತ್ತಿದ್ದಾರೆ, ಅದಕ್ಕಾಗಿ ನಾನು ಹೇಳಿದೆ, ಇದರಲ್ಲಿ ಸರ್ಕಾರದ ಏನೋ ಒಂದು ಹಿತಾಶಕ್ತಿ ಇದೆ ಎನ್ನುವುದರ ಬಗ್ಗೆ ಹೇಳಿದೆ. ಇಲ್ಲವೆಂದರೆ ನೀವು ಮೂರು ವರ್ಷದಿಂದ ನಾವು ಒಂದು ಹೊಸ ವ್ಯವಸ್ಥೆಯನ್ನು ತಂದಿದ್ದರೂ ಸಹ ನೀವು ಅದನ್ನೇ ಹೆಚ್ಚು ಹೆಚ್ಚು ಸ್ಟಾಂಪ್ ಪೇಪರ್‌ಗಳನ್ನು ಬಹಳ ವ್ಯವಸ್ಥಿತವಾಗಿ ಮುಂದುವರೆಸಿಕೊಂಡು ಹೋಗುವುದನ್ನು ನೋಡಿದರೆ ಈ ಸರ್ಕಾರವೆ ಶಾಮೀಲಾಗಿ Abett ಅಬೆಟ್ ಮಾಡಿರತಕ್ಕದ್ದು ನನ್ನ ಅನುಮಾನವಿದೆ. ಆದ್ದರಿಂದ ನಿಮ್ಮ ಹಿತದೃಷ್ಟಿಯಿಂದ ಇದನ್ನು ಸಿಬಿಐ ಎನ್‌ಕ್ವಾಯರಿ ಮಾಡಬೇಕು, ವರದಿಯನ್ನು ಏನು ಕಳುಹಿಸಿ ಕೊಟ್ಟಿದ್ದಾರೆ, ಇನ್‌ವೆಸ್ಟಿಗೇಶನ್ ರಿಪೋರ್ಟ್ ಇರಬಹುದು, ಕರೀಂಲಾಲ್ ರವರ ರಿಪೋರ್ಟ್ ಇರಬಹುದು ಅಥವಾ ಸಾಂಗ್ಲಿಯಾನರವರ ರಿಪೋರ್ಟ್ ಇರಬಹುದು, ಅದನ್ನು ನೀವು ಬಹಿರಂಗ ಮಾಡಿದರೆ ಯಾವ ಅಧಿಕಾರಿಗಳು, I am more particular about the bribe given to the officers. ಇಲ್ಲದಿದ್ದರೆ ಅಂತಹ ಅಫೀಸರ್ಸ್‌ಗಳಿಗೆ ನೀವು ಪ್ರೊಮೋಷನ್ ಕೊಟ್ಟು ಇಂಪಾರ್ಟೆಂಟ್ ಹುದ್ದೆಗಳಲ್ಲಿ ಇಟ್ಟಿರತಕ್ಕಂಥದ್ದು ನಮಗೆ ಅನುಮಾನ ಬರುತ್ತಿದೆ. We would like to know who are the officers who have taken bribe from Karim Lala and who have been promoted and given important posts. ನೀವು ಹೇಳಿಕೊಳ್ಳುತ್ತಿದ್ದೀರಲ್ಲಾ, ಪಾರದರ್ಶಕತೆ ಸರ್ಕಾರ, ಭ್ರಷ್ಟಾಚಾರದ ವಿರುದ್ಧ ಸಮರ ಸಾಧಿಸುತ್ತೇವೆಂದು ಹೇಳಿದ್ದೀರಲ್ಲಾ, ಅದಕ್ಕಾಗಿ ನೀವು ಇದರಲ್ಲಿ ಅದನ್ನು ಮಾಡಿ ತೋರಿಸಿ. ಇದನ್ನು ಪಬ್ಲಿಕ್ ಮಾಡಿ ಹಾಗೂ ಇದನ್ನು ಸಿಬಿಐ ಎನ್‌ಕ್ವಾಯರಿಗೆ ಒಪ್ಪಿಸಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಆಯಿತು, ಮಾನ್ಯ ಸಚಿವರು ತಾವು ಇದರ ಬಗ್ಗೆ ಉತ್ತರವನ್ನು ಹೇಳಿ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಸೋಮಶೇಖರ್‌ರವರ ಮತ್ತು ಶ್ರೀ ಸದಾನಂದಗೌಡರು ಮಾತನಡಿದ್ದಾರೆ. ಮಾತನಾಡುವಾಗ ಶ್ರೀ ಸಾಂಗ್ಲಿಯಾನರವರ ಹೇಳಿಕೆಯನ್ನು ಒಂದು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ ಮತ್ತು ಆ ಪತ್ರಿಕೆಯ ಹೇಳಿಕೆಯ ಆಧಾರದ ಮೇಲೆ ನಾವು ಹೀಗೆ ಹೇಳುತ್ತಿದ್ದೇವೆ ಎನ್ನತಕ್ಕಂಥದ್ದನ್ನು ಅವರು ಹೇಳುತ್ತಿದ್ದಾರೆ. ಅವರು ಏನು ಹೇಳಿದ್ದಾರೆ ಅದನ್ನು ನಾನು ಕನ್‌ಫರ್ಂ ಮಾಡಿ ಅದಕ್ಕೆ ನಂಬಿ ಸಂಪೂರ್ಣವಾಗಿ ನಾನೂ ಕೂಡ ಇದನ್ನು ಅನಿಸಿಕೆ ಎಂದು

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಹೇಳಿ ಅವರು ಹೇಳಿದ್ದರೆ, ಅದು ಬಹಳ ಒಳ್ಳೆಯದಾಗುತ್ತಿತ್ತು. ಅವರು ಹೀಗೆ ಹೇಳಿದ್ದಾರೆ, ಅವರು ಹೀಗೆ ಅಂದಿದ್ದಾರೆ, ಅಂದರೆ ಇದು ಏನಾಯಿತು? ಅವರು ಅಲ್ಲಿ ಪ್ರೆಸ್ ಹೇಳಿಕೆ ಹೇಳಿದ್ದನ್ನು ಇವರು ಇಲ್ಲಿ ಪ್ರೆಸ್‌ನೋಟ್‌ನ್ನು ಓದಿದಂತೆ, ನೀವು ಅಥೆಂಟಿಕ್ಕಾಗಿ ನಿಮ್ಮ ಹತ್ತಿರ ಯಾವುದಾದರೂ ಪುರಾವೆಗಳು ಇದ್ದರೆ ತಂದುಕೊಟ್ಟರೆ ಅದರ ಬಗ್ಗೆ ಸ್ಟ್ಯಾಂಪಿಟ್‌ದವರು ಅದರ ಬಗ್ಗೆ ಎನ್‌ಕ್ವಾಯರಿ ಮಾಡಿ ಅದಕ್ಕೆ ವಿಟ್‌ನೆಸ್ ತೆಗೆದುಕೊಂಡು ಮುಂದಿನ ಕ್ರಮವನ್ನು ಜರುಗಿಸುತ್ತಾರೆ.

1.30 ಪಿ.ಎಂ

ಸರ್ಕಾರಕ್ಕೆ ಈ ವಿಷಯವನ್ನು ಮರೆಮಾಚಬೇಕು, ಮುಚ್ಚಹಾಕಿಬಿಡಬೇಕು, ಸಪ್ರೆಸ್ ಮಾಡಬೇಕು ಅನ್ನತಕ್ಕಂಥದ್ದು ಏನೂ ಇಲ್ಲ, In fact, it is to the credit of this Government, 1999 ರಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ತಕ್ಷಣ 1999 ರಲ್ಲಿ ಕೇಸ್ ರಿಜಿಸ್ಟರ್ ಆಯಿತು, 2000ರಲ್ಲಿ ಕೇಸ್ ರಿಜಿಸ್ಟರ್ ಆಗಿದೆ ಮತ್ತು ನಾವು 2001 ರಲ್ಲಿ ಅವರನ್ನು ಅರೆಸ್ಟ್ ಮಾಡಿ ಒಳಗೆ ಹಾಕಿದ್ದು ನಮ್ಮ ಕರ್ನಾಟಕ ಸರ್ಕಾರ. ಅವರ ಆಕ್ಟಿವಿಟೀಸ್ ಬರೇ ಖಾನಾಪುರ ಮತ್ತು ಬೆಂಗಳೂರಿನಲ್ಲಿ ಇಲ್ಲ, ಅವರ ಆಕ್ಟಿವಿಟೀಸ್ ಈ ಹಿಂದೆ ಸದನದಲ್ಲೂ ತಮಗೆಲ್ಲಾ ಗೊತ್ತಿರುವ ಹಾಗೆ ಈ ಸದನದಲ್ಲೂ, ಅವರು ಎಂಥಂಥ ಮುಖ್ಯವಾದ ಜನರೊಂದಿಗೆ ಅವರ ಫೋಟೋ ಇದ್ದವು, ಎಂಥೆಂಥ ಸಂಘಸಂಸ್ಥೆಗಳಿಗೆ ಅವರು ಚೆಕ್ ಅನ್ನು ದೇಣಿಗೆಯಾಗಿ ಕೊಡುತ್ತಿದ್ದರು, ಯಾವ ರೀತಿ ದೊಡ್ಡ ದೊಡ್ಡ ಯೂನಿಯನ್ ಲೀಡರ್‌ಗಳನ್ನು ಹಿಡಿದುಕೊಂಡು ಕೆಳಗಿನ ಮುಖಂಡರುಗಳ ಜೊತೆಯಲ್ಲೂ ಕೂಡ ಮೀಟಿಂಗ್‌ನಲ್ಲಿ ಭಾಗವಹಿಸಿರುವಂತಹ ಫೋಟೋಗಳನ್ನು ಪತ್ರಿಕೆಗಳಲ್ಲಿ ಬಂದಿದ್ದನ್ನು ತಾವೆಲ್ಲರೂ ಸಹ ನೋಡಿದ್ದೀರಿ. ಮಾಧ್ಯಮದಲ್ಲೂ ಸಹ ಬಂದಿದೆ. ಇಷ್ಟಿದ್ದರೂ ಕೂಡ ಯಾವುದೇ ಸರ್ಕಾರ ಅಂದರೆ ಆಂಧ್ರಪ್ರದೇಶದ ಸರ್ಕಾರ ಅವರನ್ನು ಮುಟ್ಟಲಿಲ್ಲ, ಮಹಾರಾಷ್ಟ್ರ ಸರ್ಕಾರ ಅವರನ್ನು ಹಿಡಿಯಲಿಲ್ಲ, ಗುಜರಾತ್ ಸರ್ಕಾರ ಅವರನ್ನು ಹಿಡಿಯಲಿಲ್ಲ, ಚಂಡೀಗಡದಲ್ಲಿ ನಡೆದ ಘಟನೆಗಳ ಬಗ್ಗೆ ಆ ಚಂಡೀಗಡ ಸರ್ಕಾರ ಕೂಡ ಹಿಡಯಲಿಲ್ಲ, ವೆಸ್ಟ್‌ಬೆಂಗಾಲ್ ಇಲ್ಲಿ ಕೂಡ ಇದರ ಬಗ್ಗೆ ಸುಳಿವು ಸಿಕ್ಕಾಗ ಅವರನ್ನು ಹಿಡಿಯಲಿಲ್ಲ. ಆದರೆ ಕರ್ನಾಟಕ ಸರ್ಕಾರ ಅವರನ್ನು ಬಂಧಿಸಿತು. ಹೀಗಿರುವಾಗ ಈ ವಿಷಯವನ್ನು ಮುಚ್ಚಿಡುವುದು, ಸಪ್ರೆಸ್ ಮಡಬೇಕು ಎನ್ನುವುದಾದರೆ 2001ರಲ್ಲಿ ಅವರನ್ನು ಬಂಧಿಸಿ ಜೈಲಿನಲ್ಲಿಟ್ಟು ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ವಿಶೇಷವಾದ ಒಂದು ತಂಡವನ್ನು ನಾವು ರಚಿಸುತ್ತಿರಲಿಲ್ಲ. ಇವತ್ತು ಶ್ರೀಕುಮಾರ್, ಸಿ.ಬಿ.ಐ.ನಲ್ಲಿ ಸುಮಾರು 10–12 ವರ್ಷಗಳು ಕೆಲಸ ಮಾಡಿ, ಅನುಭವ ಪಡೆದಂತಹ ಒಬ್ಬ ವ್ಯಕ್ತಿ ಅವರ ನೇತೃತ್ವದಲ್ಲಿ ಕೆಲವು ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿಗಳನ್ನು ಸೇರಿಸಿ ಇವತ್ತು ಟೀಮ್ ಮಾಡಿದ್ದೇವೆ ಎಂದು ಹೇಳಿ ಇಡೀ ದೇಸದ ತುಂಬಾ ಅಡ್ಡಾಡಿ, ತಿರುಗಾಡಿ ಇವತ್ತು ಅವರು ಸುಮಾರು ಈಗಾಗಲೇ 9 ಕೇಸುಗಳ ಬಗ್ಗೆ ಇನ್‌ವೆಸ್ಟಿಗೇಷನ್ ನಡೆದು, 9 ಕೇಸುಗಳ ಪೈಕಿ 7 ಕೇಸುಗಳಿಗೆ ಚಾರ್ಜ್‌ಶೀಟ್ ಹಾಕಿದ್ದಾರೆ. 9/2002 Fast Track, Bangalore 430/2002, Bangalore CCH (4), 430/2002, Bangalore, 430/2002, CCH, Bangalore.

ಹೀಗೆ ಸುಮಾರು ಎಂದರೆ 9 ಕೇಸುಗಳ ಪೈಕಿ ಈಗಾಗಲೇ 7 ಮತ್ತು 9 ಕಮಿಟ್‌ಮೆಂಟ್ ಆಗಿ ಟ್ರಯಲ್ ಕೋರ್ಟ್‌ಗೆ ಹೋಗಿದೆ ಸುಮಾರು 10 ಕೇಸುಗಳ ಪೈಕಿ ಸುಮಾರು 7 ಕೇಸುಗಳಲ್ಲಿ ಚಾರ್ಜ್‌ಶೀಟ್ ಹಾಕಿದ್ದಾರೆ, ಇನ್ನೂ ಮೂರುನಾಲ್ಕು ಹಾಕತಕ್ಕಂಥದ್ದು ಉಳಿದಿದೆ, ಅದು ಇನ್‌ವೆಸ್ಟಿಗೇಷನ್ ಹಂತದಲ್ಲೂ ಕೂಡ ಇದೆ, ಅದಕ್ಕಾಗಿ ಈ ಸಂದರ್ಭದಲ್ಲಿ ನಾನು ಎಲ್ಲವನ್ನೂ ಕೂಡ ಬಿಚ್ಚಿ ಬಹಿರಂಗವಾಗಿ

ಹೇಳುವಂತಹದ್ದು ಸರಿಯಲ್ಲ; ಈ ದೃಷ್ಟಿಯಿಂದ ನಾವು ಯಾವುದೇ ಮಾತನ್ನು ಇಲ್ಲಿ ಕೂಡ ಪ್ರಸ್ತಾಪ ಮಾಡಿಲ್ಲ, ಹೊರಗಡೆ ಕೂಡ ಪ್ರಸ್ತಾಪ ಮಾಡಿಲ್ಲ. ಎಲ್ಲಾ ಅಧಿಕಾರಿಗಳು ಎಲ್ಲಾ ಕಡೆ ಹೋಗಿ ಮಾಹಿತಿ ಸಂಗ್ರಹಿಸಿದ್ದರೂ ಕೂಡ ಮಾಧ್ಯಮದ ಮುಂದೆ ಏಕೆ ಬರಲಿಲ್ಲ ಅಂದರೆ ಅದು ಕಂಪ್ಲೀಟ್ ಆಗಿ ಇನ್‌ವೆಸ್ಟಿಗೇಷನ್ ಆಗಿ ಕೇಸ್ ಪಕ್ಕಾ ಆಗುವವರೆಗೆ ಇದರ ಬಗ್ಗೆ ನಾವು ಮಾತನಾಡಿ ನಾಳೆ ಕೋರ್ಟ್‌ನಲ್ಲಿ ಒಂದು ಕೇಸ್‌ಗೆ ಧಕ್ಕೆ ಆಗುವಂತಹದ್ದಾಗಲಿ ಅಥವಾ ಅದರ ಮೇಲೆ ಪರಿಣಾಮ ಬೀರುವಂತಹದ್ದಾಗಲಿ ಆಗಬಹುದು ಎನ್ನತಕ್ಕಂತಹ ದೃಷ್ಟಿಯಿಂದ ನಮ್ಮವರು ಸುಮ್ಮನಾದರು. ಇದು ಕೇವಲ ನಮ್ಮ ಕರ್ನಾಟಕ ರಾಜ್ಯದಲ್ಲೇ ಆಗಿಲ್ಲ, ಇಂತಹ ಕೇಸ್‌ಗಳು ಈಗಾಗಲೇ ನಾನು ಹೇಳಿದ ಹಗೆ ಭಾರತ ದೇಶದ ಅನೇಕ ರಾಜ್ಯಗಳಲ್ಲಿ ಇಂತಹ remification cases in stamps and registration ನಲ್ಲಿ ನಡೆದಿವೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ, ಗುಜರಾತ್ ಬಗ್ಗೆ ಬಹಳಷ್ಟು ಅವರು ಹೇಳಿದರು, ನಮ್ಮವರು ಮಾತನಾಡುವುದು ಅಲ್ಲಿನ ಪೋಲೀಸ್ ಮೇಲೆ ರಿಫ್ಲೆಕ್ಷನ್ ಆಗಬಾರದು, ಬಾಂಬೆ ಪೋಲೀಸ್‌ನವರ ಮೇಲೆ ರಿಫ್ಲೆಕ್ಷನ್ ಆಗಬಾರದು, ನಾಳೆ ಅವರೇನಾದರೂ ಹೇಳಿದ ನಂತರ ನಮ್ಮ ಪೋಲೀಸ್‌ನವರ ಮೇಲೆ ರಿಫ್ಲೆಕ್ಷನ್ ಆಗಬಾರದು, ಇಡೀ ಭಾರತದೇಶದಲ್ಲಿರುವಂತಹ ಪೋಲೀಸರು ಯಾವುದೇ ರಾಜ್ಯದ ಪೋಲೀಸರು ಒಬ್ಬರಿಗೊಬ್ಬರು ಇನ್‌ಫಾರ್ಮೇಷನ್ ಷೇರ್ ಮಾಡುತ್ತಾರೆ, ಮಾಹಿತಿಯನ್ನು ಸಂಗ್ರಹಿಸುತ್ತಾರೆ, ಇವರು ಕೊಟ್ಟ ಮಾಹಿತಿ ಮೇಲೆ ಅವರು ಇಲ್ಲಿ ಬಂದು ಅರೆಸ್ಟ್ ಮಾಡುತ್ತಾರೆ, ಅವರು ಕೊಟ್ಟ ಮಾಹಿತಿ ಮೇಲೆ ಇವರು ಅರೆಸ್ಟ್ ಮಾಡುತ್ತಾರೆ, ಈ ರೀತಿ ಅನೇಕ ದಿವಸಗಳಿಂದ ನಡೆದುಕೊಂಡು ಬಂದಿರುವಂತಹದ್ದು. ಆದರೆ ನಮ್ಮವರು ಕೇಳುವುದೇನೆಂದರೆ ಅವರು ಬಂದು ಇಲ್ಲಿ ಅರೆಸ್ಟ್ ಮಾಡಿದರೂ ನಿಮಗೆ ಅದು ಹೇಗೆ ಗೊತ್ತಾಗಲಿಲ್ಲ? ಇದೇನಾಗಿದೆಯೆಂದರೆ ಪೂನಾದಲ್ಲಿ ಕೋಟ್ಯಾಂತರ ರೂಪಾಯಿಗಳ ಸ್ಟ್ಯಾಂಪ್ ಸಿಕ್ಕಿತು, ಪೂನಾದಲ್ಲಿ ಹಾಗೂ ಬಾಂಬೆಯಲ್ಲಿ ಆಗಿದೆ ಎಂದು ತಿಳಿದ ಮೇಲೂ 2001 ರವರೆಗೆ ಏಕೆ ಅರೆಸ್ಟ್ ಮಾಡಲಿಲ್ಲ? 10 ವರ್ಷಗಳಿಂದ ಅಲ್ಲೂ ಕೂಡ ನಡೆದಿದೆ. ನಾವು ಹಿಡಿದ ಮೇಲೆ ಎಲ್ಲರೂ ಬರುತ್ತಿದ್ದಾರೆ ಹೊರತಾಗಿ ಅದಕ್ಕೂ ಮುಂಚೆ ಯಾಕೆ ಹಿಡಿಯಲಿಲ್ಲ, ಗುಜರಾತ್‌ನವರು ಹಿಡಿಯಲಿಲ್ಲ, ಹೈದರಾಬಾದ್‌ನವರು ಹಿಡಿಯಲಿಲ್ಲ. ಬಾಂಬೆಯವರು ಹಿಡಿಯಲಿಲ್ಲ,ನಾಳೆ ದಿವಸ ವಿಧಾನಸಭೆಯಲ್ಲಿ ನಿಮ್ಮ ಗೃಹಸಚಿವರು ಈ ರೀತಿಯಾಗಿ ಮಾತನಡಿದರು ಅನ್ನತಕ್ಕಂಥದ್ದು ಬಂದಾಗ ಒಬ್ಬರಿಗೊಬ್ಬರು ನಾನ್–ಕೋ ಆಪರೇಷನ್ ಆಗುವ ಸಾಧ್ಯತೆ ಇದೆ, ಇದಕ್ಕಿಂತ ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ. ಇದೆಲ್ಲಾ ನಮಗೆ ಗೊತ್ತಿದ್ದರೂ ಸಹ ನಾವು ನಮ್ಮ ಅಧಿಕಾರಿಗಳ ಮೇಲೆ ತಪ್ಪು ಮಾಡಿದ್ದಾರೆ ಎನ್ನುವ ಹಾಗೆ, ನಮ್ಮ ಅಧಿಕಾರಿಗಳ ಮೇಲೆ ರಿಫ್ಲೆಕ್ಷನ್ ಆಗುವ ರೀತಿ ನಾವು ಮಾತನಾಡಲಿಕ್ಕೆ ಹೋದರೆ ಅದು ಇನ್‌ವೆಸ್ಟಿಗೇಷನ್‌ಗೆ ಹೊಡೆತ ಬೀಳುತ್ತದೆ. ನಾಳೆ ಇದರಿಂದ ಏನಾಗುತ್ತದೆ ಅಂದರೆ ಯಾರಾದರೂ ಒಂದು ಕೇಸನ್ನು ಕೈಯಲ್ಲಿ ತೆಗೆದುಕೊಂಡರೂ, ಇಷ್ಟು ದಕ್ಷತೆಯಿಂದ ಕೆಲಸವನ್ನು ಮಾಡಿದರೂ ಕೂಡ ಸರ್ಕಾರದಲ್ಲಿ ಹಾಗೂ ಮುಖಂಡರಿಂದಲೂ ಪುರಸ್ಕಾರ ಸಿಕ್ಕುವುದಿಲ್ಲ, ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸುವುದಿಲ್ಲ ಎನ್ನತಕ್ಕಂಥ ಮಾತು ಬರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಇದನ್ನು ಪತ್ತೆ ಹಚ್ಚಿದ ಅಧಿಕಾರಿಗಳು ಯಾರು? ಅವರು ಹೆಸರನ್ನು ಹೇಳುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮವರು, ಪತ್ತೆ ಹಚ್ಚಿದವರು ನಮ್ಮವರು, ಯಾರಾದರೂ ಇರಲಿ, ಹೇಳುತ್ತೇನೆ. ಈಗ ಸಿ.ಬಿ.ಐ.ಗೆ ರೆಫರ್ ಮಾಡಿ ಎಂದು ಪದೇ ಪದೇ ಹೇಳುತ್ತಿದ್ದಾರೆ, ಕರೀಂಲಾಲ್

ಅವರ ಪಾಸ್‌ಪೋರ್ಟ್ ಸಂ: ಎಲ್ 464765 issued at Bombay Passport Office dtd. 21.5.1992 ಈ ಪಾಸ್‌ಪೋರ್ಟ್ ಅನ್ನು ಸಿ.ಬಿ.ಐ.ನವರು ದಿನಾಂಕ 30-7-1998ರಲ್ಲಿ ಸೀಜ್ ಮಾಡಿದರು. ಕೇಸ್ ನಂ ಆರ್.ಸಿ:2:ಇ 97, ಬಾಂಬೆ ಪಾಸ್‌ಪೋರ್ಟ್ ಸೀಜ್ ಮಾಡಿ ಅವರ ಮೇಲೆ ಕೇಸ್ ಮಾಡಿದ್ದು 1998 ರಲ್ಲಿ, ಆದರೂ ಸಹಿತ ಇನ್ನೂ ಸಿ.ಬಿ.ಐನಲ್ಲಿ ಕೇಸ್ ಪೆಂಡಿಂಗ್ ಇದೆ. ಹಾಗಾದರೆ ಸಿ.ಬಿ.ಐನವರು ಇಲ್ಲಿಯವರೆಗೆ ಏನು ಮಾಡಿದ್ದಾರೆ ಅನ್ನುವುದು ದೇವರಿಗೆ ಗೊತ್ತು, ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇನ್ನೊಂದು ಏಜೆನ್ಸಿ ಮೇಲೆ ಟೀಕೆ ಮಾಡತಕ್ಕಂಥಹ ಹಕ್ಕು ನಮಗಿಲ್ಲ. ಏಕೆಂದರೆ ಮೊನ್ನೆ ಪ್ರಧಾನಮಂತ್ರಿಗಳೂ ಕೂಡ ಒಂದು ಮಾತನ್ನು ಹೇಳಿದ್ದಾರೆ ಅದು ಅವರಿಗೂ ಕೂಡ ಅನ್ವಯಿಸುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಏನು ಹೇಳಿದ್ದಾರೆಂದರೆ; "Vijpayee said that it was for the CBI to decide how to proceed in the case, who is to be prosecuted, under what section is for the CBI to decide the investigative agencies have full independence to proceed in the manner they want. No one can interfere." ಸಿ.ಬಿ.ಐ. ಗೆ ಇರುವ ರೀತಿಯೇ ತತ್ವ ತಮ್ಮ ಸ್ಟಾಂಪಿಗೆ ಇದೆ, ನಮ್ಮ ಸ್ಟಾಂಪಿಗೂ ಕೂಡ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ, ಯಾರೂ ಕೂಡ ಅದರಲ್ಲಿ ಇಂಟರ್‌ಫಿಯರ್ ಆಗಿಲ್ಲ. ಯಾರೂ ಮಾಡುವ ಹಾಗಿಲ್ಲ, ಒತ್ತಡವನ್ನು ಕೂಡ ಮಾಡುವ ಹಾಗಿಲ್ಲ. ಹೀಗೆ ಇವತ್ತು ಗುಜರಾತ್‌ನಲ್ಲಿ 1998ರ ಕೆಸ್ ಬಂದು ರೀಸೆಂಟ್ಲಿ ಮತ್ತೆ ಅಲ್ಲಿನ ಮುಖ್ಯಮಂತ್ರಿಗಳು ಸಿ.ಬಿ.ಐಗೆ ರೆಫರ್ ಮಾಡಿದೇವೆ, ಕೇಂದ್ರ ಸರ್ಕಾರಕ್ಕೆ ಎಂದು ಹೇಳಿದ್ದಾರೆ, ಅವರು ಸಿ.ಬಿ.ಐಗೆ ರೆಫರ್ ಮಾಡದ ಮೆಲೆ ಇದು ಇಡೀ ದೇಶಕ್ಕೆ ಅನ್ವಯಿಸುತ್ತದೆ, ಏಕೆಂದರೆ ಅಲ್ಲಿನ ಡೆಲ್ಲಿನ ಪೋಲೀಸ್ ಆಕ್ಟ್ ಏನಿದೆ ಅದರ ಪ್ರಕರ ಒಂದು ರಾಜ್ಯದಲ್ಲಿ ಇನ್‌ವೆಸ್ಟಿಗೇಷನ್ ನಡೆದಾಗ ಅದಕ್ಕೆ ಸಂಬಂಧಪಟ್ಟಂತೆ ಸಿರೀಸ್ ಆಫ್ ಇನ್ಸಿಡೆಂಟ್ಸ್ ಬಗ್ಗೆ ಮಾಹಿತಿಯನ್ನು ಪಡೆಯಲು ಇನ್‌ವೆಸ್ಟಿಗೇಷನ್ ಮಾಡಲು, ಅಥವಾ ಅಲ್ಲಿ ಬಏರೆಯವರನ್ನು ಸಾಕ್ಷಿಯಾಗಿ ಕರೆಸಲಿಕ್ಕೆ ಎಲ್ಲಾ ಹಕ್ಕು ಇದೆ, ಏನು ತೊಂದರೆ ಇದೆ, ಕೇಂದ್ರ ಸರ್ಕಾರಕ್ಕೆ ನಾವು ಪತ್ರ ಬರೆದು, ಅವರು ಇತ್ತೀಚೆಗೆ ನಮ್ಮನ್ನು ಕೇಳಿದಾಗ, ನಾವು ಅವರಿಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ನಮ್ಮಲಿರತಕ್ಕಂತಹ ಈ ಸ್ಟ್ಯಾಂಪಿಟ್ ಬಗ್ಗೆ ಹಾಗೂ ಈ ಕರೀಂಲಾಲ ಕೇಸ್‌ನ ಬಗ್ಗೆ ರಿಜಿಸ್ಟರ್ ಮಾಡಿದ್ದೇವೆ, ಈ ಎಲ್ಲಾ ಕೇಸಸ್ ಈಗಾಗಲೇ ಅಡ್ವಾನ್ಸ್ ಸ್ಟೇಜ್‌ನಲ್ಲಿದೆ, ಕೆಲವಕ್ಕೆ ಚಾರ್ಜ್‌ಶೀಟ್ ಹಾಕಿದ್ದೇವೆ, ಇನ್ನು ಕೆಲವು ಅಡ್ವಾನ್ಸ್ ಇನ್‌ವೆಸ್ಟಿಗೇಷನ್ ಸ್ಟಜ್‌ನಲ್ಲಿವೆ ಆದ್ದರಿಂದ ಇದನ್ನು ನಾವು ಸಿ.ಬಿ.ಐಗೆ ಕೊಡಲಿಕ್ಕೆ ಆಗುವುದಿಲ್ಲ, ಈಗಾಗಲೇ ಇದರ ಬಗ್ಗೆ ನಾವು ಸಾಕಷ್ಟು ಮುಂದೆ ಹೋಗಿದ್ದೇವೆ; ಬೇಕಾದರೆ ತಮಗೆ ಅನ್ನಿಸಿದ ಮಟ್ಟಿಗೆ ಬೇರೆ ಬೇರೆ ಕೇಸ್‌ಗಳು ಅದರ ಬಗ್ಗೆ ನೀವು ಮಾಡಬಹುದೆಂಬ ಒಂದು ಅಭಿಪ್ರಾಯವನ್ನು ನಾವು ಹಿಂದೆ ಕೊಟ್ಟಿದ್ದೆವು. ನಾವು ಸ್ಪಷ್ಟವಾಗಿ ಹೇಳಿದ್ದೇವೆ, ನಾವು ಏನನ್ನೂ ಮುಚ್ಚಿಟ್ಟಿಲ್ಲ, ಈ ಕೇಸನ್ನು ಸಮರ್ಥವಾದ ನಮ್ಮ ಅಧಿಕಾರಿಗಳು ಇನ್‌ವೆಸ್ಟಗೇಷನ್ ಮಾಡುತ್ತಿದ್ದಾರೆ. ಅವರಿಗೆ ಫ್ರೀ ಹ್ಯಾಂಡ್ ಕೊಟ್ಟಿದ್ದೇವೆ, ಅವರಿಗೆ ಸಿ.ಬಿ.ಐ.ನವರ ಸಹಾಯ ಬೇಕಾದರೆ, ಆಗ ಅವರ ಸಂಪರ್ಕ ಪಡೆದುಕೊಂಡು ಈ ಕೇಸ್ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಲು ಅವರ ಸಹಾಯ ಪಡೆದುಕೊಳ್ಳುತ್ತಾರೆ. ಆದರೆ ನಾವೇನೋ ಮುಚ್ಚಿಟ್ಟಿದ್ದೇವೆ, ಸಿ.ಬಿ.ಐ.ಗೆ ಕೊಡದೆ ಯಾರಿಗೋ ಶೀಲ್ಡ್ ಮಾಡುತ್ತಿದ್ದಾರೆ, ಅಂದರೆ ಒಬ್ಬ ಮಂತ್ರಿಯವರ ಹೆಸರನ್ನು ಪದೇ ಪದೇ ತೆಗೆದುಕೊಂಡಿದ್ದೀರಿ, ಅದು ಸರಿಯಾಗಿಲ್ಲ, ಎರಡೂ ಸದನಗಳಲ್ಲಿ ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ, ಯಾರಾದರೂ ತಪ್ಪಿತಸ್ಥರು ನಮ್ಮ ಮನೆಯಲ್ಲಿದ್ದರೆ

ಅವರನ್ನು ಶೂಲಕ್ಕೇರಿಸಬಹುದು ಎಂದು ಸ್ಪಷ್ಟವಾಗಿದ್ದಾರೆ, ಆದರೂ ಇದನ್ನು ಪದೇ ಪದೇ ಚುಚ್ಚಿ ಮಾತನಾಡಿ ರಾಜಕೀಯ ದುರುದ್ದೇಶದಿಂದ, ಪೊಲಿಟಿಕಲ್ ಮೈಲೇಜ್ ಪಡೆಯಲು, ಅಥವಾ ಸರ್ಕಾರದಲ್ಲಿ ಒಡಕು ಹುಟ್ಟಿಸುವ ದೃಷ್ಟಿಯಿಂದ, ನೀವು ಹೇಳಿದರೆ ಅದರಿಂದ ನಿಮಗೆ ಯಾವ ಲಾಭವೂ ಸಿಕ್ಕುವುದಿಲ್ಲ, ನಿಮಗೆ ಯಾರೂ ಕೂಡ ಸಹಾಯ ಮಾಡಲಿಕ್ಕೆ ಬರುವುದಿಲ್ಲ. ನಾವು ಇಂಪಾರ್ಶಿಲ್ ಆಗಿ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ, ಇದರಲ್ಲಿ ಯಾರ ಮೇಲೂ ಕೂಡ ಒತ್ತಡವನ್ನು ತಂದಿಲ್ಲ. ಸಾಂಗಲಿಯಾನ ಅವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಶ್ರೀ ಎಲ್.ಕೆ. ಅಡ್ವಾನಿಯವರು ಇದನ್ನು ಸಿ.ಬಿ.ಐ.ಗೆ ರೆಫರ್ ಮಡಿ ಎಂದು ಪತ್ರ ಬರೆದ ಮೇಲೆ ನಾವು ನಮ್ಮ ಉತ್ತರವನ್ನು ಕೊಟ್ಟಿದ್ದೇವೆ, ಇದಕ್ಕಾಗಿ ಅಡ್ವಾನ್ಸ್ ಸ್ಟೇಜ್‌ನಲ್ಲಿಟ್ಟು, ಚಾರ್ಜ್‌ಶೀಟ್ ಹಾಕಿ ಸ್ಪೆಷಲ್ ಕೋರ್ಟ್ ಅನ್ನು ಕಾನ್ಸ್‌ಟಿಟ್ಯೂಟ್ ಮಾಡಿದ್ದೇವೆ. Appointment of a judge to the Special Court - Ref. No. LAW 347 ICE 2002-03 Bangalore dtd. 15.2.2002. ಸ್ಪೆಷಲ್ ಕೋರ್ಟ್ ಮಾಡಿ ಎಂದು ಹೈಕೋರ್ಟ್‌ನವರಲ್ಲಿ ಕೇಳಿದ್ದೇವೆ, ಲಾ ಡಿಪಾರ್ಟ್‌ಮೆಂಟ್‌ನವರು ಕೂಡ ಬರೆದಿದ್ದಾರೆ, ರಿಜಿಸ್ಟ್ರಾರ್‌ರವರ ಜೊತೆಯಲ್ಲಿಯೂ ಸಹ ಮಾತನಾಡಿದ್ದೇವೆ. ಈಗ ಒಂದು ಸ್ಪೆಷಲ್ ಕೋರ್ಟ್ ಕಾನ್ಸ್‌ಟಿಟ್ಯೂಟ್ ಮಾಡಿ ಒಂದು ದುಂಡುಪಾಳ್ಯ ಕೇಸ್ ನಡೆದಿದೆ ಇದಕ್ಕಾಗಿ ಒಬ್ಬ ಜಡ್ಜ್‌ನ್ನು ನೇಮಕ ಮಾಡಿ ಆ ಕೇಸನ್ನೂ ಸಹ ಬೇಗನೆ ನಡೆಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದಷ್ಟು ಬೇಗನೆ ಇದರ ಬಗ್ಗೆಯೂ ಕೂಡ ಆಗಬಹುದು. ಹೀಗಿರುವಾಗ ನಮಗೆ ಆಸಕ್ತಿ ಇಲ್ಲದೆ ಹೋಗಿದ್ದರೆ ಅಥವಾ ನಾವು ಇಂಟರ್‌ಫಿಯರ್ ಮಾಡಬಾರದೆಂದು ಏನಾದರೂ ಸರ್ಕಾರದ ಇಚ್ಛೆ ಇದ್ದಿದ್ದರೆ ಸ್ಪೆಷಲ್ ಕೋರ್ಟ್ ಕಾನ್ಸ್ ಟಿಟ್ಯೂಟ್ ಮಾಡುತ್ತಿರಲಿಲ್ಲ, ಸ್ಪೆಷಲ್ ಟೀಮನ್ನು ರಚಿಸುತ್ತಿರಲಿಲ್ಲ, ಇಲ್ಲಿ ಅರೆಸ್ಟ್ ಮಾಡಿ ಕಸ್ಟಡಿಯಲ್ಲಿಡುತ್ತಿರಲಿಲ್ಲ. ಈಗ ಬಾಂಬೆಯಿಂದ ಯಾರೂ ಬರುತ್ತಿರಲಿಲ್ಲ. ಅಲ್ಲಿಯೇ ಬಾಂಬೆಯಲ್ಲಿ, ಹೈದರಾಬಾದ್‌ನಲ್ಲಿ, ಅಹಮದಾಬಾದ್‌ನಲ್ಲಿ ಓಡಾಡುತ್ತಿದ್ದ ಯಾರಿಗೂ ಧೈರ್ಯವಿರಲಿಲ್ಲ, ನಾವು ಅವರನ್ನು ಹಿಡಿದ ಮೇಲೆ ಎಲ್ಲರೂ ಹುಲಿ ವೇಷ ತೊಟ್ಟುಕೊಂಡು ಮೇಲೆ ಎಲ್ಲರೂ ನಮ್ಮದು ಎಂದು ಬರುತ್ತಿದ್ದಾರೆ. ಸಾಂಗ್ಲಿಯಾನ ಅವರು ಒಳ್ಳೆಯ ಅಧಿಕಾರಿಗಳು ಎನ್ನುವ ಭಾವನೆಯಿತ್ತು. ಆದರೆ ಇವರು ನಿವೃತ್ತರಾದ ಮೇಲೆ ಪತ್ರಿಕೆಯಲ್ಲಿ ಇವತ್ತು ಹೇಳಿಕೆ ಕೊಟ್ಟಿರುವುದನ್ನು ನಾನು ನೋಡಿದೆ. ಈ ಮಾತುಗಳನ್ನು ಅವರು ಅಧಿಕಾರದಲ್ಲಿದ್ದು, ಹೇಳಿ, ಪ್ರೊಟೆಸ್ಟ್ ಮಾಡಿ ಇದು ಸರಿಯಲ್ಲ,ನಾನು ಹೊರಗೆ ಹೋಗುತ್ತೇನೆಂದು ಹೇಳಿ ಹೋಗಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಒಳಗಿರುವಾಗ ಸಮಾಧಾನವಾಗಿದ್ದು, ಹೊರಗೆ ಹೋದ ಮೇಲೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುವುದು, ಇದು ಯಾವುದೇ ಸರ್ಕಾರಿ ನೌಕರರಿಗೂ ಸರಿಯಲ್ಲ. ಎಸ್.ಟಿ.ಎಫ್. ತಂಡದವರಿಗೆ ಬಹಳ ಧೈರ್ಯಶಾಲಿ ಇದ್ದಾರೆಂದು ಮಲೆಮಹದೇಶ್ವರದಲ್ಲಿ ವೀರಪ್ಪನ್ ಹಿಡಿಯಲಿಕ್ಕೆ ಅವರನ್ನು ಹಾಕಿದ್ದವು ಅಲ್ಲೆಲ್ಲಾ ತಿರುಗಾಡಿ ಬಂದ ಮೇಲೆ ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಏನೆಂದರೆ ಯಾರಿಗೂ ಸಹ ವೀರಪ್ಪನ್ ಅನ್ನು ಹಿಡಿಯಲು ಸಾಧ್ಯವಿಲ್ಲ, ಇದು ಅಸಾಧ್ಯವೆಂದು. ಯಾವ ಮನುಷ್ಯನ ಬಗ್ಗೆ ಎಲ್ಲರ ಮನಸ್ಸಿನಲ್ಲಿ ಗೌರವ ಇದೆ ಎನ್ನುವ ಮಾತು ಮುದ್ರೆಯಾಗಿತ್ತು, ಅವರೇ ಈಗ ಹಿಡಿಯಲಿಕ್ಕೆ ಸಾಧ್ಯವಿಲ್ಲ; ಎಂದು ಹೇಳಿದರು, ಇವರೇ ನಮ್ಮ ಪರವಾಗಿ ಹಿಡಿಯುವವರು, ಇವರು ರಿಟೈರ್ಡ್ ಆಗುವ ಕೊನೆಯ ಗಳಿಗೆಯಲ್ಲಿ ಈ ಮಾತನ್ನು ಹೇಳುತ್ತಾರೆ, ಈ ಮಾತುಗಳನ್ನು ಮೊದಲೇ ಹೇಳಿದ್ದರೆ ಬೇರೆ ವ್ಯವಸ್ಥೆ ಮಾಡಬಹುದಾಗಿತ್ತು., ನಾನು ಈಗ 2–3 ವರ್ಷದಿಂದ ಗೃಹಮಂತ್ರಿಯಾಗಿರಬಹುದು ಹಿಂದಿನ ಸರ್ಕಾರದವರಿಗೂ ಅದೇ ಅಡ್ವೈಸ್ ಮಾಡಬಹುದಾಗಿತ್ತು, 30–35 ವರ್ಷಗಳವರೆಗೂ ಪೊಲೀಸ್

ಅಧಿಕಾರಿಗಳು ಸೇವೆಯಲ್ಲಿರುತ್ತಾರೆ, ಆದ್ದರಿಂದ ಇದು ಸರಿಯಲ್ಲ ಯಾವುದೇ ಅಧಿಕಾರಿಗಳು ಒಂದು ಕಡೆ ಸರ್ಕಾರದಲ್ಲಿ ತರಬೇತಿ ಪಡೆಯುವಾಗ, ಐ.ಎ.ಎಸ್, ಐ.ಪಿ.ಎಸ್. ಅಧಿಕಾರಿಗಳು ಒಂದು ಕೋಡ್ ಆಫ್ ಕಾಂಡಕ್ಟ್ ಇಟ್ಟುಕೊಂಡು ಸರ್ಕಾರಿ ಸೇವೆಯಲ್ಲಿ ಸೇರುತ್ತಾರೆ. ಇಂತಹ ಗೋಪ್ಯ ಮಾತುಗಳನ್ನು ಹೇಳುವುದಿಲ್ಲ, ಇಡುವುದಿಲ್ಲ ಎನ್ನುವುದನ್ನು ಹೇಳುತ್ತೀರಿ, ಬಂದ ಮೇಲೆ ತಕ್ಷಣ ಯಾರಿಗೆ ಏನು ಅನ್ನಿಸುತ್ತದೋ, ಅದನ್ನು ಹೇಳುವುದು, ಬರೆದುಬಿಡುವುದು, ಕೊನೆಗೆ ಬೀದಿಯಲ್ಲಿ ಜಗಳ ಅಡಿಕೊಳ್ಳುವುದು. ಈ ರೀತಿಯಾಗಿ ನಿವೃತ್ತಿ ಅಧಿಕಾರಿಗಳ ನಡವಳಿಕೆ ಇದ್ದರೆ, ಇದು ದೇಶಕ್ಕೆ, ಸಮಾಜಕ್ಕೆ ಮಾದರಿಯೇ? ಸುಧಾರಣೆ ತರುವಂತಹದಲ್ಲ, ಎಷ್ಟೋ ಸಾರಿ ಕಾನ್‌ಫಿಡೆನ್‌ಷಿಯಲ್ ಮಾತುಗಳು ಆಡಳಿತದಲ್ಲಿ ಒಬ್ಬ ಅಧಿಕಾರಿಯಿಂದ ಇನ್ನೊಬ್ಬ ಅಧಿಕಾರಿಗೆ ನಡೆಯುತ್ತದೆ, ಒಬ್ಬ ಮುಖ್ಯಮಂತ್ರಿ ಇನ್ನೊಬ್ಬ ಅಧಿಕಾರಿಯನ್ನು ಕೇಳಬಹುದು, ಅಥವಾ ಒಬ್ಬ ಮಂತ್ರಿ ಇನ್ನೊಬ್ಬರಿಗೆ ಹೇಳಬಹುದು ಅಥವಾ ಒಬ್ಬ ಶಾಸಕರು ಮಂತ್ರಿಗಳಿಗೆ ಹೇಳಬಹುದು, ಆದರೆ ಯಾವ ಮಾತುಗಳನ್ನು ಅನಾವಶ್ಯಕವಾಗಿ ಸಂಬಂಧವಿರದೆ ಅದರ ಬಗ್ಗೆ ಅವರಿಗೆ ಆಸಕ್ತಿ ಇದ್ದರೆ ಸ್ಟಾಂಪೆಟ ಮುಂದೆ ಹೋಗಿ ಎಲ್ಲಾ ಸಾಕ್ಷಿಗಳನ್ನು ಕೊಟ್ಟು ಅವರ ಕೈ ಭದ್ರಪಡಿಸಿ ಯಾರು ತಪ್ಪು ಮಾಡಿದರೂ ಅವರಿಗೆ ಶಿಕ್ಷೆ ಕೊಡಿಸಬೇಕೇ ವಿನಃ ಎಲ್ಲರೂ ಕೂಡ ಪ್ರೆಸ್ ಕಾನ್‌ಫೆರೆನ್ಸ್ ಮಾಡುತ್ತಾ ಹೋದರೆ, ನೀವೂ ಆ ಇನ್‌ವೆಸ್ಟಿಗೇಷನ್‌ಗೆ ಸಹಾಯ ಮಾಡಿದಂತಾಗುತ್ತದೆಯೇ ಅಥವಾ ಅವರಿಗೆ ಸಹಾಯ ಮಾಡಿದಂತೆ ಆಗುತ್ತದೆಯೇ? ಇದರ ಅರ್ಥವೇನು? ಆ ಕೇಸ್ ಬಗ್ಗೆ ನಮಗೆ ಗೊತ್ತಿರುವಷ್ಟು ಲೀಕ್‌ಔಟ್ ಮಾಡುತ್ತಾ ಹೋಗುತ್ತೇವೆ ಆ ಕೇಸ್ ಹಾಳಾಗಲಿ ಎಂದು ನಮ್ಮ ವೈಯಕ್ತಿಕ ಪಬ್ಲಿಸಿಟಿಗೋಸ್ಕರ, ಇಂಡಿವಿಜ್ಯುಯಲ್ ಪ್ರೆಸ್ಟೀಜ್‌ಗೋಸ್ಕರ, ನೀವು ಬಹಿರಂಗವಾಗಿ ಎಲ್ಲರೂ ಒಂದೊಂದು ಹೇಳಿಕೆಯನ್ನು ಕೊಟ್ಟರೆ ಇದು ಖಂಡಿತವಾಗಿ ಸರಿಯಲ್ಲ ಮತ್ತು ಪ್ರಜಾಪ್ರಭುತ್ವದ ಒಂದು ತತ್ವಕ್ಕೆ, ಅದರ ಬೆಳವಣಿಗೆಗೆ ಇಂತಹ ಹೋಳಿಕೆಗಳೂ ಸರಿಯಿಲ್ಲ ಈ ಬಗ್ಗೆ ಇಡೀ ಸದನ ಚಿಂತನೆ ಮಾಡಬೇಕು, ಗಮನವನ್ನು ಹರಿಸಬೇಕು, ಯಾರೇ ಅಧಿಕಾರಿಗಳು ಅಗಲಿ ಒಳಗಿದ್ದಾಗ ಒಂದು, ಹೊರಗೆ ಹೋದಾಗ ಒಂದು ತತ್ವ ಹೇಳುವುದು, ಈ ಬಗ್ಗೆ ನಾವೆಲ್ಲರೂ ಕೂಡ ಸ್ವಲ್ಪ ಆಲೋಚನೆ ಮಾಡಬೇಕು, ಇದರ ಬಗ್ಗೆ ಸದನವು ಕೂಡ ಚಿಂತನೆ ಮಾಡುವ ಅವಶ್ಯಕತೆ ಬಹಳ ಇದೆ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗ ಅಲ್ಲಿ ಜೇಲ್‌ನಲ್ಲಿ ಅವನಿಂದ ಲಂಚತೆಗೆದುಕೊಂಡಿದ್ದಾರೆ, ಲಂಚ ತೆಗೆದುಕೊಂಡು ಇದೆಲ್ಲಾ ಮಾಡಿದ್ದಾರೆ ಎಂದು ಹೇಳಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಬೇಕಾದರೆ ಪ್ರತ್ಯೇಕವಾಗಿ ಎನ್‌ಕ್ವೈರಿ ಮಾಡುವುದಕ್ಕೆ ಬಂಧಿಖಾನೆ ಮಂತ್ರಿಗಳಾದ ಶ್ರೀ ನಾಯಕ್‌ರವರು ಇದ್ದಾರೆ, ಅವರಿಗೆ ನಾನು ಹೇಳುತ್ತೇನೆ ಮತ್ತು ಡೈರೆಕ್ಷನ್ ಕೊಡುತ್ತೇನೆ. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೂ ಕೂಡ ಕೊಡುತ್ತೇನೆ. ಅಲ್ಲಿ ಏನು ನಡೆದಿದೆ, ಅದರ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳುತ್ತೇನೆ. ಅಂತಹ ಯಾವುದೇ ಅಹಿತಕರ ಘಟನೆಗಳು ಅಲ್ಲಿ ನಡೆಯಬಾರದು ಅಥವಾ ಇನ್ವೆಸ್ಟಿಗೇಶನ್‌ಗೆ ತೊಂದರೆಯಾಗತಕ್ಕಂಥ ರೀತಿಯಲ್ಲಿ ಯಾವುದೇ ಅಧಿಕಾರಿ ನಡೆದುಕೊಂಡರೆ ಆ ಅಧಿಕಾರಿ ಮೇಲೆ ನಾವು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳುವುದಕ್ಕೆ ನಾನು ಹಿಂದೆ ಮುಂದೆ ನೋಡುವುದಿಲ್ಲ. ಇದನ್ನು ನಾನು ಬಹಳ ಸ್ಪಷ್ಟಾಗಿ ಹೇಳುತ್ತೇನೆ. ಆದರೆ ಒಂದು ಮಾತು, ವೇಗ್ ಆಗಿ ನಾವೆಲ್ಲ ಮಾಡಿ, ಯಾರೋ ಒಬ್ಬರು ಹೇಳಿದ್ದಾರೆ ಎಂದು ಹೇಳಿ ಮಾಡಿದರೆ ನಾಳೆ ಅದು ತಪ್ಪಾಗುತ್ತದೆ. ಇದು ಒಂದು. ಎರಡನೇಯದಾಗಿ, ನಾನು ಮೊದಲೇ ಹೇಳಿದ್ದೇನೆ. ಇನ್ವೆಸ್ಟೀಗೇಶನ್‌ನ್ನು

ನಾವು ಕಂಟಿನ್ಯೂ ಇಟ್ಟಿದ್ದೇವೆ, ಅನೇಕ ಕೇಸ್‌ಗಳಲ್ಲಿ ಚಾರ್ಜ್‌ಶೀಟ್‌ಗಳನ್ನು ಹಾಕಿದ್ದೇವೆ, ಸ್ಪೆಷಲ್ ಕೋರ್ಟ್ ಮುಂದೆ ಇದು ಪೆಂಡಿಂಗ್ ಇದೆ, ಪದೇಪದೇ ಏಕೆ ಅದನ್ನು ಮಾಡಲಿಲ್ಲ, ಇದನ್ನು ಮಾಡಲಿಲ್ಲ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಅದು ಅವರಿಗೆ ಬಿಟ್ಟಿದ್ದು. ಎಲ್ಲಿ ಯಾರಿಗೆ ಅರೆಸ್ಟ್ ಮಾಡಬೇಕು ಎನ್ನುವುದು ಅವರಿಗೆ ಬಿಟ್ಟಿದ್ದು. ಅನೇಕ ಸಲ ಮಾಹಿತಿ ಸಂಗ್ರಹಿಸುವುದಕ್ಕೋಸ್ಕರ ಕೂಡ ಕೆಲವು ದಿವಸ ಹೊರಗೆ ಬಿಟ್ಟಿರುತ್ತಾರೆ. ಇನ್ನೊಬ್ಬರು ಇನ್‌ಫಾರ್ಮೆಂಟ್ ಜೊತೆಯಲ್ಲಿ ಅವರಿಗೆ ಕಳುಹಿಸುತ್ತಾರೆ. ಇದೆಲ್ಲ ನಾವು ಹೇಳುವುದಕ್ಕೆ ಆಗುವುದಿಲ್ಲ. ಪ್ರೊಫೇಶನಲೀ ಅವರು ಏನೇನು ಮಾಹಿತಿ ತರುವುದಕ್ಕೋಸ್ಕರ ಅಥವಾ ಈ ಕೇಸ್‌ನ್ನು ಬಿಲ್ಡ್‌ಅಪ್ ಮಾಡಿ ಸರಿಯಾದ ರೀತಿಯಿಂದ ಅಕ್ಯೂಸ್ಡ್ ಅಥವಾ ಕ್ರಿಮಿನಲ್ಸ್‌ಗೆ ಶಿಕ್ಷೆ ಕೊಡಿಸಬೇಕು ಎಂದರೆ ಏನೇನು ಪ್ರಯತ್ನ ಮಾಡಬೇಕೋ ಅದನ್ನು ಅವರು ಮಾಡುತ್ತಾರೆ. ಅವರ ಮೇಲೆ ಸಂಶಯ ಪಡತಕ್ಕಂಥ ಅವಶ್ಯಕತೆ ಇಲ್ಲ. ಎರಡನೇಯದು, ಕರೀಂಲಾಲ್‌ನ ಮೇಲೆ ಇಲ್ಲಿಯ ತನಕ ಏಕೆ ಏನ್‌ಕ್ವೈರಿ ಮಾಡಿಲ್ಲ ಎನ್ನುವುದು. ಅಧ್ಯಕ್ಷರೇ, ತಮಗೆ ಗೊತ್ತಿದೆ, ಅರೆಸ್ಟ್ ಮಾಡಿದಮೇಲೆ ಇಲ್ಲಿ ಪೊಲೀಸ್ ಕಸ್ಟಡಿಗೆ ಕೊಡಿ ಎಂದು ಹೇಳಿ ನಾವು ಸಾಕಷ್ಟು ಪ್ರಯತ್ನವನ್ನು ಕೆಳಗಿನ ಕೋರ್ಟಿನಲ್ಲಿ ಮಾಡಿದ್ದೆವು. ಆದರೆ ಅಲ್ಲಿ ರಿಜೆಕ್ಟ್ ಆಯಿತು. ಪುನಃ ಹೈಕೋರ್ಟಿಗೆ ಹೋದೆವು. ಸುಮಾರು ಒಂದುವರೆ-ಎರಡು ವರ್ಷದ ನಂತರ ಮೊನ್ನೆ ಪೊಲೀಸ್ ಕಸ್ಟಡಿಗೆ ಹೈಕೋರ್ಟ್ ಆದೇಶಕೊಟ್ಟು ಹತ್ತು ದಿವಸಗಳಿಗೋಸ್ಕರ ಪೊಲೀಸ್ ಕಸ್ಟಡಿಗೆ ಈಗ ಕೊಟ್ಟಿದ್ದಾರೆ. ಈಗ ಅದರ ಬಗ್ಗೆ ಇಂಟ್ರಾಗೇಶನ್ ಮತ್ತೊಂದು ಮಾಡುವುದು ಮುಂದೆ ಎಲ್ಲಾ ನಡೆದಿದೆ. ನಾನು ಏಕೆ ಇದನ್ನು ಹೇಳುತ್ತೇನೆ ಎಂದರೆ ಕೆಲವು ಕಾನೂನು ತೊಡುಕುಗಳು ಇರುತ್ತವೆ. ನಮ್ಮ ಪ್ರಯತ್ನ ಎಷ್ಟು ಮಾಡಿದರೂ ಕೂಡ ಇವತ್ತು ರೂಲ್ ಆಫ್ ಲಾ ಮತ್ತು ಪ್ರೊಸೀಜರ್ ಪ್ರಕಾರ ನಾವು ಹೋಗಬೇಕಾಗುತ್ತದೆ. ಅದರ ಪ್ರಕಾರ ನಾವು ಇವತ್ತು ಹೆಜ್ಜೆಯನ್ನು ಇಟ್ಟಿದ್ದೇವೆ. ಅಷ್ಟೆಲ್ಲಾ ನಾಸಿಕ್‌ನಲ್ಲಿರತಕ್ಕಂಥ ಮಿಂಟ್ ಪ್ರೆಸ್ ಇನ್ನೊಂದು ಇದನ್ನು ಪತ್ತೆಹಚ್ಚಿದವರು ನಾವು. ಪತ್ತೆ ಹಚ್ಚಿದಮೇಲೆ ಏಕೆಂದರೆ ಇನ್ವೆಸ್ಟಿಗೇಶನ್‌ನಲ್ಲಿ ನಮ್ಮವರಿಗೆ ಗೊತ್ತಾದಮೇಲೆ ಆ ಬೇಸಿಸ್‌ಮೇಲೆ ಮಾನ್ಯ ಜಸ್ವಂತ್ ಸಿಂಗ್ ಅವರಿಗೆ ನಮ್ಮ ಮುಖ್ಯಮಂತ್ರಿಗಳು ಒಂದು ಪತ್ರ ಬರೆದರು. ಹೀಗೆ ನಾಸಿಕ್ ಸೆಕ್ಯುರಿಟಿಯಲ್ಲಿ ಇಂತಹ ಎಲ್ಲಾ ಹಳೆಯ ಮೆಶಿನ್‌ಗಳನ್ನು ಯಾವುದೋ ಒಂದು ರೀತಿಯಿಂದ ಹೊರಗಡೆಗೆ ತೆಗೆದುಕೊಂಡುಹೋಗಿ ದುರುಪಯೋಗ ಆಗುತ್ತಿದೆ, ಅಲ್ಲಿ ಸೆಕ್ಯುರಿಗ ಲ್ಯಾಪ್ಸಸ್ ಆಗುತ್ತಿದೆ. ಆದ್ದರಿಂದ ದಯವಿಟ್ಟು ನೀವು ಸೆಕ್ಯುರಿಟಿಯನ್ನು ಟೈಟ್ ಮಾಡಬೇಕು ಮತ್ತು ಇದರ ಬಗ್ಗೆ ಗಮನಹರಿಸಬೇಕು. It is a very very serious matter,ಎನ್ನತಕ್ಕಂಥಾದ್ದನ್ನು ಹೇಳಿ ಸುಮಾರು ಒಂದು-ಒಂದೂವರೆ ವರ್ಷದ ಹಿಂದೆ ನನಗೆ ತಿಳಿದಮಟ್ಟಿಗೆ ನಾವು ಪತ್ರವನ್ನು ಬರೆದಿದ್ದೇವೆ. ಇದಲ್ಲದೆ ಮತ್ತದಕ್ಕೆ ರಿಮೈಂಡರ್ ಕೂಡ ಕಳುಹಿಸಿದ್ದೇವೆ. ಏಕೆಂದರೆ ಅಲ್ಲಿಂದ ಒಂದು ಮಿಂಟ್‌ಪ್ರೆಸ್ ಹೊರಗಡೆಯಿಂದ ಅದು ಸ್ಟ್ಯಾಂಪ್ಸ್ ಇರಬಹುದು ಅಥವಾ ನೋಟ್ ಬಗ್ಗೆ ಇರಬಹುದು, ಏನಾದರೂ ತಪ್ಪಿ ಅಥವಾ ಸ್ಕ್ರ್ಯಾಪ್ ರೂಪದಲ್ಲೇ ಯಾರಿಗಾಗದರೂ ಮಾರತಕ್ಕಂಥಾದ್ದು ಅಥವಾ ಆ್ಯಕ್ಷನ್ ಹಾಕಿರತಕ್ಕಂಥಾದ್ದು ಆಗಿದ್ದರೆ ಎಷ್ಟು ದುರಾದೃಷ್ಟ. ಇದು ನಾವು ಮಾಡಿದ್ದಾ? ನಾವು ಯಾರನ್ನು ಬ್ಲೇಮ್ ಮಾಡಬೇಕಾಗುತ್ತದೆ? ಇದರ ಬಗ್ಗೆ ನಾವು ಪತ್ರ ಬರೆದಿದ್ದೇವೆ. ಅಂದರೆ ನಮಗೆ ಇದೆಲ್ಲ ಮುಚ್ಚುಮರೆ ಮಾಡಿ ಇಡಬೇಕು ಎಂದಿದ್ದರೆ ಇದರ ಬಗ್ಗೆ ನೀವು ಗಮನ ಹರಿಸಿ ಎಂದು ಕೇಂದ್ರ ಸರ್ಕಾರಕ್ಕೆ ಏಕೆ ಪತ್ರ ಬರೆಯುತ್ತಿದ್ದೆವು? ಏಕೆಂದರೆ ಈ ದೇಶದ ಬಗ್ಗೆ ನಮಗೂ ಕೂಡ ಚಿಂತನೆ ಎದೆ,

ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಅಲುಗಾಡಿಸತಕ್ಕಂಥ ಅಥವಾ ಬುಡಮೇಲು ಮಾಡತಕ್ಕಂಥ ಯಾರೇ ಜನ ಇರಲಿ, ಎಂತಹ ವ್ಯಕ್ತಿಯೇ ಇರಲಿ, ಅವರೆಲ್ಲರೂ ಕೂಡ ದೇಶದ್ರೋಹಿಗಳು. ಅವರನ್ನು ಮಟ್ಟ ಹಾಕತಕ್ಕಂಥಾದ್ದೇ ನಮ್ಮ ಕೆಲಸ. ಆದರೆ ನೀವು ಸುಮ್ಮನೆ ಈ ಸರ್ಕಾರ ಯಾಕೆ ಹೀಗೆ ಮಾಡಿದೆ ಎಂದು ನಿಮ್ಮ ಮೇಲೂ ನಮಗೆ ಸಂಶಯ ಬರುತ್ತದೆ, ಸರ್ಕಾರದ ಮೇಲೆ ಕೂಡ ಸಂಶಯ ಬರುತ್ತದೆ ಎಂದು ಈ ಸರ್ಕಾರ a better ಎಂದು ಶ್ರೀ ಸೋಮಶೇಖರ್ ಅವರು ಹೇಳಿಬಿಟ್ಟರು. ಹಾಗಾದರೆ ಈ ಕರೀಂಲಾಲ್ ವಿರುದ್ಧ ಕೇಸ್ ರಿಜಿಸ್ಟರ್ ಮಾಡುವುದು ನನಗೆ ತಿಳಿದಮಟ್ಟಿಗೆ ಎಂಟು-ಹತ್ತು ವರ್ಷಗಳಿಂದ ನಡೆದಿದೆ. ಎಂಟು-ಹತ್ತು ವರ್ಷಗಳಿಂದ ನಮ್ಮ ಸರ್ಕಾರ ಒಂದೇ ಅಧಿಕಾರದಲ್ಲಿ ಇರಲಿಲ್ಲ. ಹಾಗಾದರೆ ನೀವು a better ಆಗಿದ್ದಾರಾ?

ಶ್ರೀ ಬಿ.ಸೋಮಶೇಖರ್: ಇಷ್ಟು ಕೋಟಿಯಷ್ಟು ನಮ್ಮ ಸರ್ಕಾರ ಇದ್ದಾಗ ಆಗಿದ್ದರೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಇರಿ, ಹೇಳುತ್ತೇನೆ. ನನಗೆ ಆಶ್ಚರ್ಯ ಆಗುತ್ತದೆ. ಸ್ವಾಮಿ, ತಾವು ರೆವಿನ್ಯೂ ಮಿನಿಸ್ಟರ್ ಇದ್ದಿರಿ. ಕರ್ನಾಟಕ ಸರ್ಕಾರಕ್ಕೆ ಸ್ಟ್ಯಾಂಪ್‌ಡ್ಯುಟಿಯಿಂದ ಒಂದು ವರ್ಷಕ್ಕೆ ಎಷ್ಟು ಆದಾಯ ಬರತಕ್ಕಂಥಾದ್ದು? ಒಂದು ಸಾವಿರ ಕೋಟಿಯೋ ಅಥವಾ ಎರಡು ಸಾವಿರ ಕೋಟಿಯೋ? ಅವರಿಗೆಲ್ಲಾ ಗೊತ್ತಿದೆ. ಆದರೆ ನಮಗೆ ಬ್ಲೇಮ್ ಮಾಡುವಾಗ ಅದು ನಲ್ವತ್ತೈದು ಸಾವಿರ ಕೋಟಿರೂಗೆ ಹೋಯಿತಾ? ಅದು ಎಲ್ಲಿಗೆ ಹೋಯಿತು? ನಮ್ಮ ಇನ್‌ಕಮ್ ಇರುವುದೇ ಇಷ್ಟು. ಅದು ಆಗಿದೆ ಎಂದು ಹೊರರಾಜ್ಯಗಳದ್ದೂ ಸೇರಿಸಿ ಹಿಡಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ.ಸೋಮಶೇಖರ್: ಒಂದು ನಿಮಿಷ. ಸ್ಟಾಂಪ್ ಡ್ಯೂಟಿ ಬೇರೆ. ಈಗ ಸ್ಟಾಂಪ್ ಡ್ಯೂಟಿ ಹೆಚ್ಚಾಗಿದ್ದರೆ ಅದರಲ್ಲಿ ನೀವು ನಕಲಿ ಸ್ಟಾಂಪ್ ಕಾಗದ ರಿಜಿಸ್ಟ್ರೇಶನ್ ಮಾಡಿರತಕ್ಕಂಥಾದ್ದಕ್ಕೂ ಒರಿಜಿನಲ್ ಸ್ಟಾಂಪ್ ಕಾಗದದ ಮೇಲೆ ರಿಜಿಸ್ಟ್ರೇಶನ್ ಮಾಡುವುದಕ್ಕೂ ವ್ಯತ್ಯಾಗಳು ಕಾಣುವುದಿಲ್ಲ. ಈ ಲಿಗಾಲಿಟಿ ಆಫ್ ಡಾಕ್ಯುಮೆಂಟ್ಸ್ ಪ್ರಶ್ನೆ ಬೇರೆ ಇದೆ. ಅದರಲ್ಲಿ ವ್ಯತ್ಯಾಸ ಕಾಣುವುದಿಲ್ಲ. ಆದರೆ ಸ್ಟಾಂಪ್ ಡ್ಯೂಟಿ ಹೆಚ್ಚಾಗಿದ್ದರೆ ಅದರಲ್ಲೇನೂ ಅವ್ಯವಹಾರವಾಗಿದೆ ಎಂದು ನಾವು ಹೇಳುವುದಿಲ್ಲ. ನಾವು ಹೇಳಿರ ತಕ್ಕಂಥಾದ್ದು – Instead of original stamp papers, fake stamp papers have been used. ಎಂದು. ಅದು ಹೆಚ್ಚು ಪ್ರಮಾಣದಲ್ಲಿ ಆಗಿರುವಂಥಾದ್ದು. ನಾವೇನು ಈ ಬಿಳಿಹಾಳೆ ಮೇಲೆ ರಿಜಿಸ್ಟ್ರೇಶನ್ ಮಾಡಬಹುದು ಎಂದು ತಂದಿರತಕ್ಕಂಥ ವ್ಯವಸ್ಥೆಯನ್ನು ನೀವು ಮುಚ್ಚಿಟ್ಟು ಹೆಚ್ಚೆಚ್ಚು ಫೇಕ್ ಸ್ಟಾಂಪ್ ಪೇಪರ್ಸನ್ನು ವಿತರಣೆ ಮಾಡಿದ್ದೀರಿ ಎನ್ನತಕ್ಕಂಥದ್ದು ನನ್ನ ವಾದ. That is why you are an abetter.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕೊನೆಗೆ ಅವರ ಬೆನ್ನನ್ನು ಅವರು ಚಪ್ಪರಿಸಿಕೊಳ್ಳಲಿ. ನಾನೇನೂಬೇಡ ಎನ್ನುವುದಿಲ್ಲ. ಇದೆಲ್ಲಾ ಕರೀಂಲಾಲ್‌ನ ಕೇಸು ಹೊರಗೆ ಬಂದಮೇಲೆ ನಾವು ಸಂಪೂರ್ಣವಾಗಿ ಇದನ್ನು ಸ್ಥಗಿತಗೊಳಿಸಿದ್ದೇವೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಮುಂದೆ ಅದನ್ನು ತಡೆಹಿಡಿಯಬೇಕು ಎನ್ನತಕ್ಕಂಥ ದೃಷ್ಟಿಯಿಂದಲೇ ಸಂಪೂರ್ಣವಾಗಿ ಸ್ಟಾಂಪ್ಸ್‌ನ್ನು ಪ್ರಿಂಟ್ ಮಾಡತಕ್ಕಂಥಾದ್ದು ಅಥವಾ ತರಿಸಿಕೊಳ್ಳತಕ್ಕಂಥಾದ್ದನ್ನು ನಾವು ಸ್ಟಾಪ್ ಮಾಡಿದೆವು.

ಶ್ರೀ ಬಿ. ಸೋಮಶೇಖರ್: ಇದನ್ನು ಯಾವಾಗ ನೀವು ಮಾಡಿದ್ದು ಇದನ್ನು ಮೂರು ವರ್ಷ ಹಿಂದೆ ಮಾಡಿದ್ದರೆ ಇದು ಆಗುತ್ತಿತ್ತಾ? ಅದನ್ನು ನಾನು ಹೇಳುವುದು, ಇನ್ನೇನಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಐದು ವರ್ಷದ ಹಿಂದೆ ಮಾಡಿದ್ದರೂ ಆಗುತ್ತಿತ್ತು.

Sri. B.Somashekar :-You have allowed the fake stamp papers to circulate.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ನಾವು ಈಗ ಅಲರ್ಟ್ ಆಗಿದ್ದೇವೆ. ಹಾಗಾದರೆ ನೀವು ಐದು ವರ್ಷದ ಹಿಂದೆಯೇ ಮಾಡಬಹುದಾಗಿತ್ತಲ್ಲಾ? ಅದಕ್ಕೆ ಇದು ಸುಮ್ಮನೆ, ಇದೆಲ್ಲಾ ಬೇಡ. ಇದು ಹೇಗೆ ಎಂದರೆ ನಮ್ಮ ಕಡೆ ಒಂದು ಮಾತಿದೆ. ಅದು ಹೇಳಿದರೆ ತಪ್ಪಾಗುತ್ತದೆ.

ಮಾನ್ಯ ಸದಸ್ಯರು:- ಪರವಾಗಿಲ್ಲ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾಣು ಏನು ಹೇಳಬೇಕಿತ್ತೆಂದರೆ ಇದು ಕೆಸರಿನಲ್ಲಿ 'ಕಲ್ಲುಹಾಕಿ ಮೈಮೇಲೆ ಸಿಡಿಸಿಕೊಳ್ಳುವುದು ಬೇಡ ' ಎಂದು. ಅದನ್ನು ನಾನು ಅಷ್ಟಕ್ಕೇ ಬಿಟ್ಟುಬಿಡುತ್ತೇನೆ. ಅದು ಹೋಗಲಿ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆ ಎಂದರೆ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ. ಒಂದು ಕಡೆ ಆದಷ್ಟು ರೆವಿನ್ಯೂ ಲಾಸಸ್ ಆಗಿರತಕ್ಕಂಥಾದ್ದು ತಪ್ಪಿಸುವುದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಇವತ್ತಿನ ದಿವಸ ಆ ಸ್ಟಾಂಪ್ಸ್ ಉಪಯೋಗ ಮಾಡತಕ್ಕಂಥಾದ್ದು ರದ್ದು ಮಾಡಿದ್ದಾರೆ. ಎರಡನೇಯದಾಗಿ ಇದರ ಬಗ್ಗೆ ಟೀಮನ್ನು ಕಾನ್ಸಿಟ್ಯೂಟ್ ಮಾಡಿ ಚಾರ್ಜ್‌ಶೀಟ್ ಹಾಕಿರತಕ್ಕಂಥಾದ್ದು, ಸ್ಪೆಶಲ್ ಕೋರ್ಟ್‌ನ್ನು ಕಾನ್ಸಿಟ್ಯೂಟ್ ಮಾಡಿರತಕ್ಕಂಥಾದ್ದು ಎಲ್ಲಕ್ಕಿಂತಲೂ ದೊಡ್ಡದು. ಮೂರನೇಯದಾಗಿ, ತನಿಖೆ ಮಾಡುತ್ತಿರುವ ಅವರಿಗೆ ಫ್ರೀ ಹ್ಯಾಂಡ್ ಕೊಟ್ಟು ತನಿಖೆ ಮಾಡುವುದಕ್ಕೆ ಇವತ್ತಿನದಿವಸ ಅವರು ಎಲ್ಲಾ ಕಡೆ ಹೋಗಿ ಮಾಡುತ್ತಾರೆ. ಆದರೆ ಎಲ್ಲೆಲ್ಲಿ ಹೋಗುತ್ತಾರೆ, ಏನೇನು ಮಾಡುತ್ತಾರೆ ಎಂದು ಪ್ರತಿನಿತ್ಯದ ಇನ್ವೆಸ್ಟಿಗೇಶನ್‌ನ್ನು ಇಲ್ಲಿ ನಾವು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನಿನ್ನೆ, ಮೊನ್ನೆ ಅವರು ಬೊಂಬಾಯಿಗೆ ಹೋಗಿದ್ದರು. ಅಲ್ಲಿ ಏನು ಮಾಡಿಕೊಂಡು ಬಂದರು ಎಂದು ನಾನು ಹೇಳುವುದಕ್ಕೆ ಆಗುತ್ತದೆಯೇ? ಅವರು ಕಲ್ಕತ್ತಾ, ಮುಂಬಯಿ ಅಂತ ಎಲ್ಲೆಲ್ಲಿ ಈ ಕೇಸುಗೋಸ್ಕರ ಅವಶ್ಯಕತೆ ಇದೆ ಎಲ್ಲಾ ಕಡೆ ಅವರು ಹೋಗಿಬರುತ್ತಿದ್ದಾರೆ. ಅವರು ಅಲ್ಲೆಲ್ಲಾ ಹೋಗಿ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸುತ್ತಾರೆ. ಸಮಯ ಬಂದಾಗ ಮತ್ತು ಆ ಕೇಸ್‌ಗೆ ಅನುಕೂಲವಾಗ ತಕ್ಕಂಥ ರೀತಿಯಲ್ಲಿ ಏನೇನು ಮಾಹಿತಿಗಳನ್ನು ಸಂಗ್ರಹಿಸಬೇಕು ಅದನ್ನು ಅವರು ಸಂಗ್ರಹಿಸುತ್ತಾರೆ ಮತ್ತು ಅದೇ ರೀತಿಯಾಗಿ ಆ ಕೇಸ್‌ನ್ನೂ ಕೂಡ ಇವತ್ತು ಬಿಲ್ಡ್‌ಅಪ್ ಮಾಡಿ ಕೋರ್ಟಿನ ಮುಂದೆ ಹಾಜರುಪಡಿಸುತ್ತಿದ್ದಾರೆ. ಅದು ಮುಂದೆ ಯಾವ ರೀತಿಯಾಗಿ ಮಾಡುತ್ತಾರೆ ಎಂಬುದು ನಮ್ಮ ಕೋರ್ಟಿಗೆ ಬಿಟ್ಟಿರತಕ್ಕಂಥ ವಿಷಯ.ಇವತ್ತು ಕರಿಂಲಾಲನ ಬಗ್ಗೆ ಅಥವಾ ಅವನು ಏನು ಇಲ್ಲಿ ಈ ಕೆಲಸವನ್ನು ಅಪರಾಧಗಳನ್ನು ಮಾಡಿದ್ದಾರೆ ಅವನೇ ಆಗಲಿ ಅಥವಾ ಅವನಿಗೆ ಬೆಂಬಲ ನೀಡತಕ್ಕಂಥವರು ಯಾರೇ ಆಗಲಿ ಅವರಿಗೆ ರಕ್ಷಣೆ ಮಾಡುವುದಕ್ಕೆ ಈ ಸರ್ಕಾರ ನಿಂತಿಲ್ಲ. ಅಂತಹವರಿಗೆ ಶಿಕ್ಷೆ ಕೊಡಿಸಬೇಕೆಂದು ಹೇಳಿ ನಾವು ನಿಂತಿದ್ದು, ನಾವು ಮಾಡತಕ್ಕಂಥ ಪ್ರಯತ್ನಗಳು, ಅದಕ್ಕೆ ಅಧ್ಯಕ್ಷರೇ ನಾನು ಹೆಚ್ಚಿಗೆ ಲಂಬಿಸುವುದಿಲ್ಲ, ಇವರು ತಂದಿರತಕ್ಕಂಥ ನಿಲುವಳಿ ಸೂಚನೆಯ ಪ್ರಶ್ನೆಯೇ ಬರುವುದಿಲ್ಲ ಅವರು ಬಹುಶಃ ಈ ಸದನದಲ್ಲಿ ಒಂದು ಸಲ ಅಲ್ಲ, ನಾಲ್ಕು ಸಲ ಚರ್ಚೆಯಾಗಿದೆ. ನನಗನ್ನಿಸುತ್ತದೆ ಪ್ರತಿಯೊಂದು ಅಧಿವೇಶನಲ್ಲಿ ಇದು ಚರ್ಚೆಗೆ ಬಂದೇ ಬರುತ್ತದೆ. ಈಗ ನಾವು ಎಂದು ಅವನನ್ನು ಹಿಡಿದು ಅರೆಸ್ಟ್ ಮಾಡಿದ್ದೇವೆ, ಯಾವಾಗ ಅಧಿವೇಶನ ಸೇರುತ್ತೇವೆ ಅವಾಗ ಇದು ಚರ್ಚೆಗೆ ಬಂದೇ ಬಂದಿದೆ. ಅನೇಕ ಸಲ ಇದರ ಬಗ್ಗೆ ನಾವು ಹೇಳಿದ್ದೇವೆ. ಮತ್ತೆ ನಾನು ಇದರ

ಬಗ್ಗೆ ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೇ ಬೇರೆ ವಿಷಯಗಳನ್ನು ಕೂಡ ನಾವು ಲಂಬಿಸುತ್ತಾ ಹೋದರೆ ನಾಳೆ ಇನ್‌ವೆಸ್ಟೀಗೇಶನ್‌ಗೂ ತೋಂದರೆಯಾಗಬಾರದು. ಸಬ್‌ಜುಡೀಸ್ ಆಗಬಾರದು, ಅದಕ್ಕಾಗಿ ನಾನು ಇಷ್ಟು ಮಾತ್ರ ಹೇಳುತ್ತೇನೆ. ಅವರಿಗೆ ನಾನು ಭರವಸೆ ಕೊಡುತ್ತೇನೆ. ಶ್ರೀಮಾನ್ ಜಗದೀಶ್‌ಶೆಟ್ಟರ್‌ರವರಿಗೆ ಶ್ರೀಮಾನ್ ಸೋಮಶೇಖರ್ ಮಾನ್ಯ ಸಿಂಧ್ಯಾರವರಿಗೆ, ಹೇಳುವುದೇನೆಂದರೆ, ಇವರ ಬಗ್ಗೆ ನಿಷ್ಪಕ್ಷಪಾತವಾಗಿ ನಮ್ಮ ಎನ್‌ಕ್ವೈರಿ ನಡೆಯುತ್ತದೆ ಮತ್ತೆ ಕೇಸ್ ಕೂಡ ಅದೇ ರೀತಿಯಾಗಿ ನಾವು ನಡೆಸುತ್ತೇವೆ. ಅದಕ್ಕಾಗಿ ವಿಶೇಷವಾದ ಕೋರ್ಟ್‌ನ್ನು ಕೂಡ ಸ್ಥಾಪನೆ ಮಾಡಿದ್ದೇವೆ. ಯಾರೂ ಕೂಡ ಸಂಶಯಪಡಬೇಕಾಗಿಲ್ಲ ಮತ್ತು ಈ ಕೇಸನ್ನು ಸಿ ಬಿ ಐ ಗೆ ಕೊಡತಕ್ಕಂಥ ಅವಶ್ಯಕತೆ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಸಿ ಬಿ ಐ ಗಿಂತಲೂ ನಾವು ಇವತ್ತು ಮುಂದೆ ಹೋಗಿದ್ದೇವೆ. ನಾನು ಇನ್ನೊಂದು ಮಾತು ಇಲ್ಲಿ ಹೇಳುವುದಿಲ್ಲ. ಮೊನ್ನೆ ನಮ್ಮ ಅಧಿಕಾರಿಗಳು ಹೋದಾಗ ಕೇಂದ್ರ ಸರ್ಕಾರದವರು ಅಥವಾ ಅಲ್ಲಿನ ಹೋಮ್ ಸೆಕ್ರೆಟರಿಯವರು ಯಾವ ರೀತಿಯಾಗಿ ಇದರ ಬಗ್ಗೆ ತೃಪ್ತಿ ವ್ಯಕ್ತ ಪಡಿಸಿದ್ದಾರೆ ಎನ್ನುವಂತಹ ಮಾತನ್ನು ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅವರು ಇದರ ಬಗ್ಗೆ ಏನು ಹೇಳಿದರು ಹೇಗೆ ಹೇಳಿದರು ಎನ್ನತಕ್ಕಂಥಾದ್ದು, ಅದು ಸರಿಯೂ ಇರುವುದಿಲ್ಲ, ಆದರೆ ಇಷ್ಟು ಮಾತ್ರಹೇಳುತ್ತೇನೆ, ಇವತ್ತಿನದಿವಸ ನಮ್ಮ ಏಜನ್ಸಿಯಿಂದ ನಮ್ಮ ಸ್ಟಾಂಪಿಟ್ ಟೀಮ್‌ವನ್ನು ಇದೆ ಇವರ ಇನ್‌ವೆಸ್ಟಿಗೇಶನ್‌ನಿಂದ ಎಲ್ಲರೂ ತೃಪ್ತರಿದ್ದಾರೆ, ಆ ಕೆಲಸ ಸರಿಯಾದ ರೀತಿಯಿಂದ ನಡೆದಿದೆ, ಯಾರು ಏನೇ ಹೇಳಿಕೊಂಡು ಹೋಗಲಿ ಹೊರಗಡೆ ಪ್ರೆಸ್‌ನಲ್ಲಿ, ಪ್ರೆಸ್ ಕಾನ್ಪರೆನ್ಸ್ ಮಾಡಿ, ಅದರ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ನಮ್ಮ ಗುರಿ ಇರತಕ್ಕಂಥಾದ್ದು ಒಂದೇ ಒಳ್ಳೆಯ ರೀತಿಯಿಂದ ಇನ್‌ವ್‌ಸ್ಟಿಗೇಶನ್ ಮಾಡಿ, ಎನ್‌ಕ್ವೈರಿ ಮಾಡಿಸಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸತಕ್ಕಂಥಾದ್ದೇ ನಮ್ಮ ಒಂದು ಗುರಿ, ಆ ಗುರಿಯನ್ನು ಮುಟ್ಟುವುದಕ್ಕೆ ನಾವು ಏನೇನು ಪ್ರಯತ್ನಗಳನ್ನು ಮಾಡಬೇಕು ಆ ಕೆಲಸವನ್ನು ಸಮರ್ಥವಾಗಿ ನಮ್ಮ ಸರ್ಕಾರ ಮಾಡುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೇ,.....

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ ಮತ್ತೆ ಚರ್ಚೆಗೆ ಎಲ್ಲಿ ಅವಕಾಶ ಇದೆ? ಇದೆ?

ಶ್ರೀ ಜಗದೀಶ ಶೆಟ್ಟರ್: ಹಾಗಾದರೆ ಅವರು ಹೇಳಿದರೆ ಮುಗಿಯಿತೇ?

ಅಧ್ಯಕ್ಷರು:– ಆಗುವುದಿಲ್ಲ. ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಜಗದೀಶ ಶೆಟ್ಟರು: ಏನು ನಡೆಯುತ್ತಿದೆ? ಕೆಲವೊಂದು ಸಂಶಯಗಳು ಹಾಗೆ ಉಳಿದಿವೆ....

ಅಧ್ಯಕ್ಷರು: ಇಲ್ಲ, ಇಲ್ಲ.

ಗೊಂದಲ

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆ ಅದನ್ನು ಕೇಳಿದ್ದೇನೆ. ಸರ್ಕಾರದವರು ಉತ್ತರ ಹೇಳಿದ್ದಾರೆ. ನಾನು ನನ್ನ ರೂಲಿಂಗ್‌ನ್ನು ಕಾಯ್ದಿರಿಸಿದ್ದೇನೆ. ನನ್ನ ರೂಲಿಂಗ್‌ನ್ನು ನಾನು ಕಾಯ್ದಿರಿಸಿದ್ದೇನೆ.

ಗೊಂದಲ

Don't take down. Don't take down. xxx ನನ್ನ ರೂಲಿಂಗ್‌ನ್ನು ನಾನು ಕಾಯ್ದಿರಿಸಿದ್ದೇನೆ. Don't take down. ಯಾವುದಕ್ಕೂ ಒಂದು ಲಿಮಿಟ್ ಇರಬೇಕು. ತಾವು ಮಾತನಾಡಬೇಡಿ. ನನ್ನ ರೂಲಿಂಗ್‌ನ್ನು ಕಾಯ್ದಿರಿಸಿದ್ದೇನೆ. ಎರಡೂ ಕಡೆ ನಾನು ಕೇಳಿ ನನ್ನ ರೂಲಿಂಗ್‌ನ್ನು ನಾನು ಕಾಯ್ದಿರಿಸಿದ್ದೇನೆ Don't take down anything. Don't take down.

ಗೊಂದಲ

Mr. Speaker: Don't take down. This not a discussion. I have reserved my ruling. I have reserved my ruling. You must not talk now.

(INTERRUPTIONS)

MR. Speaker: Don't take down. Don't take down. And it won't go to Press also. Because, ರೂಲಿಂಗ್ ಕೊಟ್ಟು ಆದ ಮೇಲೆ ಪ್ರೆಸ್‌ಗೆ ಏನೂ ಹೋಗುವುದಿಲ್ಲ. ಅವರು ಏನೇ ಮಾತನಾಡಲಿ. Don't take down. Don't take down.

ಗೊಂದಲ

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಸುಮ್ಮನೆ ಇರಬೇಕು. ದಯವಿಟ್ಟು ಸುಮ್ಮನೆ ಇರಬೇಕು. ತಾವು ದಯವಿಟ್ಟು ಸುಮ್ಮನೆ ಇರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ವಿನಂತಿ. ತಾವು ದಯವಿಟ್ಟು ಸುಮ್ಮನೆ ಇರಬೇಕು. ನಾನು ರೂಲಿಂಗ್ ಕೊಟ್ಟು ಆಗಿದೆ. ನನ್ನ ರೂಲಿಂಗ್‌ನ್ನು ನಾನು ಕಾಯ್ದಿರಿಸಿದ್ದೇನೆ. ನಾನು ಎರಡೂ ಕಡೆ ಕೇಳಿದ್ದೇನೆ. ತಾವು ನಿಲ್ಲಿಸುತ್ತೀರೋ ಇಲ್ಲವೋ? ನಮ್ಮ ಮುಂದೆ ಅಜಂಡಾ ಇದೆ ನಾನು ಆ ಅಜೆಂಡಾವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ತಮಗೆ ಮೊದಲೇ ಹೇಳುತ್ತಿದ್ದೇನೆ. ಅಜೆಂಡಾದಲ್ಲಿರುವ ಸಬ್ಜೆಕ್ಟ್‌ಗಳನ್ನು ನಾನು ತೆಗೆದುಕೊಳ್ಳಬೇಕಾಗುತ್ತದೆ. ನಾನು ನನ್ನ ರೂಲಿಂಗ್‌ನ್ನು ಕಾಯ್ದಿರಿಸಿದ್ದೇನೆಂದು ಹೇಳಿದ ಮೇಲೂ ತಾವು ಮಾತನಾಡಲು ಹಕ್ಕು ಇಲ್ಲ. ನೀವು ಮಾತನಾಡುವುದಕ್ಕೆ
ಆಗುದಿಲ್ಲ. ನಾನು ಅಜೆಂಡಾ ಪ್ರಕಾರ ಮುಂದಿನ ಸಬ್ಜೆಕ್ಟ್‌ಗಳನ್ನು ಕರೆಯುತ್ತೇನೆ. ಮಾನ್ಯ ಆರ್.ವಿ. ದೇಶಪಾಂಡೆಯವರೇ ಈಗ ನಾನು ವಿಧೇಯಕಗಳನ್ನು ತೆಗೆದುಕೊಳ್ಳುತ್ತೇನೆ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ವಿಧೇಯಕವನ್ನು ಮಂಡಿಸಿ.

ಗೊಂದಲ

2. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(i) 2 ಕರ್ನಾಟಕ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ವಿಧೇಯಕ, 2003

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಆರ್.ವಿ.ದೇಶಪಾಂಡೆ: (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೇ, 2003ರ ಕರ್ನಾಟಕ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

(XXX, ಸನ್ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಿರುವುದಿಲ್ಲ.)